ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 12 ಮಾರ್ಚ್ 20, 2005 ಬೆಲೆ ರೂ. 3.00



ಕರ್ನಾಟಕ ಬಜೆಟ್

ಹೂರಣವಿಲ್ಲದ ಮಾತಿನ ತೋರಣ



ಬಿಹಾರ : ಸೆಕ್ಯುಲರ್ ಶಕ್ತಿಗಳು ಕಲಿಯಬೇಕಾದ ಪಾಠ


ಪೇಟೆಂಟ್ ಪೆಡಂಭೂತ



- ಪಾಕ್ ಭೇಟಿ - ಡೈರಿ
- ಮಹಿಳಾ ವಿಮೋಚನೆ - ಒಂದು ಚಿಂತನೆ
- ಪ್ರೀತಿ ಹಂಚೋಣ ಬನ್ನಿ

ಭಾರತದಲ್ಲಿ ಚವೇಜ್

ಈಗ ಯಕ್ಷಗಾನದಲ್ಲಿ ಜಾಗತೀಕರಣ !



ಜಾಗತೀಕರಣ ಯುಗದಲ್ಲಿ ಸಮಾಜವಾದ

ಎರಡನೇಯದಾಗಿ, ಕೇಂದ್ರೀಯ ಪ್ರಜಾಪ್ರಭುತ್ವ, ಪಕ್ಷದ ಆಂತರಿಕ ಪ್ರಜಾಪ್ರಭುತ್ವ ಇವುಗಳನ್ನು ಜಾರಿಗೊಳಿಸುವಾಗ ಹಾದಿತಪ್ಪಿದರೆ, ಕೇಂದ್ರೀಯ ಶಕ್ತಿಯನ್ನಷ್ಟೇ ಬಲಗೊಳಿಸಲಾಯಿತು. ಇದು ಪ್ರಜಾಪ್ರಭುತ್ವಕ್ಕೆ ವಿರೋಧಿಯಾದ ಅಧಿಕಾರಶಾಹಿಯು ಬೆಳೆಯಲು ಕಾರಣವಾಯಿತು. ಸಮಾಜವಾದಕ್ಕೆ ದೂರವಾದಂಥಹ ಭ್ರಷ್ಟಾಚಾರ ಮತ್ತು ಕಳಸಂತೆ ವ್ಯಾಪಾರಗಳು ಕಂಡುಬಂದವು. ಉದಾಹರಣೆಗೆ, ಆಳುವ ಕಮ್ಯೂನಿಸ್ಟ್ ಪಕ್ಷದ ನಾಯಕರುಗಳಿಗೆ ವಿಶೇಷ ವಿನಾಯಿತಿ ನೀಡಲಾಯಿತು. ಕೊನೆಗೆ ಇದು ಕ್ರಾಂತಿಕಾರಿ ತತ್ವದ ಚೈತನ್ಯತೆಯನ್ನು ಕಿತ್ತೊಗೆದು ನಾಯಕತ್ವದಿಂದ ಜನಸಮುದಾಯ ಮತ್ತು ಪಕ್ಷದ ಸದಸ್ಯರನ್ನು ದೂರ ಮಾಡಲಾಯಿತು.

ಸಮಾಜವಾದ ಮತ್ತು ಸಮಾಜವಾದಿ ಪ್ರಜಾಪ್ರಭುತ್ವದಲ್ಲಿ ರಾಷ್ಟ್ರದ ವರ್ಗಗುಣದ ಪರಿಗಣನೆಯಲ್ಲಿ ಮಾಡಿದ ತಪ್ಪುಗಳನ್ನು ಸರಿಪಡಿಸದೆ ಗೊರ್ಬಚೆವ್ ನಾಯಕತ್ವವು ದುಡಿಯುವ ವರ್ಗ ಮತ್ತು ಕೇಂದ್ರೀಯ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ನಾಶ ಮಾಡಿತು. ಇದು ಕ್ರಾಂತಿಯ ನಿಶಸ್ತ್ರೀಕರಣವಾಗಿ ಸಮಾಜವಾದವನ್ನು ಕಿತ್ತೆಸೆಯುವಂತೆ ಮಾಡಿತು.

ಮೂರನೆಯದಾಗಿ, ಸಮಾಜವಾದಿ ಆರ್ಥಿಕ ರಚನೆಯಲ್ಲಿ ನ್ಯೂನ್ಯತೆಯಿತ್ತು ಉತ್ಪಾದನಾ ಸಾಧನಗಳು ಮತ್ತು ಕೇಂದ್ರೀಕೃತ ರಾಜ್ಯ ಯೋಜನೆಗಳಡಿ ಉತ್ಪಾದನಾ ಶಕ್ತಿಗಳು ಅಭಿವೃದ್ಧಿ ಹೊಂದಿದಂತೆ ಆರ್ಥಿಕ ನಿರ್ವಹಣೆಯ ವಿಧಾನಗಳೂ ಸಹ ನಿರಂತರವಾಗಿ ಬದಲಾಗಬೇಕು. ಇಲ್ಲದಿದ್ದಲ್ಲಿ ಸ್ಥಗಿತತೆ ಪ್ರತ್ಯಕ್ಷವಾಗುತ್ತದೆ. ಉದಾಹರಣೆಗೆ, ದೊರೆಯುವ ಎಲ್ಲಾ ಭೂಮಿಯನ್ನು ಉಪಯೋಗಿಸಿಕೊಂಡ ಮೇಲೆ ಹೆಚ್ಚಿನ ಉತ್ಪಾದಕತೆಗಾಗಿ ಉತ್ಪಾದಕತಾ ವಿಧಾನಗಳನ್ನು ಪರಿಷ್ಕರಿಸಬೇಕು. ಇದು ಸೋವಿಯತ್‌ನಲ್ಲಾದ 70 ರ ಮತ್ತು 80 ರ ಬೆಳವಣಿಗೆ. ಆದ್ದರಿಂದ ಆರ್ಥಿಕ ಸ್ಥಗಿತತೆ ಕಂಡುಬಂತು. ಹೀಗೆ **ಪರಿಷ್ಕರಣವಾದದ ಮತ್ತು ಚಕ್ರಾಧಿಪತ್ಯದ ಆಕ್ರಮಣ ಮಳ್ಳಾಗಿ ಗೊರ್ಬಚೆವ್ ಮತ್ತು ಉದಾರವಾದಿ ನಾಯಕತ್ವವು ಮೂಡಿಬಂದಿತು.**

ನಾಲ್ಕನೆಯದಾಗಿ, ಸಮಾಜವಾದದಡಿ ಜನರ ಸಾಮೂಹಿಕವಾದ ಸೈದ್ಧಾಂತಿಕ ಪ್ರಜ್ಞೆಯನ್ನು ಬಲಗೊಳಿಸುವ ಕಾರ್ಯದಲ್ಲಿ ವಿಫಲವಾದದ್ದು ನಿರಂತರವಾಗಿ ಸೈದ್ಧಾಂತಿಕ ದೃಢತೆಯನ್ನು ಕಮ್ಯೂನಿಸ್ಟ್ ಪಕ್ಷ ಜನರ ಸಾಮೂಹಿಕ ಪ್ರಜ್ಞೆಯನ್ನು ಉತ್ತಮ ಪಡಿಸಲು ಕೆಲಸ ಮಾಡದಿದ್ದಂತಹ ಸಂದರ್ಭದಲ್ಲಿ ಕ್ರಾಂತಿ-ವಿರೋಧಿ, ಶಕ್ತಿಗಳು ಆಂತರಿಕವಾಗಿ ಮತ್ತು ಬಾಹ್ಯವಾಗಿ ಸಮಾಜವಾದವನ್ನು ನಾಶಗೊಳಿಸುವಲ್ಲಿ ಯಶಸ್ವಿಯಾದವು.

ಆದ್ದರಿಂದ ಸಮಾಜವಾದಕ್ಕೆ ಹಿನ್ನಡೆಯುಂಟಾಗಿರುವುದು ಮಾರ್ಕ್ಸ್‌ವಾದಿ, ಲೆನಿನ್‌ವಾದಿ ಮೂಲ ತತ್ವಗಳ ಅಸಮರ್ಪಕತೆ ಯಿಂದಲ್ಲ. ಹಿನ್ನಡೆಯುಂಟಾಗಿರುವುದು ಮಾರ್ಕ್ಸ್‌ವಾದಿ-ಲೆನಿನ್‌ವಾದದ ವೈಜ್ಞಾನಿಕ ಮತ್ತು ಕ್ರಾಂತಿಕಾರಿ ಮೂಲತತ್ವದಿಂದ ದೂರ ಸರಿದಿರುವುದರಿಂದ ಆಗಿದೆ. ವಿಶ್ವ ಬಂಡವಾಳಶಾಹಿ ಮತ್ತು ಸಮಾಜವಾದಗಳ ಬಲಾಬಲ ಲೆಕ್ಕಾಚಾರವನ್ನು ತಪ್ಪಾಗಿ ಅರ್ಥೈಸಿರುವುದರಿಂದ ಆಗಿದೆ. ಸೃಜನಶೀಲ ವಿಜ್ಞಾನವಾದ ಮಾರ್ಕ್ಸ್‌ವಾದವನ್ನು ಶಾಸ್ತ್ರಾಂಧಂತೆಯಿಂದ ಮತ್ತು ಯಾಂತ್ರಿಕವಾಗಿ ಅರ್ಥೈಸಿರುವುದರಿಂದ ಆಗಿದೆ. ಪ್ರಧಾನವಾಗಿ ಸಮಾಜವಾದಿ ರಚನೆಯ ಹಾದಿಯಲ್ಲಿನ ಪ್ರಧಾನ ನ್ಯೂನ್ಯತೆಗಳಿಂದಾಗಿದೆ.

ಸಂದರ್ಶಕರು : ಪ್ರಸಕ್ತ ಜಾಗತೀಕರಣ ಯುಗದಲ್ಲಿ ಬಂಡವಾಳಶಾಹಿಯ ಸವಾಲುಗಳನ್ನು ಇಂದಿನ ಸಮಾಜವಾದಿ ರಾಷ್ಟ್ರಗಳು ಹೇಗೆ ಎದುರಿಸುತ್ತಿವೆ?

ಕಾಂ. ಸೀತಾರಾಂ : ಇಂದಿನ ಸವಾಲುಗಳನ್ನು ಎದುರಿಸಲು ಸಮಾಜವಾದಿ ರಾಷ್ಟ್ರಗಳು ಸುಧಾರಣಾ ವಿಧಾನವನ್ನು ಅನುಸರಿಸುತ್ತಿವೆ. ಅಂತರರಾಷ್ಟ್ರೀಯ ಮಟ್ಟದಲ್ಲಿಂದು ಬಲಾಬಲ ಶಕ್ತಿಯ ಹೊಂದಾಣಿಕೆ ಬಂಡವಾಳ ಮತ್ತು ತಾಂತ್ರಿಕತೆ ಸಂಪೂರ್ಣ ಏಕಸ್ವಾಮ್ಯದಿಂದಾಗಿ ಬಂಡವಾಳಶಾಹಿ ಪರವಿರುವುದರಿಂದ ಸಮಾಜವಾದಿ ರಾಷ್ಟ್ರಗಳು ಉತ್ಪಾದನಾ ಶಕ್ತಿಗಳನ್ನು ಅಭಿವೃದ್ಧಿಪಡಿಸಿ ಸಮಾಜವಾದವನ್ನು ಬಲಗೊಳಿಸಲು ಪ್ರಯತ್ನಿಸುತ್ತಿವೆ. ಈ ಬೆಳವಣಿಗೆಯು ಹಲವು ಚರ್ಚೆಗೆ ಗ್ರಾಸವಾಗಿದ್ದು, ಇಂತಹ ಸುಧಾರಣೆಯು ಚೀನಾದಂತಹ ಕೆಲವು ರಾಷ್ಟ್ರಗಳಲ್ಲಿ ಶೀಘ್ರಗತಿಯ ಆರ್ಥಿಕ ಬೆಳವಣಿಗೆಗೆ ಕಾರಣವಾಗಿದ್ದರೆ ಮತ್ತೆ ಹಲವು ರಾಷ್ಟ್ರಗಳಲ್ಲಿ ಸಮಸ್ಯೆಗಳನ್ನು ಹುಟ್ಟುಹಾಕಿದೆ.

ಚೀನಾ ಕೈಗೊಂಡಿರುವ ಸುಧಾರಣಾ ಪ್ರಕ್ರಿಯೆಗಳಲ್ಲಿ ಸಮಾಜವಾದಿ - ವಿರೋಧಿ ಗುಣಗಳು ಒಳತೂರುವ ಅಪಾಯವಿದ್ದರೂ ಸಹ ಅಂತಿಮವಾಗಿ ಬಂಡವಾಳಶಾಹಿ ವಿರುದ್ಧ ಸಮಾಜವಾದವು ಜಯಗಳಿಸುವುದರ ಮೇಲೆ ಅದರ ಯಶಸ್ಸು ನಿಂತಿದೆ.



ಸೀತಾರಾಂ ಯೆಚೂರಿಯವರ ಸಂದರ್ಶನದ ಕೊನೆ ಕಂತು

ರಷ್ಯಾ ಕ್ರಾಂತಿಯ ನಂತರ, ಹಿಂದುಳಿದ ಪೂರ್ವ ಯುರೋಪ್ ರಾಷ್ಟ್ರಗಳು, ಅರೆಪಾಳೇಗಾರಿ, ಅರೆ-ವಸಾಹತುಶಾಹಿ ಚೀನಾ, ಉತ್ತರಕೋರಿಯಾ, ವಿಯೆಟ್ನಾಂ ಮತ್ತು ಕ್ಯೂಬಾ - ಈ ಎಲ್ಲ ರಾಷ್ಟ್ರಗಳು ಸಮಾಜವಾದವನ್ನು ಅನುಸರಿಸಿದರೂ ಹಿಂದುಳಿದಿರುವ ಆರ್ಥಿಕ ವ್ಯವಸ್ಥೆ ಮತ್ತು ಕೆಳಮಟ್ಟದ ಉತ್ಪಾದನಾ ಶಕ್ತಿಗಳು ತಾನೇ ತಾನಾಗಿ ಉನ್ನತ ಮಟ್ಟದ (ಬಂಡವಾಳಶಾಹಿಗಿಂತ) ಸಮಾಜವಾದಿ ಉತ್ಪಾದನಾ ವ್ಯವಸ್ಥೆಯಾಗಿ ಪರಿವರ್ತನೆ ಹೊಂದಲಾಗುವುದಿಲ್ಲ. ಸಮಾಜವಾದಿ ವ್ಯವಸ್ಥೆಯಲ್ಲಿ ಉತ್ಪಾದನಾ ಶಕ್ತಿಗಳನ್ನು ಶೀಘ್ರಗತಿಯಲ್ಲಿ ಅಭಿವೃದ್ಧಿಪಡಿಸುವುದು ಆಯಾಯ ರಾಷ್ಟ್ರಗಳ ಮೂಲ ಸನ್ನಿವೇಶದ ವಿಶ್ಲೇಷಣೆಯನ್ನವಲಂಬಿಸಿರುತ್ತದೆ.

ಅಕ್ಟೋಬರ್ ಕ್ರಾಂತಿಯ 4ನೇ ವಾರ್ಷಿಕೋತ್ಸವದಲ್ಲಿ ಲೆನಿನ್‌ರವರು ಈ ರೀತಿ ತಿಳಿಸಿದ್ದಾರೆ. "ಉತ್ಸಾಹದ ಅಲೆಯ ಮೇಲೆ ರಷ್ಯಾ ಜನತೆ ರಾಜಕೀಯ ಮತ್ತು ಮಿಲಿಟರಿ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಯಶಸ್ವಿಯಾಯಿತು. ಅದೇ ಉತ್ಸಾಹದಲೆಯ ಮೇಲೆ ಆರ್ಥಿಕ ಕಾರ್ಯವನ್ನು ನಿರ್ವಹಿಸಬಹುದೆಂದು ನಾವು ನಿರೀಕ್ಷಿಸಿದ್ದೇವು. ಆದರೆ ಅನುಭವ ನಮ್ಮ ನಿರೀಕ್ಷೆ ತಪ್ಪೆಂದು ಸಾಬೀತುಪಡಿಸಿದೆ. ಹಲವು ಹಂತಗಳ ಪರಿವರ್ತನಾ ಅವಧಿಯು - ಬಂಡವಾಳಶಾಹಿ ರಾಷ್ಟ್ರದಿಂದ ಸಮಾಜವಾದ ವ್ಯವಸ್ಥೆಗೆ ಮುನ್ನಡೆಯಲು - ಅವಶ್ಯಕತೆಯಿದೆ. ಬರೀ ಉತ್ಸಾಹದಿಂದ ಮಾತ್ರವಲ್ಲದೆ ಮಹಾನ್ ಕ್ರಾಂತಿಯಿಂದ, ವೈಯಕ್ತಿಕ ಆಸಕ್ತಿಯಿಂದ, ವ್ಯಕ್ತಿಗತ ವಿನಾಯಿತಿ ಮತ್ತು ವ್ಯಾಪಾರ ತತ್ವಗಳಿಂದ ಈ ಸಣ್ಣ - ರೈತರ ದೇಶವನ್ನು ರಾಷ್ಟ್ರೀಯ ಬಂಡವಾಳಶಾಹಿಯ ಮುಖೇನಾ ಸಮಾಜವಾದಿಯನ್ನಾಗಿಸಬೇಕಿದೆ. ಇಲ್ಲದಿದ್ದಲ್ಲಿ ಕಮ್ಯೂನಿಸಮ್‌ನತ್ತ ಸಾಗಿ ಗುರಿ ಮುಟ್ಟಲಾಗುವುದಿಲ್ಲ. ಸಮಾಜವಾದಕ್ಕೆ ಹೋಲಿಸಿದರೆ ಬಂಡವಾಳಶಾಹಿಯು ಸಂಕಷ್ಟ, ಬಂಡವಾಳಶಾಹಿಗೆ ಹೋಲಿಸಿದರೆ ಮಧ್ಯ ಯುಗವು ಸಂಕಷ್ಟ. ಆದ್ದರಿಂದ ಸಣ್ಣ ಬಂಡವಾಳ ಶಾಹಿಯನ್ನು ಪಯೋಗಿಸಿಕೊಂಡು ಸಮಾಜವಾದದತ್ತ ಹಾದಿ ಸವೆಸಬೇಕು. ಇದರರ್ಥ ಬಂಡವಾಳಶಾಹಿಯನ್ನು ಮರಳಿ ತರುವುದಲ್ಲ" ಎಂದು ವಿವರವಾಗಿ ತಿಳಿಸಿದ್ದಾರೆ. ಕೆಲವು ವ್ಯಾಪ್ತಿಯಲ್ಲಿ ಬಂಡವಾಳಶಾಹಿಯನ್ನು ನಾವು ಪುನರುಜ್ಜೀವನಗೊಳಿಸುತ್ತೇವೆ. ಇದನ್ನು ಮುಚ್ಚು ಮರೆಯಿಲ್ಲದೆ ಪಾರದರ್ಶಕವಾಗಿ ಮಾಡುತ್ತೇವೆ. ಇದೇ ರಾಷ್ಟ್ರೀಯ ಬಂಡವಾಳಶಾಹಿ ಅಧಿಕಾರವು ಬಂಡವಾಳ ಶಾಹಿಯ ನಿಯಂತ್ರಣದಲ್ಲಿರು ವಂತಹ ಕಡೆ ಇರುವ ರಾಷ್ಟ್ರೀಯ ಬಂಡವಾಳಶಾಹಿಗೂ ಮತ್ತು ಅಧಿಕಾರವು ಶ್ರಮಜೀವಿ ವರ್ಗದ ನಿಯಂತ್ರಣದಲ್ಲಿರುವಂತಹ ಕಡೆ ಇರುವ ರಾಷ್ಟ್ರೀಯ ಬಂಡವಾಳಶಾಹಿಗೂ ಹಲವು ವ್ಯತ್ಯಾಸವಿದೆ. ಬಂಡವಾಳಶಾಹಿ ರಾಷ್ಟ್ರಗಳಲ್ಲಿ, ರಾಷ್ಟ್ರೀಯ ಬಂಡವಾಳ ಶಾಹಿಯನ್ನು ಬಂಡವಾಳಶಾಹಿ ವರ್ಗದ ಹಿತಾಸಕ್ತಿಗಾಗಿ ಬಳಸಲಾಗುತ್ತದೆ ಮತ್ತು ಶ್ರಮಜೀವಿವರ್ಗವನ್ನು ಶೋಷಿಸಲು ಉಪಯೋಗಿಸಲಾಗುತ್ತದೆ.

ಆದರೆ ಶ್ರಮಜೀವಿ ರಾಷ್ಟ್ರಗಳಲ್ಲಿ ಇದಕ್ಕೆ ಸಂಪೂರ್ಣ ತದ್ವಿರುದ್ಧ ವಿದೇಶಿ ಬಂಡವಾಳಕ್ಕೆ ಮತ್ತು ವಿದೇಶಿ ಬಂಡವಾಳಶಾಹಿಗೆ ವಿನಾಯಿತಿ ನೀಡಬೇಕೆಂದು ಹೇಳುತ್ತೇವೆ ನಿಜ. ರಾಷ್ಟ್ರೀಯ ಸಾರ್ವಭೌಮತೆಗೆ ಕಿಂಚಿತ್ತೂ ಧಕ್ಕೆಯಾಗದಂತೆ ನಮ್ಮ ಗಣಿಗಳು, ಅರಣ್ಯ ಮತ್ತು ಎಣ್ಣೆ ಬಾವಿಗಳನ್ನು ವಿದೇಶಿ ಬಂಡವಾಳಶಾಹಿಗೆ ಭೋಗ್ಯಕ್ಕೆ ನೀಡುತ್ತೇವಾದರೂ, ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ವಿನಿಮಯವಾಗಿ ಕಚ್ಚಾವಸ್ತುಗಳು, ತಂತ್ರಜ್ಞಾನ, ಇತ್ಯಾದಿಗಳನ್ನು ಪಡೆಯುತ್ತೇವೆ. ಚೀನಾದಲ್ಲಿ ಸುಧಾರಣೆಗಳಾಗುತ್ತಿರುವುದು ಲೆನಿನ್‌ರ ನಿಲುವೆಗಳ ಪ್ರತಿಬಿಂಬವೆನ್ನಬಹುದು. ಇಂದು ಚೀನಾದಲ್ಲಿ ಉತ್ಪಾದಕ ಶಕ್ತಿಗಳನ್ನು ಸಮಾಜವಾದ ದಡಿ ಬಲಿಷ್ಟಗೊಳಿಸಲಾಗುತ್ತಿದ್ದು, ಕೆಳಮಟ್ಟದ ಉತ್ಪಾದನಾ ಶಕ್ತಿಗಳಿಂದ ಸಮಾಜವಾದಿಯ ಉತ್ಪಾದನಾ ಸಂಬಂಧಗಳನ್ನು ಸಂರಕ್ಷಿಸಲು ಸಾಧ್ಯವಾಗುವುದಿಲ್ಲವೆಂದು ಮನಗಾಣಲಾಗಿದೆ. ಕೆಳಮಟ್ಟದ ಉತ್ಪಾದನಾ ಶಕ್ತಿಗಳು ದೀರ್ಘಾವಧಿಯವರೆಗೆ ಹಾಗೆಯೇ ಉಳಿದರೆ ಸಮಾಜವಾದದಡಿ ದಿನನಿತ್ಯ ವಿಸ್ತಾರವಾಗುತ್ತಿರುವ ಜನರ ಭೌತಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಳು ಮತ್ತು ಹಿಂದುಳಿದ ಉತ್ಪಾದನಾ ಶಕ್ತಿಗಳ ನಡುವೆ ಪ್ರಧಾನ ವೈರುಧ್ಯತೆ ಹುಟ್ಟಲು ಕಾರಣವಾಗುತ್ತದೆ. ಈ ವೈರುದ್ಯತೆಯನ್ನು ಅಳಿಸಿಹಾಕದಿದ್ದರೆ ಸಮಾಜವಾದಕ್ಕೆ ಅಪಾಯ ಒದಗುತ್ತದೆಂದು ಚೀನಾದ ಕಮ್ಯೂನಿಸ್ಟ್ ಪಕ್ಷ ಚೆನ್ನಾಗಿಯೇ ಅರ್ಥ ಮಾಡಿಕೊಂಡಿದೆ.

ಚೀನಾದಲ್ಲಿ ಕೆಳಹಂತದ ಮಟ್ಟದಲ್ಲಿದ್ದ ಉತ್ಪಾದನಾ ಶಕ್ತಿಗಳನ್ನು ಕ್ರಾಂತಿ ಸಮಯದಲ್ಲಿ ಅರೆ-ಪಾಳೆಯಗಾರಿ, ಅರೆ- ವಸಾಹತುಶಾಹಿಯಾಗಿದ್ದ ಆ ದೇಶದ ಬಲಿಷ್ಟ ಉತ್ಪಾದನಾ ಶಕ್ತಿಯನ್ನಾಗಿ ಹಂತಹಂತವಾಗಿ ಚೀನಾದ ಗುಣಗಳಿಗನು ಗುಣವಾಗಿ ಪರಿವರ್ತಿಸುತ್ತಿದೆ. ಇದರೊಡನೆ ಸಮಾಜವಾದಿ ಆರ್ಥಿಕ ಮಾರುಕಟ್ಟೆಯನ್ನು ಸದೃಢಗೊಳಿಸುತ್ತಿದ್ದು ಸರಕು ಆರ್ಥಿಕ ಮಾರುಕಟ್ಟೆಯನ್ನು ಸಮಾಜವಾದಿ ಸರ್ಕಾರದ ನಿಯಂತ್ರಣದಲ್ಲಿ ಅನುಸರಿಸುತ್ತಿದೆ. ಇದರಿಂದ ಸಾರ್ವಜನಿಕ ಮಾಲಿಕತ್ವ ಬಹುತೇಕ ಸರ್ಕಾರದ ನಿಯಂತ್ರಣದಲ್ಲಿದ್ದು ಖಾಸಗಿ ಆರ್ಥಿಕ ಮಾರುಕಟ್ಟೆಯ ಅಸಮಾನತೆಯನ್ನು ಕಿತ್ತೊಗೆದು ಶ್ರಮಜೀವಿ ವರ್ಗದ ಏಳಿಗೆಯನ್ನು ರಕ್ಷಿಸುತ್ತದೆ. ಇದರಿಂದಾಗಿ ಇತ್ತೀಚಿನ ದಶಕಗಳಲ್ಲಿ ಚೀನಾ ಅಭೂತಪೂರ್ವ ಅಭಿವೃದ್ಧಿ ಯಶಸ್ಸನ್ನು ಪಡೆದಿದೆ.

ಸಂದರ್ಶಕರು : ಚೀನಾದಲ್ಲಿ ಬೆಳೆಯುತ್ತಿರುವ ಅಸಮಾನತೆ ಮತ್ತು ಇತರೆ ಸಮಸ್ಯೆಗಳ ಬಗ್ಗೆ ಹೆಚ್ಚು ಕೇಳಿ ಬರುತ್ತಿದೆಯಲ್ಲ?

ಕಾಂ. ಸೀತಾರಾಂ: ಹೌದು, ಈ ರೀತಿಯ ಬೆಳವಣಿಗೆಯ ಹಾದಿಯಲ್ಲಿ ನಿರುದ್ಯೋಗ, ಅಸಮಾನತೆ ಮತ್ತು ಭ್ರಷ್ಟಾಚಾರವು ಬೆಳೆದಿದ್ದು, ಇದರ ನಿವಾರಣೆಗಾಗಿ ಕಮ್ಯೂನಿಸ್ಟ್ ಪಕ್ಷ ಕ್ರಮ ತೆಗೆದುಕೊಂಡಿದೆ. ಆದರೆ ಲೆನಿನ್‌ರವರು ತಿಳಿಸಿರುವಂತೆ ಬಂಡವಾಳಶಾಹಿ ವ್ಯವಸ್ಥೆಯು ಸಮಾಜವಾದಿ ವ್ಯವಸ್ಥೆಯಾಗಿ ಪರಿವರ್ತನೆಯಾಗುವ ಹಾದಿಯಲ್ಲಿ ಇಂತಹ ಎಲ್ಲ ಸವಾಲುಗಳನ್ನೆದುರಿಸಿ ಸದೃಢವಾಗಿ ಮತ್ತು ಬಲಿಷ್ಟವಾಗಿ ತಲೆ ಎತ್ತಿ ನಿಲ್ಲಬೇಕಾಗಿದೆ. ಚೀನಾ ಕೈಗೊಂಡಿರುವ ಸುಧಾರಣಾ ಪ್ರಕ್ರಿಯೆಗಳಲ್ಲಿ (ಚೀನಾದಲ್ಲಿ ಹೂಡಿರುವ ವಿದೇಶಿ ಬಂಡವಾಳ ಸಮಾಜವಾದಿ ವಿರೋಧಿಯಾಗಿದೆಯೇ ಹೊರತು ಸಮಾಜವಾದಿ ಪರವಾಗಿಲ್ಲ) ಸಮಾಜವಾದಿ - ವಿರೋಧಿ ಗುಣಗಳು ಒಳತೂರುವ ಅಪಾಯವಿದ್ದರೂ ಸಹ ಅಂತಿಮವಾಗಿ ಬಂಡವಾಳಶಾಹಿ ವಿರುದ್ಧ ಸಮಾಜವಾದವು ಜಯಗಳಿಸುವುದರ ಮೇಲೆ ಅದರ ಯಶಸ್ಸು ನಿಂತಿದೆ.

ವಿಶ್ವ ಬಹುಸಂಖ್ಯಾತ ಜನತೆಯ ಮೇಲೆ ಅಮೇರಿಕಾ ಭಯೋತ್ಪಾದನೆಯ ಹೆಸರಿನಲ್ಲಿ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಹಲವು ನೆಪವೊಡ್ಡಿ ಅಧಿಪತ್ಯ ಸಾಧಿಸಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಪ್ರಪಂಚದ ಸಮಸ್ಯೆಗಳಿಗೆ ಬಂಡವಾಳಶಾಹಿಯ ಹೊರತು ಬೇರಾವುದೇ ಪರ್ಯಾಯವಿಲ್ಲವೆಂದು ಬಂಡವಾಳಶಾಹಿ-ಪರ ಮಾಧ್ಯಮಗಳಲ್ಲಿ ಇನ್ನಿಲ್ಲದಂತೆ ತುತ್ತೂರಿ ಊದಲಾಗುತ್ತಿದೆ. ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಲು ಮಾನವ ಜನಾಂಗ ನೆಮ್ಮದಿಯ, ಭದ್ರತೆಯ ಜೀವನವನ್ನು ನಡೆಸಲು ಸಮಾಜವಾದವೊಂದೇ ಭವಿಷ್ಯ ನೀಡಲು ಸಾಧ್ಯ.

ಅನು : ಜಯ
ಕೃಪೆ : ಸ್ಟೂಡೆಂಟ್ ಸ್ಟಗಲ್

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಮಾರ್ಚ್ 20,2005**
  'ಇರಾಕ್ ನೆಲದಿಂದ ಅಮೇರಿಕಾ ತೊಲಗಲಿ' 2 ವರ್ಷಗಳ ಅಮೇರಿಕಾ ಆಕ್ರಮಣ ವಿರೋಧಿಸಿ ಯುದ್ಧವಿರೋಧಿ ರ್‍ಯಾಲಿಗಳು. ಬೆಂಗಳೂರಿನಲ್ಲಿ ಎಂ.ಜಿ.ರಸ್ತೆಯ ಮಹಾತ್ಮಾಗಾಂಧಿ ಪ್ರತಿಮೆ ಬಳಿಯಿಂದ ಮೆರವಣಿಗೆ - ಬೆಳಿಗ್ಗೆ 10.30 ಗಂಟೆಗೆ
- **ಮಾರ್ಚ್ 20-21,2005**
  ಬೆಂಗಳೂರು ಜಿಲ್ಲಾ ಡಿವೈಎಫ್ಐ ನ 'ಯುವಜನಶಿಬಿರ' - ಕೆಂಗೇರಿ. ಮುಖ್ಯ ಅತಿಥಿ - ಕಾಂ. ತಪಸ್ ಸಿನ್ಹಾ.
- **ಮಾರ್ಚ್ 22,2005**
  ಸಾರ್ವಜನಿಕ ವಲಯದ ಬ್ಯಾಂಕುಗಳ ಉದ್ದೇಶಿತ ವಿಲೀನದ ವಿರುದ್ಧ ಬ್ಯಾಂಕ್ ನೌಕರರ ಐಕ್ಯಮುಷ್ಕರ
- **ಮಾರ್ಚ್ 23,2005**
  ಭಗತ್‌ಸಿಂಗ್, ರಾಜಗುರು, ಸುಖದೇವ್ ಹುತಾತ್ಮದಿನ
- **ಮಾರ್ಚ್ 23,24-2005**
  ವೇತನ ಹೆಚ್ಚಳ ಇತ್ಯಾದಿ ಬೇಡಿಕೆಗಳಿಗೆ ಒತ್ತಾಯಿಸಿ ಸಾಮಾನ್ಯ ವಿಮೆ (ಜಿಐಸಿ ಇತ್ಯಾದಿ) ನೌಕರರ ಅಖಿಲ ಭಾರತ ಮುಷ್ಕರ
- **ಮಾರ್ಚ್ 31,2005**
  ಜೀವವಿಮಾ ನೌಕರರ 1 ದಿನದ ಮುಷ್ಕರ 2 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ವೇತನ ಹೆಚ್ಚಳಕ್ಕೆ ಒತ್ತಾಯಿಸಿ
- **ಏಪ್ರಿಲ್ 3,2005**
  ಡಿವೈಎಫ್ಐ ಬೆಳ್ಳಿಹಬ್ಬದ ಪ್ರಯುಕ್ತ ಬೆಂಗಳೂರಿನಲ್ಲಿ ರಕ್ತದಾನ ಶಿಬಿರ
- **ಏಪ್ರಿಲ್ 6 ರಿಂದ 11, 2005**
  ಸಿಪಿಐ(ಎಂ) ಅಖಿಲ ಭಾರತ ಅಧಿವೇಶನ ನವ ದೆಹಲಿ. 11 ರಂದು ಬೃಹತ್‌ರ್‍ಯಾಲಿ

ಕರ್ನಾಟಕ ಬಜೆಟ್ : ಹೂರಣವಿಲ್ಲದ ಮಾತಿನ ತೋರಣ

ಉದಾರೀಕರಣದ ಬೀಜಮಂತ್ರ ಜಪಿಸುತ್ತಾ, ವಿಶ್ವಬ್ಯಾಂಕ್‌ನ ನಿರ್ದೇಶನಗಳ ಜಾಂಗೆ ಬದ್ಧತೆ ತೋರುತ್ತಾ ಅಭಿವೃದ್ಧಿ ಹಾಗೂ ಜನಪರವಾದ ಬಜೆಟ್ ಕೊಡಲು ಸಾಧ್ಯವೇ? ಉಪಮುಖ್ಯಮಂತ್ರಿಗಳು ಒಂದು ಜನ(ಅ)ಪ್ರಿಯ ಕಸರತ್ತು - ಬಜೆಟ್‌ನತ್ತ ತಕ್ಷಣದ ಒಂದು ನೋಟ

ಮಾರ್ಚ್ 11 ರಂದು ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರು 2005-2006 ರ ಆಯ-ವ್ಯಯ ಮುಂಗಡ ಪತ್ರವನ್ನು ವಿಧಾನಸಭೆಯಲ್ಲಿ ಮಂಡಿಸಿದರು. ಇದು ಕಾಂಗ್ರೆಸ್ ಮತ್ತು ಜಾತ್ಯತೀತ ಜನತಾದಳ ಪಕ್ಷಗಳ ಮೈತ್ರಿಕೂಟದ ಸರ್ಕಾರದ ಎರಡನೆಯ ಬಜೆಟ್.

ಎಡಪಕ್ಷಗಳ ಒತ್ತಡದ ಪರಿಣಾಮವೂ ಇದ್ದ ಆದರೆ ಉದಾರೀಕರಣ ಬೀಜ-ಮಂತ್ರವನ್ನು ಬಿಟ್ಟುಕೊಡದ ಚಿದಂಬರಂರವರ ಕೇಂದ್ರದ ಬಜೆಟ್ ನೋಡಿದ್ದ ಜನಕ್ಕೆ ರಾಜ್ಯದ ಬಜೆಟ್ ಸಹ ವಿಭಿನ್ನ ಕಸರತ್ತುಗಳು ಇರಬಹುದು ಎಂದು ನಿರೀಕ್ಷಿಸಿದ್ದರು. ಇದೆಲ್ಲದಕ್ಕೂ ಹೆಚ್ಚಾಗಿ ರಾಜ್ಯದಲ್ಲಿ ಸತತ ಬಿಕ್ಕಟ್ಟನ್ನು ಎದುರಿಸುತ್ತಾ ಸಂಕಷ್ಟ ಅನುಭವಿಸುತ್ತಾ ಬಂದಿರುವ ಕೃಷಿ-ಕೈಗಾರಿಕಾ ರಂಗದ ರೈತ-ಕೂಲಿಕಾರ, ಕಾರ್ಮಿಕವರ್ಗವು ಪರಿಹಾರವನ್ನು, ಜೀವನದ ನಿರ್ವಹಣೆಯಲ್ಲಿ ಚೈತನ್ಯವನ್ನು ನಿರೀಕ್ಷಿಸಿದ್ದರು. ಈ ಬಜೆಟ್ ಏಕಾಏಕಿ ಆಘಾತ ತಂದಿಲ್ಲವಾದರೂ - ಸ್ವಲ್ಪ ಪರಿಹಾರ ಎನಿಸಿದರೂ ಮೂಲಭೂತವಾದ ಪ್ರಶ್ನೆಗಳು ಇತ್ಯರ್ಥಗೊಳ್ಳದೇ, ಸಮಸ್ಯೆಗಳ ಉಲ್ಬಣಕ್ಕೂ ಹಾದಿ ಮಾಡಿಕೊಡುವ ಸಂಭವಗಳು ಹೆಚ್ಚುಇವೆ.

ಈ ಬಜೆಟ್‌ನ ಒಟ್ಟು ಮೊತ್ತ 34,592.06 ಕೋಟಿ ರೂಪಾಯಿಗಳ ಗಾತ್ರ ಹೊಂದಿದೆ. ರಾಜ್ಯ ತೆರಿಗೆ ಆದಾಯದಿಂದ 52 ಪೈಸೆ, ಸಾಲದಿಂದ 17 ಪೈಸೆ, ಕೇಂದ್ರದ ಅನುದಾನ 8 ಪೈಸೆ, ರಾಜ್ಯ ತೆರಿಗೆಯೇತರ ರಾಜಸ್ವದಿಂದ 11 ಪೈಸೆ, ಕೇಂದ್ರ ತೆರಿಗೆ ಪಾಲಿನಿಂದ 10 ಪೈಸೆ, ಸಾರ್ವಜನಿಕ ಲೆಕ್ಕ ನಿವ್ವಳ 2 ಪೈಸೆ, ಹೀಗೆ ಜಮೆಯಾಗುತ್ತದೆ. ಅದರಲ್ಲಿ ವೆಚ್ಚವು ಸಾಮಾನ್ಯ ಸೇವೆಗಳಿಗೆ 28 ಪೈಸೆ, ಸಾಮಾಜಿಕ ಇತರೆ ಸೇವೆಗೆ 4 ಪೈಸೆ, ಆರೋಗ್ಯ 4 ಪೈಸೆ, ಸಾಲ ತೀರಿಕೆಗೆ 14 ಪೈಸೆ, ಕೃಷಿ-7, ಶಿಕ್ಷಣ,ಕ್ರೀಡೆ, ಕಲೆ, ಸಂಸ್ಕೃತಿ 13 ಪೈಸೆ, ಸಮಾಜ ಕಲ್ಯಾಣ 4 ಪೈಸೆ, ಇತರೆ ಆರ್ಥಿಕ ವೆಚ್ಚ 12, ಗ್ರಾಮೀಣ ಅಭಿವೃದ್ಧಿ 3, ನೀರು-ನೈರ್ಮಲ್ಯ 2, ನೀರಾವರಿ 9 ಪೈಸೆ - ಇದು ಯೋಜನೆ-ಯೋಜನೇತರ ವೆಚ್ಚಗಳಲ್ಲಿನ ಭಾಗ.

ಈ ಲೆಕ್ಕಾಚಾರಗಳನ್ನು ಸರಿದೂಗಿಸಿದ ಬಳಿಕ ಕೊರತೆ ಇಲ್ಲದ ಆದರೆ 49.57 ಕೋಟಿ ರೂಪಾಯಿಗಳ ಮಿಗುತಾಯದ ಬಜೆಟ್ ಎಂಬುದು ಆರ್ಥಿಕ ಸಚಿವರೂ ಆಗಿರುವ ಸಿದ್ದರಾಮಯ್ಯನವರ ವಿಶೇಷ ವ್ಯಾಖ್ಯಾನ, ಕಳೆದ ಬಾರಿಯೂ ಮಿಗುತಾಯದ ಬಜೆಟ್ ಮಂಡಿಸಲಾಗಿತ್ತು.

ರಾಜ್ಯ ಕಳೆದ ವರುಷ ಶೇ 11.7 ಅಭಿವೃದ್ಧಿ ಸಾಧಿಸಿದೆ ಎನ್ನುತ್ತಾರೆ ಸಚಿವರು. ಬಹಳ ಮುಖ್ಯ ವಿಷಯವೆಂದರೆ ಸರ್ಕಾರದ ಬೊಕ್ಕಸಕ್ಕೆ ಹಣ ಎಲ್ಲೆಲ್ಲಿಂದ ಬರುತ್ತಿದೆ? ಪ್ರಾಥಮಿಕ ವಲಯವೆಂದೇ ಗುರುತಿಸಲಾಗುತ್ತಿರುವ ಕೃಷಿರಂಗದಿಂದ ಕಳೆದ ವರುಷ ಶೇ 11.2 ಪ್ರಮಾಣದಲ್ಲಿ ವೃದ್ಧಿಯಾಗಿದ್ದರೆ 2005-06 ರಲ್ಲಿ ಶೇ 18.7 ನಿರೀಕ್ಷಿಸಲಾಗಿದೆ. ದ್ವಿತೀಯ ವಲಯವಾಗಿರುವ ಕೈಗಾರಿಕಾ ರಂಗದಿಂದ ಶೇ 28.3, ಪೂರಕವಲಯ(ಸೇವಾಕ್ಷೇತ್ರ....) ದಿಪಾಲು ಶೇ 53 ಎಂದು ಅಂದಾಜು ಮಾಡಲಾಗಿದೆ. ಪೂರಕವಲಯ ಎಂದರೆ ಐ.ಟಿ., ಬಿ.ಟಿ., ಬಿಪಿಓ ಕ್ಷೇತ್ರಗಳೇ ಪ್ರಧಾನ ಪಾಲುದಾರಿಕೆಯಾಗಿದ್ದು ಶೇ 22.5 ರ ಗಮನಾರ್ಹ ವೃದ್ಧಿ ಆಗುವುದನ್ನು ಗುರುತಿಸಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮೂಲಭೂತ ವಲಯಗಳಾದ ಕೃಷಿ-ಕೈಗಾರಿಕೆ ವಲಯಗಳಿಂದ ಪೂರಕ ಸೇವಾ ವಲಯದಿಂದಲೇ ಹೆಚ್ಚಿನ ಅಭಿವೃದ್ಧಿ ದರವನ್ನು ಹೊಂದಿರುವುದು. ಈ ಸ್ಥಿತಿಯನ್ನು ಗಮನಿಸಿರುವ ಸಚಿವರು ಉತ್ಪಾದನಾ ವಲಯದ ಬೆಳವಣಿಗೆ ದರವನ್ನು ಕಾಪಾಡಿಕೊಳ್ಳುವ ಎಚ್ಚರಿಕೆ ಇರಬೇಕು ಎನ್ನುತ್ತಾರೆ. ಆದರೆ ಬಜೆಟ್‌ನ ಪ್ರಸ್ತಾಪಗಳು ಈ ಎಚ್ಚರವನ್ನು ಕಾಯುತ್ತವೆಯೇ? ಒಂದು ವೇಳೆ ಅಮೆರಿಕಾವನ್ನೇ ಆಧರಿಸಿರುವ ಸೇವಾವಲಯವು ಏರುಪೇರಾದರೆ?


ಸಮಾನತೆಯ ಸಮಾಜ-ಚೈತನ್ಯಶೀಲ ಕರ್ನಾಟಕ ತಮ್ಮ ಗುರಿ ಎಂದು ಘೋಷಿಸಿರುವ ಸಿದ್ದರಾಮಯ್ಯನವರು ದೂರದಿಗಂತದಲ್ಲಿ ಹೊಂಗಿರಣಗಳು ಕಾಣುತ್ತಿವೆ ಎಂದಿದ್ದಾರೆ. ಜಾಗತೀಕರಣ-ಉದಾರೀಕರಣ ಧಾಳಿಗಳ ಮುಂದುವರಿಕೆ, ವಿಶ್ವಬ್ಯಾಂಕ್, ಐಎಂಎಫ್ ನಂತಹ ವಿದೇಶಿ ಹಣಕಾಸು ಸಂಸ್ಥೆಗಳ ಸಾಲ ಶರತ್ತುಗಳ ಒತ್ತಡದ ನಡುವೆ ಇದನ್ನು ಸಾಧಿಸಲಾದೀತೆ? ಆಶಯಗಳು ಕಾರ್ಯಸಾಧುವಾಗಲೇ ಅಡ್ಡಿಗಳು ಹಲವಾರು. ಕರ್ನಾಟಕವೂ ಒಳಗೊಂಡು ಅನೇಕ ರಾಜ್ಯಗಳೂ ಆರ್ಥಿಕ ಸಂಪನ್ಮೂಲದ ಕೊರತೆಯನ್ನು ತೀವ್ರವಾಗಿ ಅನುಭವಿಸುತ್ತಿವೆ.

ಇದರಲ್ಲಿ ಮುಖ್ಯವಾಗಿ ರಾಜ್ಯಗಳಿಗೆ ಸಿಗಬೇಕಾದ ಹೆಚ್ಚಿನ ಪಾಲು ಕೇಂದ್ರದಿಂದ ಸಿಗುತ್ತಿಲ್ಲ. ಇಲ್ಲಿ ಕೇಂದ್ರ-ರಾಜ್ಯಗಳ ನಡುವಿನ ಸಂಬಂಧಗಳದ್ದೇ ಪ್ರಮುಖ ತೊಡಕಿದೆ. ವಿಶೇಷವಾಗಿ ಸದ್ಯದ ಸ್ಥಿತಿಯಲ್ಲಿ ಬೆಳೆಯುತ್ತಿವೆ ಎನ್ನಲಾಗಿರುವ ಮಾಹಿತಿ ತಂತ್ರಜ್ಞಾನ, ಬಯೋ ವಿಜ್ಞಾನ ಕ್ಷೇತ್ರದ ವ್ಯವಹಾರದ ಮೇಲೆ ತೆರಿಗೆ ವಿಧಿಸುವ ಹಕ್ಕು ರಾಜ್ಯಗಳಿಗೆ ಇಲ್ಲವಾಗಿದೆ. ಕೇಂದ್ರವೂ ಹಾಕುತ್ತಿಲ್ಲ ಎಂಬುದು ಇನ್ನೊಂದು ಸಂಗತಿ. ಕೇಂದ್ರ ಸರ್ಕಾರ ತೆರಿಗೆ ವಿನಾಯಿತಿ ಕೊಡುವುದರಿಂದಲೂ ರಾಜ್ಯಗಳಿಗೆ ಕೊರತೆಯುಂಟಾಗುತ್ತದೆ. ಇದು ಬದಲಾಗಬೇಕು. ಅಲ್ಲದೇ ರಾಜ್ಯ ಸರ್ಕಾರವೂ ಸಹ ಕೇಂದ್ರದಿಂದ ಹೆಚ್ಚಿನ ಪಾಲನ್ನು ಪಡೆಯಲು ಹೋರಾಡಬೇಕು ಮತ್ತು ರಾಜ್ಯದೊಳಗೆ ಆಂತರಿಕವಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಹೆಚ್ಚಿಸಿಕೊಳ್ಳಲು ಯತ್ನಿಸಬೇಕು. ಮುಖ್ಯವಾಗಿ ಪ್ರಾಥಮಿಕ ವಲಯವಾಗಿರುವ ಕೃಷಿ ರಂಗದಲ್ಲಿ ಆದಾಯ ತೆರಿಗೆ ವಿಧಿಸುವುದು, ಶ್ರೀಮಂತರ ಮೇಲೆ ತೆರಿಗೆ ಮೂಲಕ, ಅಲ್ಲದೇ ಒಟ್ಟು ತೆರಿಗೆ ಜಾಲ ವಿಸ್ತರಿಸುವುದು ಅಗತ್ಯವಿದೆ. ಈ ದಿಶೆಯಲ್ಲಿ ಹೆಜ್ಜೆ ಇಡದೇ, ಭೂಮಾಲಿಕ, ಬಂಡವಾಳಶಾಹಿ ವರ್ಗ ದೃಷ್ಟಿಕೋನದಿಂದಾಗಿ ಅಭಿವೃದ್ಧಿ ಸಾಧಿಸಲು ಸಾಲಕ್ಕೆ ಕೈಯೊಡ್ಡಿರುವುದು ಸುಲಭ ವಿಧಾನವಾಗಿದೆ. ವಿಶೇಷವಾಗಿ ವಿಶ್ವಬ್ಯಾಂಕ್‌ನಂತಹ ವಿಶೇಷ ಹಣಕಾಸು ಸಂಸ್ಥೆಗಳಿಂದ ಸಾಲಕ್ಕಾಗಿ ಕೈಯೊಡ್ಡುವುದೊಂದೇ ಮಾರ್ಗವೆಂದು ಜನರನ್ನು ನಂಬಿಸುತ್ತಿರುವುದು.

ರಾಜ್ಯಗಳು ಸಂಪನ್ಮೂಲಗಳ ಕೊರತೆಯಿಂದ ನರಳುವಂತಾಗುವಲ್ಲಿ ಈಗಿನ ಕೇಂದ್ರ-ರಾಜ್ಯ ಸಂಬಂಧಗಳ ಸ್ವರೂಪವು ಅಡ್ಡಿಯಾಗಿದೆ. ರಾಜ್ಯಗಳು ತಮ್ಮ ಹೆಚ್ಚಿನ ಪಾಲನ್ನು ಪಡೆಯಲು ಹೋರಾಡಬೇಕಿದೆ. ಆಂತರಿಕ ಸಂಪನ್ಮೂಲ ಹೆಚ್ಚಿಸಿಕೊಳ್ಳಬೇಕಿದೆ. ಆದರೆ ಈ ಹಾದಿ ಬಿಟ್ಟು ವಿಶ್ವಬ್ಯಾಂಕ್‌ನ ಮುಂದೆ ಕೈಯೊಡ್ಡಿದರೆ?

ಉದಾರೀಕರಣ ಬೀಜಮಂತ್ರ

ಸಿದ್ದರಾಮಯ್ಯನವರು ಕವಿ ರವೀಂದ್ರರ, ಕುವೆಂಪುರವರ ಹಾಗೂ ಜಾನಪದ ಹಾಡುಗಳ ಸಾಲುಗಳನ್ನು ಉಚ್ಚರಿಸಿ ಇದು ದೇಶೀಯತೆಯ ಸೊಗಡಿನಿಂದ ಕೂಡಿದೆ ಎಂದು ಬಿಂಬಿಸಲೆತ್ನಿಸಿದರೂ, ಈ ಬಜೆಟ್‌ನಲ್ಲಿ ಉದಾರೀಕರಣದ ಬೀಜಮಂತ್ರವು ಮತ್ತು ವಿಶ್ವಬ್ಯಾಂಕ್‌ನ ನಿರ್ದೇಶನಗಳ ಹೂರಣವು ಗಾಢವಾಗಿ ಕಾಣುತ್ತದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಜನ ತಿರಸ್ಕರಿಸಿದ ಹಿಂದಿನ ಸರ್ಕಾರದ ದಿವಾಳಿಖೋರ ಆರ್ಥಿಕ ನೀತಿಗಳನ್ನೇ ಆರಾಧಿಸುತ್ತಾ ಬಂದಿದೆ. ಇಲ್ಲೂಕೂಡ ಕೃಷಿ-ಕೈಗಾರಿಕಾ ವಲಯಗಳ ದೃಷ್ಟಿಕೋನವು ಇದರಿಂದಲೇ ಬಾಧಿತವಾಗಿದೆ.



ಕೈಗಾರಿಕೆ-ಕಾರ್ಮಿಕರ ಉಳಿವಿಗೆ ಚಕಾರವಿಲ್ಲ

ಹೆಚ್ಚಿನ ಉದ್ಯೋಗ ಒದಗಿಸಿರುವ ಸಣ್ಣ ಕೈಗಾರಿಕಾ ವಲಯದ ಉಳಿಸುವ ಅಭಿವೃದ್ಧಿ ಸಾದಿಸಲು ನೀಡಬೇಕಾದ ನೆರವು ಈ ಬಜೆಟ್‌ನಲ್ಲಿ ಇಲ್ಲವಾಗಿದೆ. ಹಾಗೆಯೇ ರಾಜ್ಯದಲ್ಲಿ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿರುವ ಸಣ್ಣ ಹಾಗೂ ಬೃಹತ್ ಕೈಗಾರಿಕಾ ವಲಯವನ್ನು, ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಪುನಶ್ಚೇತನಗೊಳಿಸುವ ಕಾಳಜಿ ವ್ಯಕ್ತವಾಗಿಯೇ ಇಲ್ಲ, ಇದನ್ನು ನಿರ್ಲಕ್ಷಿಸಲಾಗಿದೆ. ಕೈಗಾರಿಕಾ ವಲಯದ ಪುನಶ್ಚೇತನಕ್ಕೆ, ಹೊಸತರ ಆರಂಭಕ್ಕೆ ಅಡಿ ಇಡದೇ ಅಭಿವೃದ್ಧಿ ಸಾಧಿಸುವುದಾದರೂ ಹೇಗೆ? ಕಾರ್ಮಿಕರ ಜೀವನಮಟ್ಟದ ಹೆಚ್ಚಳಕ್ಕೆ, ಕೆಲಸದ ಭದ್ರತೆ ಒದಗಿಸುವ ಪ್ರಸ್ತಾವಗಳೇ ಇಲ್ಲ. ಅಂಗನವಾಡಿ, ಬಿಸಿಯೂಟ, ಬೀಡಿ, ಹೆಂಚು, ಅಗರಬತ್ತಿ, ಕಟ್ಟಡ ಕಾರ್ಮಿಕರು, ಪಂಚಾಯತ್ ನೌಕರರು ಮುಂತಾದ ಅಸಂಘಟಿತ ಕೆಲಸಗಾರರು ನಿತ್ಯನಿರಂತರವೆಂಬಂತೆ ತಮ್ಮ ಸಮಸ್ಯೆಗಳ ಇತ್ಯರ್ಥಕ್ಕಾಗ್ಗಿದುಕುವ ಹಕ್ಕಿಗಾಗಿ ಹೋರಾಡುತ್ತಲೇ ಇದ್ದಾರೆ. ಈ ಕ್ಷೇತ್ರದ ಕಾರ್ಮಿಕರ ಬಗ್ಗೆ ಚಕಾರವನ್ನೇ ಎತ್ತಿಲ್ಲ. ಕನಿಷ್ಠ ಕೂಲಿ ಮಾತೇ ಇಲ್ಲ.

ಎಸ್.ವೈ.ಗುರುಶಾಂತ್

ಉದ್ಯೋಗ ಹರಣ

ಬಡತನ ನಿರ್ಮೂಲನೆ, ಉದ್ಯೋಗ ಸೃಷ್ಟಿಯ ಯೋಜನೆಗಳನ್ನು ಬಜೆಟ್ ಹೊಂದಿಲ್ಲ. ಬದಲಾಗಿ ಸರ್ಕಾರ ಅಭಿವೃದ್ಧಿಯೇತರ ವೆಚ್ಚ ಶೇ 62 ರಿಂದ ಶೇ 45 ಕ್ಕೆ ಇಳಿಸಲಾಗಿದೆ ಎಂದು ಹೇಳಿದೆಯಲ್ಲದೇ ಮಧ್ಯಾವಧಿ ಆರ್ಥಿಕ ನಿರ್ವಹಣೆ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ ಎಂದಿದೆ. ಅಭಿವೃದ್ಧಿಯೇತರ ವೆಚ್ಚ ಕಡಿತ ಎಂದರೆ 'ಆಡಳಿತವನ್ನು ಕುಗ್ಗಿಸುವುದು. ನೌಕರರನ್ನೂ, ಇಲಾಖೆಗಳನ್ನು ಕಿತ್ತೊಗೆಯುವ ಹಾರ್ನಳ್ಳಿ ವರದಿಯ ಶಿಫಾರಸುಗಳ ಜಾರಿ ಎಂದರ್ಥ. ಇದರ ಏಟು ನೇರವಾಗಿ ನೌಕರರು ನಿರುದ್ಯೋಗಿಗಳ ಮೇಲೆ ಬೀಳಲಿದೆ. ಉದ್ಯೋಗ ನೇಮಕಾತಿಯ ನಿರ್ಬಂಧ, ನೌಕರರ ವೇತನ, ಪಿಂಚಣಿ ಮೇಲೆ ಪರಿಣಾಮ ಬೀರುತ್ತದೆ. ಹೀಗೆ ಹಣ ಉಳಿಸಿ, ಶಿಕ್ಷಣ, ಆರೋಗ್ಯದಂತಹ ಸಾಮಾಜಿಕ ವಲಯಕ್ಕೆ ತೊಡಗಿಸಲಾಗುತ್ತಿದೆ ಎಂದು ಹೆಮ್ಮೆಯಿಂದ ಹೇಳಿ ಕೊಂಡಿರುವ ಸಿದ್ದರಾಮಯ್ಯನವರ ಹಾದಿ ವಿಶ್ವಬ್ಯಾಂಕ್ ನಿರ್ದೇಶಿತ ಎಂಬುದರಲ್ಲಿ ಅನುಮಾನವೇ ಇಲ್ಲ.

ಕೃಷಿ : ಭರವಸೆಗಳ ಬೆಳೆ

ಕೃಷಿ ವಲಯದ ಬಗ್ಗೆ ಹಲವು ಮಾತನಾಡಿದ್ದರೂ, ಹಣ ಹೂಡಲಾಗುತ್ತಿದೆ ಎಂದರೂ ರೈತರನ್ನು, ಕೂಲಿಕಾರರನ್ನು ಉಳಿಸುವುದರತ್ತ ಮೂಲ ಗಮನವಿಲ್ಲವಾಗಿದೆ. ವಿಶೇಷವಾಗಿ ವಿದ್ಯುತ್ ಉತ್ಪಾದನೆ, ಅಭಿವೃದ್ಧಿಗಾಗಿ ಸರ್ಕಾರ ಹಣವನ್ನು ಹೂಡುತ್ತಿಲ್ಲ. ಈಗಾಗಲೇ ಇರುವ ಯೋಜನೆಗಳು ಖಾಸಗಿ ಕಂಪನಿಗಳನ್ನು ಒಳಗೊಂಡು ವಿದ್ಯುತ್ ಉತ್ಪಾದನೆಯ ಸೂಚನೆ ನೀಡಲಾಗುತ್ತಿದೆ. ಇಂದು ಖಾಸಗೀಕರಣದ ಪ್ರಕ್ರಿಯೆ ಯನ್ನು ಸರ್ಕಾರ ಜೀವಂತವಾಗಿ ಇಟ್ಟಿದೆ.

ಇನ್ನೊಂದು ಅಘಾತಕಾರಿ ಯಾದ ಸಂಗತಿಯೆಂದರೆ ಪಂಪ್‌ಸೆಟ್ ಬಳಕೆದಾರರು, ಭಾಗ್ಯಜ್ಯೋತಿ-ಕುಟೀರ ಜ್ಯೋತಿ ಮುಂತಾದ ಬಳಕೆದಾರರಿಗೆ ಕಡ್ಡಾಯವಾಗಿ ಶೇ 100 ರಷ್ಟು ಮೀಟರೀಕರಣವನ್ನು ಮಾಡುವ ನಿರ್ಧಾರದ ಪ್ರಕಟಣೆ. ಈಗಾಗಲೇ ಕೃಷಿ ಬಿಕ್ಕಟ್ಟಿನಿಂದ ತತ್ತರಿಸುತ್ತಿರುವ ರೈತಾಪಿ ಸಮುದಾಯದ ಮೇಲೆ ಹೆಚ್ಚಿನ ಹೊರೆ, ಮಾತ್ರವಲ್ಲ ಸಂಪರ್ಕ ಸಕ್ರಮಕ್ಕೆ ರೂ. 10,000 ರೈತರೇ ನೀಡಬೇಕು ಎಂಬುದು ಗಾಯದ ಮೇಲೆ ಬರೆ. ಇದನ್ನು ಒಪ್ಪಲು ಸಾಧ್ಯವೇ ಇಲ್ಲ.

ನೀರಾವರಿ ಯೋಜನೆಗಳಿಗಾಗಿ ಹಿಂದಿನ ಬಜೆಟ್‌ಗಿಂತ 900 ಕೋಟಿಯಷ್ಟು ಹಣ ಹೆಚ್ಚು ಇಡಲಾಗಿದೆ. ಆದರೆ ಯೋಜನೆ ಪೂರ್ಣಗೊಳಿಸಲು, ಹೊಸ ಯೋಜನೆಗಳು ಕೈಗೆತ್ತಿಕೊಳ್ಳಲು ಪ್ರಸ್ತಾಪವಿಲ್ಲ. ಬರಗಾಲ ಎದುರಿಸಲು ಅಗತ್ಯ ಸಿದ್ಧತೆ, ಹಣಕಾಸು ನೀಡಿಕೆ ಇಲ್ಲ. ಜ್ವಲಂತ ಸಮಸ್ಯೆಯಾದ ಕೃಷಿಕೂಲಿಕಾರರ ವಲಸೆ ತಡೆಗೆ, ಕೂಲಿಗಾಗಿ ಕಾಳುನಂತಹ ಉದ್ಯೋಗ ಸೃಷ್ಟಿಗೆ ಗಮನವಿಲ್ಲ. ಪಡಿತರ ವ್ಯವಸ್ಥೆ ಬಲಪಡಿಸುವ ಕ್ರಮವಿಲ್ಲ.

ಐ.ಟಿ., ಬಿ.ಟಿ. ದೊಡ್ಡಣ್ಣಗಳು

ಇನ್ನು ಐಟಿ, ಬಿಟಿ ರಂಗದ ಉದ್ಯಮಿಗಳನ್ನು ಖುಷಿಗೊಳಿಸುವ ಪ್ರಜ್ಞಾಪೂರ್ವಕ ಯತ್ನವಿದೆ. ಅಲ್ಲಿನ ರಸ್ತೆಯಂತಹ ಮೂಲಭೂತ ವಲಯಕ್ಕೆ ಹಣ ಮೀಸಲಿಡಲಾಗಿದೆ. ಹಿಂದಿನ ಬಜೆಟ್‌ನಲ್ಲಿ ಈ ವಲಯವನ್ನು ಕೆಣಕಲಾಗಿತ್ತು. ನಂತರದ ಒತ್ತಡದ ಪರಿಣಾಮ ಈಗಿನ ನಿರ್ಧಾರಕ್ಕೆ ಹಿನ್ನೆಯಾಗಿರಬಹುದು. ಬೀರು-ವಿಸ್ಕಿಯಂತಹ ಪಾನೀಯಗಳಿಗೆ ಅಬ್ಕಾರಿ ತೆರಿಗೆ ಕಡಿಮೆಗೊಳಿಸಿದ್ದು, ಸರಾಯಿಗೆ ಹೆಚ್ಚಿಸಲಾಗಿದೆ. ಈ ಉದ್ಯಮಿಗಳು ತುಂಬಾ ಕಷ್ಟದಲ್ಲಿರಬಹುದೆಂದು ಸಚಿವರ ಲೆಕ್ಕಾಚಾರ ಇರಬೇಕು.

ಬಡ್ಡಿ - ಸಾಲ

ಮೇಲ್ವರ್ಗದ ರೈತರ ಸಹಕಾರಿ ಸಂಸ್ಥೆಗಳ ಸಾಲ ಪಾವತಿಗಾಗಿ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದು ಸ್ವಾಗತಾರ್ಹ. ಇದಕ್ಕಾಗಿ 450 ಕೋಟಿ ಮೀಸರಿಸಿದ್ದ ಮೊತ್ತ ಇನ್ನೂ ಹೆಚ್ಚಿಸಬೇಕಲ್ಲದೇ ಜೂನ್ 2 ರ ಒಳಗೆ ಪಾವತಿಸಬೇಕೆಂಬ ಅವಧಿ ವಿಸ್ತರಣೆಯಾಗಬೇಕು. ಹಿಂದೆಯೇ ಸರ್ಕಾರ ಪುನರುಚ್ಚರಿಸಿದಂತೆ ರೈತರಿಗೆ ಶೇ 6 ರಂತೆ ಬಡ್ಡಿ ಮೇಲೆ ಸಾಲನೀಡಲು 80 ಕೋಟಿ ಸಬ್ಸಿಡಿ ನಿಗದಿ ಮಾಡಿದ್ದು ಸ್ವಾಗತಾರ್ಹ. ಆದರೆ ಇದರ ಮೊತ್ತ ಹೆಚ್ಚಬೇಕು. ಬಡರೈತರ ಸಾಲ ಮನ್ನಾ ಮಾಡಲು ಕ್ರಮವಹಿಸಬೇಕು. ಕೃಷಿ ಸಂಶೋಧನೆ, ಬೀಜಕ್ಕೆ ಸಬ್ಸಿಡಿ, ಬೆಳೆ ವಿಮೆಗೆ 200 ಕೋಟಿ ಇದೆ. ಇದು ಸಾಲದು. ಈಗಾಗಲೇ ರೈತರು ವಿಮೆ ಮೊತ್ತ ಸಿಗದೇ ಪರಿತಪಿಸಿದ್ದಾರೆ ಎಂಬುದು ನೆನಪಿಡಬೇಕು. ಸರ್ಕಾರ ಆರು ಹೊಸ ಮೆಡಿಕಲ್ ಕಾಲೇಜು ಆರಂಭಕ್ಕೆ ನಿರ್ಧಾರ ಕಾರ್ಯಗತಗೊಳಿಸಲು 30 ಕೋಟಿ ಬಜೆಟ್‌ನಲ್ಲಿ ನೀಡಿದೆ. ಆದರೆ ಶಿಕ್ಷಣದ ವ್ಯಾಪಾರೀಕರಣ ತಡೆಯುವ ಮಾತಿಲ್ಲ. ಕೇಂದ್ರ ಮಸೂದೆ ತರುವ ಪ್ರಸ್ತಾಪವಿಲ್ಲ. ಅಲ್ಲದೇ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲು ಹಣದ ಹೆಚ್ಚಳವಿಲ್ಲ.

ಪ್ರಾದೇಶಿಕ ಅಸಮಾನತೆ: ಹುಸಿಸೇವೆ

ಪ್ರಾದೇಶಿಕ ಅಸಮಾನತೆ ಬಗ್ಗೆ ಹಲವು ಬಾರಿ ಪ್ರಸ್ತಾಪಗಳಿವೆ. ಅದಕ್ಕಾಗಿ 39 ತಾಲ್ಲೂಕುಗಳಲ್ಲಿ 10

ಪುಟ 4 ಕ್ಕೆ

ಗ್ರಾಮ ಪಂಚಾಯತ್ ಚುನಾವಣೆ : ಸಿಪಿಐ(ಎಂ) ಸ್ಥಾನಗಳ ಹೆಚ್ಚಳ

ಈಚೆಗಿನ ಗ್ರಾಮ ಪಂಚಾಯ್ತಿ ಚುನಾವಣೆಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು, ಬೆಂಬಲಿಗರು ಗಮನೀಯ ಸಂಖ್ಯೆಯಲ್ಲಿ ಗೆದ್ದಿದ್ದಾರೆ. ಸಂಕ್ಷಿಪ್ತ ವಿವರ

ಕೋಲಾರ: ಕೋಲಾರ ಜಿಲ್ಲೆಯಲ್ಲಿ ಒಟ್ಟು 567 ಸ್ಥಾನಗಳಿಗೆ ಸ್ಪರ್ಧಿಸಿದ್ದು 287 ಸ್ಥಾನಗಳನ್ನು ಗೆಲ್ಲುವುದರ ಮೂಲಕ ಶೇ 50.62 ಸ್ಥಾನಗಳನ್ನು ಗೆದ್ದಂತಾಗಿದೆ. ಸಿಪಿಐ(ಎಂ) ಶಾಸಕರನ್ನು ಹೊಂದಿರುವ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ 15 ಪಂಚಾಯತಗಳಲ್ಲಿ ಬಹುಮತವನ್ನು ಸಾಧಿಸಿದ್ದು ಇನ್ನೂ ಎರಡು ಪಂಚಾಯತುಗಳಲ್ಲಿ ಬಹುಮತ ಸಾಧಿಸುವ ಹಾದಿಯಲ್ಲಿದೆ. ಇದರಲ್ಲಿ ಬಾಗೇಪಲ್ಲಿ ತಾಲೂಕಿನಲ್ಲಿ ಸ್ಪರ್ಧಿಸಿದ 245 ಕ್ಷೇತ್ರಗಳಲ್ಲಿ 166 (ಶೇ 67.35), ಗುಡಿಬಂಡೆ ತಾಲೂಕಿನಲ್ಲಿ 95 ರಲ್ಲಿ 60 (ಶೇ 63.16), ಗೌರಿಬಿದನೂರು ತಾಲ್ಲೂಕಿನ ನಗರಗೆರೆ ಹೋಬಳಿಯಲ್ಲಿ 66 ಸ್ಥಾನಗಳಲ್ಲಿ 37(ಶೇ. 56.6) ಸ್ಥಾನಗಳನ್ನು ಪಡೆದು ಭರ್ಜರಿ ಜಯಗಳಿಸಿದೆ.

ಇನ್ನುಳಿದಂತೆ ಗೌರಿಬಿದನೂರಿನಲ್ಲಿ 52 ರಲ್ಲಿ 8 ಸ್ಥಾನ (ನಗರಗೆರೆ ಹೋಬಳಿ ಬಿಟ್ಟು) ಕೋಲಾರದಲ್ಲಿ 23 ರಲ್ಲಿ 8 ಸ್ಥಾನ, ಶಿಡ್ಲಘಟ್ಟದಲ್ಲಿ 12ರಲ್ಲಿ 6, ಬಂಗಾರುಪೇಟೆಯಲ್ಲಿ 16 ರಲ್ಲಿ 3 ಸ್ಥಾನಗಳನ್ನು ಗೆದ್ದಿದ್ದು, ಕೋಲಾರ ತಾಲೂಕಿನ ಶಾಪುರ ಪಂಚಾಯತಿನಲ್ಲಿ ಸ್ಪರ್ಧಿಸಿದ 9 ಸ್ಥಾನಗಳಲ್ಲಿ 7 ಸ್ಥಾನಗಳನ್ನು ಗೆದ್ದಿದ್ದು ಅಧಿಕಾರ ಸಿಪಿಐ(ಎಂ) ಕೈಗೆ ಬರುವ ಸಂಭವವಿದೆ. ಶಿಡ್ಲಘಟ್ಟ ತಾಲ್ಲೂಕಿನ ಕುಂದಲಗುರ್ಕಿಯಲ್ಲಿ ಸಿಪಿಐ(ಎಂ) ಮತ್ತು ಜನತಾದಳ (ಎಸ್) ನಡುವೆ ಸಮಾನ ಸ್ಥಾನಗಳಿಸಿದ್ದು ಅಧಿಕಾರ ಸಿಪಿಐ(ಎಂ) ಕೈಗೆ ಬರುವ ಸಂಭವವಿದೆ. ಹಾಗಾದಲ್ಲಿ ಒಟ್ಟು 19 ಪಂಚಾಯತುಗಳು ಸಿಪಿಐ (ಎಂ)ಕೈಗೆ ಬಂದಂತಾಗುತ್ತದೆ. ಚಿಂತಾಮಣಿ ಮತ್ತು ಶ್ರೀನಿವಾಸಪುರ ಗಳಲ್ಲಿ ಕ್ರಮವಾಗಿ 5 ಮತ್ತು 8 ಸ್ಥಾನಗಳಿಗೆ ಸ್ಪರ್ಧಿಸಲಾಗಿತ್ತು.

	ಸ್ಪರ್ಧಿಸಿದ ಸ್ಥಾನಗಳು	ಗೆದ್ದಿರುವ ಸ್ಥಾನಗಳು
ಕೋಲಾರ ಜಿಲ್ಲೆ		
ಬಾಗೇಪಲ್ಲಿ ತಾಲ್ಲೂಕು	245	166 (ಶೇ. 67.35)
ಗುಡಿಬಂಡೆ ತಾಲ್ಲೂಕು	95	60 (ಶೇ. 63.16)
ಗೌರಿಬಿದನೂರು - ನಗರಗೆರೆ	66	37 (ಶೇ. 56.06)
ಗೌರಿಬಿದನೂರು- ಇತರೆ	52	8
ಕೋಲಾರ	23	8
ಬಂಗಾರಪೇಟೆ	16	3
ಶಿಡ್ಲಘಟ್ಟ	12	6
ಶ್ರೀನಿವಾಸಪುರ	8	0
ಚಿಂತಾಮಣಿ	5	0
ಗುಲ್ಬರ್ಗಾ		
ಕಮಲಾಪುರ	131	63 (ಶೇ 48.09)
ಚಿಂಚೋಳಿ	60	20
ಗುಲ್ಬರ್ಗಾ	21	13 (ಶೇ. 61.90)
ಅಫ್ಜಲಪುರ	12	8(ಶೇ. 66)
ಶಾಪುರ	20	-
ಸುರಪುರ	6	-
ಜೇವರ್ಗಿ	6	2
ಚಿತ್ರಾಪುರ	6	2
ಬಿಜಾಪುರ ಜಿಲ್ಲೆ	6	2
ದ.ಕ.		
ಉಳ್ಳಾಲ	40	28
ಗುರುಪುರ	5	-
ಬಂಟ್ವಾಳ	6	-
ಮೂಡಬಿದ್ರೆ	6	1
ಬೆಳ್ತಂಗಡಿ	53	4
ಬೆಂಗಳೂರು		
ಆನೇಕಲ್	14	7
ಹೊಸಕೋಟೆ	6	3
ದೊಡ್ಡಬಳ್ಳಾಪುರ	6	4
ಬೆಂಗಳೂರು ದಕ್ಷಿಣ	4	2
ವರ್ತೂರು	2	-
ಉತ್ತರ ಕನ್ನಡ		
ಹೊನ್ನಾವರ	17	11
ಕಾರವಾರ	5	3
ಜೊಯಿಡಾ	5	4
ಭಟ್ಕಳ	1	1
ಉಡುಪಿ ಜಿಲ್ಲೆ		
ಕುಂದಾಪುರ	78	21
ಉಡುಪಿ	16	2
ಗಂಗಾವತಿ	45	20
ಮಂಡ್ಯ		
ಮಳವಳ್ಳಿ	19	7
ಮಂಡ್ಯ	1	1
ಮದ್ದೂರು	1	1
ಗದಗ		
ಬೆಳವಣಿಕೆ	6	2
ಬಳ್ಳಾರಿ ಜಿಲ್ಲೆ	33	9

ಗುಲ್ಬರ್ಗಾ : ಜಿಲ್ಲೆಯಲ್ಲಿ ಒಟ್ಟು 256 ಸ್ಥಾನಗಳಿಗೆ ಸ್ಪರ್ಧಿಸಿದ್ದು 108 ಸ್ಥಾನಗಳನ್ನು ಗಳಿಸಿದ್ದು ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ 13 ಸ್ಥಾನಗಳಲ್ಲಿ 63 ಸ್ಥಾನಗಳನ್ನು ಪಡೆದು ಶೇ 48.09 ಸ್ಥಾನಗಳನ್ನು ಪಡೆದಂತಾಗಿದೆ. 2 ಪಂಚಾಯಿತಿಗಳಲ್ಲಿ ಸಂಪೂರ್ಣ ಬಹುಮತ ಪಡೆದ ಸಿಪಿಐ(ಎಂ) ಇನ್ನೂ 2 ಅಥವಾ 3 ಪಂಚಾಯತಿಗಳಲ್ಲಿ ಅಧಿಕಾರ ಪಡೆಯುವ ನಿರೀಕ್ಷೆ ಇದೆ.

ಬೀದರ್ : ಬೀದರ್ ಜಿಲ್ಲೆಯಲ್ಲಿ ಸ್ಪರ್ಧಿಸಿದ ಸ್ಥಾನಗಳ ಸಂಖ್ಯೆ ಲಭ್ಯವಿಲ್ಲ. ಆದರೆ ಸಿಂದಬಾದರಗಿ ಪಂಚಾಯತ್ ಕ್ಷೇತ್ರದಲ್ಲಿ 6 ಸ್ಥಾನ ಮತ್ತು ಹುಣಸೆಗೆರೆಯಲ್ಲಿ 6 ಸ್ಥಾನಗಳನ್ನು ಗೆದ್ದಿದ್ದು, ತೀವ್ರ ಮುನ್ನಡೆ ಸಾಧಿಸಿದಂತಾಗಿದೆ.

ದಕ್ಷಿಣ ಕನ್ನಡ : ಜಿಲ್ಲೆಯ ಉಳ್ಳಾಲ ಪ್ರದೇಶದಲ್ಲಿ ನಾಗರಿಕ ಸಮಿತಿ ರಚಿಸಿ ಹೋರಾಡುವುದರ ಮೂಲಕ ಕೋಮುವಾದಿ ಬಿಜೆಪಿಯ ಭದ್ರಕೋಟೆಯನ್ನು ಮುರಿಯಲು ಸಾಧ್ಯವಾಗಿದೆ. ಈ ನಾಗರಿಕ ಸಮಿತಿಯಲ್ಲಿ ಸಿಪಿಐ(ಎಂ) - ದಳ(ಎಸ್) ಮಾತ್ರವಲ್ಲದೆ ಜಾತ್ಯತೀತ ವ್ಯಕ್ತಿಗಳು ಜತೆಗೂಡಿದ್ದರು. 36 ಪಂಚಾಯತ್ ಸ್ಥಾನಗಳನ್ನು ಹೊಂದಿರುವ ಕೋಟೆಕಾರು ಪಂಚಾಯತಿನಲ್ಲಿ ಈವರೆಗೆ ಬಿಜೆಪಿ ಅಧಿಕಾರದಲ್ಲಿತ್ತು. ಆದರೆ ನಾಗರಿಕ ಸಮಿತಿ 19 ಸ್ಥಾನಗಳನ್ನು ಪಡೆಯುವುದರ ಮೂಲಕ ಬಿಜೆಪಿಯನ್ನು ಮಣ್ಣು ಮುಕ್ಕಿಸಿ, ಅಧಿಕಾರವನ್ನು ಪಡೆದಿದೆ. ಇದರಲ್ಲಿ ಸಿಪಿಐ(ಎಂ) 9 ಸ್ಥಾನಗಳನ್ನು ಪಡೆದಿದೆ.

ಬಂಟ್ವಾಳದ ಬಿಜೆಪಿ ಶಾಸಕನ ಮಧ್ಯಪ್ರವೇಶದಿಂದಾಗಿ, ಇನ್ನೊಂದು ಸ್ಥಾನದ ಮರುಎಣಿಕೆಯನ್ನು ಅಧಿಕಾರಿಗಳು ತಿರಸ್ಕರಿಸಿದ್ದು, ನ್ಯಾಯಾಲಯಕ್ಕೆ ಹೋಗುವಂತಾಗಿದೆ.

ಇದಲ್ಲದೆ ಪ್ರದೇಶದ 7 ಪಂಚಾಯತಿಯ 30 ಸ್ಥಾನಗಳಲ್ಲಿ 19 ಸ್ಥಾನಗಳನ್ನು ಪಡೆಯುವುದರ ಮೂಲಕ ಉತ್ತಮ ಪ್ರಗತಿಯನ್ನು ಸಾಧಿಸಿದ್ದು, ಮಂಜನಾಡ ಪಂಚಾಯತಿಯಲ್ಲಿ ಬಹುಮತವನ್ನು ಹೊಂದಿದೆ.

ಇದಲ್ಲದೆ, ಗುರುಪುರವಲಯ ಮತ್ತು ಬಂಟ್ವಾಳಗಳಲ್ಲಿ ಕ್ರಮವಾಗಿ 5 ಮತ್ತು 6 ಸ್ಥಾನಗಳಿಗೆ ಸ್ಪರ್ಧಿಸಿದ್ದರೂ, ಗೆಲ್ಲಲು ಸಾಧ್ಯವಾಗಿಲ್ಲ. ಮೂಡಬಿದ್ರೆಯಲ್ಲಿ 6 ಸ್ಥಾನಗಳಿಗೆ ಸ್ಪರ್ಧಿಸಿದ್ದು 1 ಸ್ಥಾನ ಗೆದ್ದಿದೆ.



ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಟ್ಟು 53 ಸ್ಥಾನಗಳಲ್ಲಿ 4 ಸ್ಥಾನಗಳಲ್ಲಿ ಮಾತ್ರ ಗೆದ್ದಿದೆ. ಆದರೆ ಉಳಿದ ಹಲವು ಕ್ಷೇತ್ರಗಳಲ್ಲಿ ಉತ್ತಮ ಮತಗಳನ್ನು ಪಡೆದು ಮುಂದಿನ ದಿನಗಳಲ್ಲಿ ಪಕ್ಷದ ಬೆಳವಣಿಗೆಗೆ ಸಹಯಕಾರಿಯಾಗಿದೆ.

ಬೆಂಗಳೂರು : ಜಿಲ್ಲೆಯಲ್ಲಿ ಸ್ಪರ್ಧಿಸಿದ 32 ಸ್ಥಾನಗಳ ಪೈಕಿ 15 ಸ್ಥಾನಗಳನ್ನು ಸಿಪಿಐ(ಎಂ) ಗಳಿಸಿದೆ. ವಿವರ ಇಂತಿದೆ.

ತಾಲ್ಲೂಕು /ಕ್ಷೇತ್ರ	ಸ್ಪರ್ಧಿಸಿದ ಸ್ಥಾನ	ಗೆಲುವು
ಆನೇಕಲ್	14	7(6 ಅವಿರೋಧ)
ಹೊಸಕೋಟೆ	6	3(ಅವಿರೋಧ)
ದೊಡ್ಡಬಳ್ಳಾಪುರ	5	4
ಬೆಂಗಳೂರು ದಕ್ಷಿಣ	4	2 (1ಅವಿರೋಧ)
ವರ್ತೂರು	2	-

ಉತ್ತರ ಕನ್ನಡ - ಉತ್ತಮ ಫಲಿತಾಂಶ : ಜಿಲ್ಲೆಯಲ್ಲಿ ಸ್ಪರ್ಧಿಸಿದ 30 ಸ್ಥಾನಗಳಲ್ಲಿ 19 ಸ್ಥಾನಗಳನ್ನು ಗೆಲ್ಲುವ ಮೂಲಕ ಉತ್ತಮ ಸಾಧನೆ ಗಳಿಸಿದ್ದು ಮಾತ್ರವಲ್ಲದೆ, ಹೊನ್ನಾವರ ತಾಲ್ಲೂಕಿನ ಮಾವಿನಕುರ್ವೆ ಪಂಚಾಯತನ್ನು ತನ್ನ ತೆಕ್ಕೆಗೆ ಪುನಃ ತೆಗೆದುಕೊಂಡಿದೆ. ಅಲ್ಲಿ ಸ್ಪರ್ಧಿಸಿದ ಎಲ್ಲಾ 13 ಸ್ಥಾನಗಳಲ್ಲಿ 9 ಸ್ಥಾನಗಳಲ್ಲಿ ಗೆದ್ದು ಪಂಚಾಯತಿನಲ್ಲಿ ಅಧಿಕಾರ ಸ್ಥಾಪಿಸಲಿದೆ. ಜೋಯಿಡಾ ಮತ್ತು ಕಾರವಾರ ತಾಲ್ಲೂಕುಗಳಲ್ಲಿ ಕ್ರಮವಾಗಿ 4 ಮತ್ತು 3 ಸ್ಥಾನಗಳನ್ನು ಪಡೆದಿದೆ. ಅಲ್ಲಿ ಒಟ್ಟು 10 ಸ್ಥಾನಗಳಿಗೆ (5+15) ಸ್ಪರ್ಧಿಸಲಾಗಿತ್ತು.

ಉಡುಪಿ: ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ 78 ಸ್ಥಾನಗಳಿಗೆ ಸ್ಪರ್ಧಿಸಿದ್ದು 21 ಸ್ಥಾನಗಳಲ್ಲಿ ಜಯಗಳಿಸಿದೆ. ಕೋಟೇಶ್ವರ ಮತ್ತು ಪಡುಕೋಣೆಯಲ್ಲಿ ಸ್ಥಾನ ಹೆಚ್ಚಾಗಿದೆ. ಹಾಗೂ ಉಡುಪಿ ತಾಲ್ಲೂಕಿನಲ್ಲಿ 16 ಸ್ಥಾನಗಳಿಗೆ ಸ್ಪರ್ಧಿಸಿದ್ದು 2 ಸ್ಥಾನಗಳಲ್ಲಿ ಜಯಗಳಿಸಿದೆ.

ಕೊಡಗು: ಜಿಲ್ಲೆಯಲ್ಲಿ 96 ಸ್ಥಾನಗಳಿಗೆ ಸ್ಪರ್ಧಿಸಲಾಗಿತ್ತು. 8 ಸ್ಥಾನಗಳಲ್ಲಿ ಗೆದ್ದು, ಇನ್ನೂ 12 ಸ್ಥಾನಗಳಲ್ಲಿ ಬೆಂಬಲಿತ ಅಭ್ಯರ್ಥಿ ಗೆದ್ದಿರುತ್ತಾರೆ.

ಮಂಡ್ಯ: ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ 19 ಸ್ಥಾನಗಳಿಗೆ ಸ್ಪರ್ಧಿಸಿದ್ದು 7 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದು, ಹಲವು ಸ್ಥಾನಗಳಲ್ಲಿ ಕೆಲವೇ ಮತಗಳ ಅಂತರದಲ್ಲಿ ಸೋಲುಂಟಾಗಿದೆ.

ಸಮರಶೀಲ ಹೋರಾಟದಲ್ಲಿ ಗೆದ್ದ ಕೂಲಿಕಾರರು ಮತ್ತು ರೈತರು: ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಕ.ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಹಲವಾರು ಸಮರಶೀಲ ಹೋರಾಟಗಳು ನಡೆದಿವೆ. ಅದರ ಜತೆಯಲ್ಲೇ ಕಾರ್ಯಕರ್ತರನ್ನು ಗುರುತಿಸಿ ಸಂಘಟನೆಯನ್ನು ಕಟ್ಟುವ ಕೆಲಸಕ್ಕೂ ಗಮನ ನೀಡಲಾಗಿತ್ತು. ಅಂತೆಯೇ 15 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ 45 ಸ್ಥಾನಗಳಿಗೆ ಸ್ಪರ್ಧಿಸಿದ್ದು ಕೂಲಿಕಾರ ಸಂಘದ 11 ಮತ್ತು ರೈತ ಸಂಘದ 9 ಕಾರ್ಯಕರ್ತರು ಆಯ್ಕೆಯಾಗಿದ್ದಾರೆ. ತಾಲೂಕಿನ ಹೇರೂರು ಪಂಚಾಯತಿ ವ್ಯಾಪ್ತಿಯಲ್ಲಿ ಬಲಾಢ್ಯ ಭೂಮಾಲಿಕರ ವಿರುದ್ಧ 12 ಸ್ಥಾನಗಳಿಗೆ ಸ್ಪರ್ಧಿಸಿದ್ದು 4 ಸ್ಥಾನಗಳಲ್ಲಿ ಕೂಲಿಕಾರರು ಜಯಗಳಿಸಿದ್ದು ಭೂಮಾಲಿಕರ ನುಂಗಲಾರದ ತುತ್ತಾಗಿದೆ. ○

ಕರ್ನಾಟಕ ಬಜೆಟ್ ....

ಪುಟ 3 ರಿಂದ

ಕೋಟಿ ರೂ.ಗಳ 'ಕೈಗಾರಿಕಾ ವಿಕಾಸ್' ಮೂಲಕ ಉದ್ಯೋಗ ಸೃಷ್ಟಿಯ ಯೋಜನೆ ಪ್ರಕಟಿಸಲಾಗಿದೆ. 1.5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗವುದಂತೆ. ಅದೂ 5 ವರುಷಗಳಲ್ಲಿ. ಈ 10 ಕೋಟಿಯಲ್ಲಿ ಎಂತಹ ಕೈಗಾರಿಕೆ ಬೆಳೆಸಬಹುದು, ಹಾಗೇ 114 ತಾಲ್ಲೂಕುಗಳಲ್ಲಿ ವಸತಿ ಹೈಸ್ಕೂಲ್‌ಗಳ ಆರಂಭದ ಭರವಸೆ ಇದೆ. ಆದರೆ ಹಿಂದುಳಿದಿರುವಿಕೆಗೆ ಮೂಲ ಕಾರಣವಾದ ಭೂಮಿಹಂಚಿಕೆ, ಕೈಗಾರಿಕೆ ಬೆಳವಣಿಗೆ, ಸಾಮಾಜಿಕ ಅಭಿವೃದ್ಧಿಯತ್ತ ಹೆಜ್ಜೆ ಇಡದೇ ಅಸಮಾನತೆ ಹೇಗೆ ತೊಲಗುತ್ತದೆ ಎಂದು ಉಪಮುಖ್ಯಮಂತ್ರಿಗಳು ಹೇಳಬೇಕು. ಇಲ್ಲಿ ರಾಜಕೀಯ ಇಚ್ಛಾಶಕ್ತಿ, ಪ್ರಾಮಾಣಿಕ ಪ್ರಯತ್ನದ ಕೊರತೆ ಇದೆ.

ಗಣಿ ಅದಿರು ಸಾಗಾಣಿಕೆಯ ಮೇಲೆ ವಿಶೇಷವಾದ ತೆರಿಗೆ ವಿಧಿಸುತ್ತಿರುವುದು ಸ್ವಾಗತಾರ್ಹ. ಕಾನೂನು ಸುವ್ಯವಸ್ಥೆ ಕಾಪಾಡುವ ಹೆಸರಿನಲ್ಲಿ ಆಧುನೀಕರಿಸಲೆಂದು ಪೊಲೀಸ್ ಇಲಾಖೆಗೆ ಸುಮಾರು 50 ಕೋಟಿ ಹೆಚ್ಚಳ ಮಾಡುತ್ತಿರುವುದು ಗಮನಿಸಬೇಕು.

ರಸ್ತೆಗಳ ನಿರ್ಮಾಣಕ್ಕೆ 1400 ಕೋಟಿ ಮೀಸಲಾಗಿಡಲಾಗಿದೆ. ಇದು ಹೈವೇಗಳಿಗೆ ಬಹುತೇಕ ಮೀಸಲು - ಗ್ರಾಮೀಣ ರಸ್ತೆಗಳು ಸುಧಾರಣೆಗೆ ಗಮನ ಅಷ್ಟಾಗಿ ಇಲ್ಲ.

ಈ ಬಜೆಟ್ಟಿನಲ್ಲಿ ತೆರಿಗೆ ಪದ್ಧತಿಯಲ್ಲಿ ಹೊಸ ಬದಲಾವಣೆ ಅಳವಡಿಸಿಕೊಳ್ಳುತ್ತಿರುವುದು ವಿಶೇಷ. ಈಗಾಗಲೇ ಬಹಳಷ್ಟು ಚರ್ಚೆಯಾದ 'ಮೌಲ್ಯವರ್ಧಿತ ತೆರಿಗೆ' (VAT) ಪದ್ಧತಿ ಅಳವಡಿಸಲಾಗುತ್ತಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ತಕ್ಷಣದಲ್ಲೇ ಕೊರತೆಯಾಗಲಿದ್ದು ಕೇಂದ್ರ ಸರ್ಕಾರ ಭರಿಸುವ ಆಶ್ವಾಸನೆ ಇದೆ. ಇದರ ಅನುಭವ ನೋಡಬೇಕು. ಭತ್ತ, ಗೋಧಿ ಮುಂತಾದ ಧಾನ್ಯಗಳನ್ನು ತೆರಿಗೆಯ ಹೊರೆಯಿಂದ ಹೊರಗಿಡಲಾಗಿರುವುದು ಸ್ವಾಗತಾರ್ಹ.

ಒಟ್ಟಾರೆ ಬಜೆಟ್ಟನ್ನು ಸರಿದೂಗಿಸಲು ಸಾಲ ಎತ್ತುವುದು ಒಂದು ಗಂಭೀರವಾದ ಕಾರ್ಯಕ್ರಮವಾಗಿದೆ. ಅದು ನಿರೀಕ್ಷೆಗಿಂತ ಹೆಚ್ಚಾಗುವ ಅಪಾಯವಿದೆ.


ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಹೂರಣವಿಲ್ಲದ ಮಾತಿನ ತೋರಣವಾಗಿದೆ. ಆದ್ದರಿಂದ ಇದರ ಹಲವಾರು ಕೊರತೆ ಮತ್ತು ಜನವಿರೋಧಿ ಅಂಶಗಳನ್ನು ಕೈಬಿಡಬೇಕು.

ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ

ಜಾತ್ಯತೀತ ಶಕ್ತಿಗಳು ಕಲಿಯಬೇಕಾದ ಪಾಠ

ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲಾಗಿದೆ. ಇದು ದುರದೃಷ್ಟಕರ. ಯಾಕೆಂದರೆ ಒಂದು ಪ್ರಜಾಪ್ರಭುತ್ವದಲ್ಲಿ ನಿಯಮಿತ ಚುನಾವಣೆ ನಡೆಸುವುದರ ಉದ್ದೇಶ ಒಂದು ಜನಪ್ರಿಯ ಸರಕಾರವನ್ನು ಪ್ರತಿಷ್ಠಾಪಿಸಲಿಕ್ಕಾಗಿ. ಆದರೆ ಬಿಹಾರದಲ್ಲಿನ ಜನಾದೇಶ ಎಷ್ಟು ಭಗ್ನ ಸ್ವರೂಪದ್ದಾಗಿದೆ ಎಂದರೆ ರಾಜ್ಯಪಾಲ ಬೂಟಾ ಸಿಂಗ್ ಪ್ರಕಾರ ಯಾವ ಪಕ್ಷ ಅಥವಾ ಕೂಟವೂ ಸರಕಾರ ರಚಿಸುವ ಸ್ಥಿತಿಯಲ್ಲಿಲ್ಲಾ. ಆದರೆ ಇದನ್ನು ನಿರ್ಧರಿಸಬೇಕಾದ್ದು ವಿಧಾನಸಭೆಯಲ್ಲಿಯೇ ಹೊರತು, ರಾಜಭವನದಲ್ಲಿ ಅಲ್ಲ. ಸುಪ್ರಿಂಕೋರ್ಟ್ ಎಸ್.ಆರ್.ಬೊಮ್ಮಾಯಿ ಕೇಸಿನಲ್ಲಿನ ತನ್ನ ಪ್ರಸಿದ್ಧ ತೀರ್ಪಿನಲ್ಲಿ ಈ ಅಂಶವನ್ನು ಸ್ಪಷ್ಟವಾಗಿ ಹೇಳಿದೆ. ಯಾವುದೇ ಸರಕಾರದ ಬೆಂಬಲವನ್ನು ಪರೀಕ್ಷಿಸಲು ವಿಧಾನಸಭೆಯೇ ಏಕೈಕ ಸ್ಥಳ ಎಂದು. ರಾಜ್ಯಪಾಲರ ಪ್ರಕಾರ ಇದು ಸಾಧ್ಯವಿರಲಿಲ್ಲ. ಆರ್‌ಜೆಡಿ ಅತಿ ದೊಡ್ಡ ಪಕ್ಷವಾಗಿ (75 ಸದಸ್ಯರು) ಹಾಗೂ ಅತಿ ದೊಡ್ಡ ಕೂಟವಾಗಿಯೂ (94) ಸರಕಾರ ರಚಿಸಲು ದಾವೆ ಮುಂದಿಟ್ಟಿತು. ಆದರೆ ರಾಜ್ಯಪಾಲರೆನ್ನುತ್ತಾರೆ 136 ಚುನಾಯಿತ ಸದಸ್ಯರು ಆರ್‌ಜೆಡಿ-ನೇತೃತ್ವದ ಸರಕಾರಕ್ಕೆ ಬೆಂಬಲ ನೀಡುವುದಿಲ್ಲವೆಂದು ಲಿಖಿತವಾಗಿ ತಿಳಿಸಿದ್ದರಂತೆ. ಆದ್ದರಿಂದಲೇ ಯಾವುದೇ ಸರಕಾರದ ರಚನೆ ಸಾಧ್ಯವಿಲ್ಲವಂತೆ.

ಬಿಹಾರದಲ್ಲಿನ ಫಲಿತಾಂಶವು ಗಂಭೀರ ಸ್ಥಿತಿಯನ್ನು ಹುಟ್ಟುಹಾಕಿದೆ. ಈಗ ರಾಷ್ಟ್ರಪತಿ ಆಡಳಿತ ಘೋಷಿತವಾಗಿದೆ. ಇಂತಹ ಸ್ಥಿತಿ ಯಾಕೆ ನಿರ್ಮಾಣಗೊಂಡಿತು?



ಇವರೆಲ್ಲರೂ ಸೇರಿದರೆ...!

ಬಿಹಾರದ ಶಾಸಕರು ಜಾತ್ಯತೀತ ಪಕ್ಷಗಳಿಗೆ ಒಟ್ಟಾಗಿ ಬಹುಮತ ನೀಡಿದ್ದರೂ ಇಂತಹ ಪರಿಸ್ಥಿತಿ ಬಂದಿರುವುದು ಇನ್ನಷ್ಟು ದುರದೃಷ್ಟಕರ. ಬಿಹಾರ ಮತದಾರರ ಈ ಸಲ ಭಿನ್ನವಾಗೇನೂ ಮತ ನೀಡಲಿಲ್ಲ. 2004ರ ಲೋಕಸಭ ಚುನಾವಣೆಗಳಂತೆಯೇ ಮತ ನೀಡಿದ್ದಾರೆ. ನಿಜವಾಗಿ ಬಿಜೆಪಿಯ ಶೇಕಡಾವಾರು ಗಳಿಕೆ ಲೋಕಸಭಾ ಚುನಾವಣೇಗಳಿಗಿಂತ ಕಡಿಮೆಯಾಗಿದೆ. ಕೇಂದ್ರದಲ್ಲಿ ಯುಪಿಎ ಸರಕಾರದಲ್ಲಿರುವವರೆಲ್ಲಾ ಒಟ್ಟಿಗೆ ಸೇರಿದರೆ ಬಿಹಾರದಲ್ಲಿ ಒಂದು ಜಾತ್ಯತೀತ ಸರಕಾರಕ್ಕೆ ಸ್ಪಷ್ಟ ಬಹುಮತ ಇದೆ.

ಪಾಸ್ವಾನ್ ಹಠಮಾರಿತನ

ಇದು ಯಾಕೆ ಸಾಧ್ಯವಾಗಿಲ್ಲ ಎಂಬುದಕ್ಕೂ ಕಾರಣ ಸ್ಪಷ್ಟ. ಮುಖ್ಯವಾಗಿ ರಾಮ್ ವಿಲಾಸ್ ಪಾಸ್ವಾನ್‌ರ ಎಲ್‌ಜೆಪಿಯ ಹಠಮಾರಿತನದಿಂದಾಗಿ ತಾನು ಆರ್‌ಜೆಡಿಗೆ ವಿರುದ್ಧ ಎಂದು ಸಾರ್ವಜನಿಕವಾಗಿಯೇ ಅವರು ಸಾರಿದ್ದಾರೆ. ಒಂದುಜಾತ್ಯತೀತ ಸರಕಾರದ ರಚನೆಗೆ ಸರ್ವ ಪ್ರಯತ್ನಗಳೂ ಮುಂದುವರೆಯಬೇಕು. ಆದರೂ ವಿಫಲವಾದರೆ ಮತ್ತೆ ಜನಗಳಿಂದ ಹೊಸ ಆದೇಶ ಪಡೆಯುವುದಲ್ಲದೆ ಬೇರೆ ದಾರಿಯಿಲ್ಲ.

ಜಾತ್ಯತೀತ ಶಕ್ತಿಗಳ ಒಡಕು

ಜಾತ್ಯಾತೀತ ಶಕ್ತಿಗಳ ನಡುವೆ ಒಂದು ಚುನಾವಣಾ ತಿಳುವಳಿಕೆ ಬೆಸೆಯಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ ಫಲಿತಾಂಶ ಅತ್ಯಂತ ಭಿನ್ನವಾಗಿರುತ್ತಿತ್ತು. ಆದರಿಂದ ದೇಶಕ್ಕೆ, ಜನತೆಗೆ ಒಳ್ಳೆಯದಾಗುತ್ತಿತ್ತು. ಬಿಜೆಪಿ ನೇತೃತ್ವದ ಕೋಮುವಾದಿ ಕೂಟ ಬಿಹಾರದಲ್ಲೂ, ಜಾರ್ಖಂಡದಲ್ಲೂ ಜಾತ್ಯಾತೀತ ಪಕ್ಷಗಳ ನಡುವೆ ಮತವಿಭಜನೆಯಿಂದಾಗಿ ಬಹಳಷ್ಟು ಲಾಭ ಪಡೆದಿದೆ ಎಂಬುದು ಚುನಾವಣೋತ್ತರ ಸರ್ವೆಗಳು, ವಿಶ್ಲೇಷಣೆಗಳಿಂದ ಕಂಡು ಬಂದಿದೆ. ಇಂತಹ ಪರಿಸ್ಥಿತಿಯನ್ನು ಪಡೆದಿದ್ದರೆ, ಅಥವಾ ಮತಗಳ ವಿಭಜನೆಯನ್ನು ಕನಿಷ್ಟಗೊಳಿಸಿದ್ದರಾದರೂ ಜಾತ್ಯತೀತ ಶಕ್ತಿಗಳಿಗೆ ಸ್ಪಷ್ಟ ವಿಜಯ ಸಿಗುತ್ತಿತ್ತು.

ಆದರೆ ಹಾಗಾಗಲಿಲ್ಲ. ಇದರಲ್ಲೇ ಒಂದು ಮಹತ್ವದ ಸಂದೇಶ ಅಡಗಿದೆ. ಹಿಂದೆ 195 ಕಾಂಗ್ರೆಸ್ ಲೋಕಸಭಾ ಸದಸ್ಯರಿದ್ದರೂ ರಾಜೀವ್ ಗಾಂಧಿಗೆ ಸರಕಾರ ರಚಿಸಲಾಗಿರಲಿಲ್ಲ, ಆದರೆ ಈಗ 145 ಸದಸ್ಯರಿಂದಲೇ ಕಾಂಗ್ರೆಸ್ ಯುಪಿಎ ಸರಕಾರಕ್ಕೆ ನೇತೃತ್ವ ನೀಡುತ್ತದೆ. ಇದಕ್ಕೆ ಸರಳವೆಂದರೆ ಇಂದು ಇತರ ಜಾತ್ಯಾತೀತ ಪಕ್ಷಗಳು ಕಾಂಗ್ರೆಸ್‌ನೊಂದಿಗೆ ಕೆಲಸ ಮಾಡಲು ಸಿದ್ಧವಾಗಿವೆ. ಎಡ ಪಕ್ಷಗಳು ಕೂಡಾ ಇಂತಹ ಒಂದು ವ್ಯವಸ್ಥೆಯನ್ನು ಹೊರಗಿನಿಂದ ಬೆಂಬಲಿಸುತ್ತಿವೆ.

ಕೋಮುವಾದಿ ಶಕ್ತಿಗಳು ಪ್ರಭುತ್ವ ಅಧಿಕಾರ ಚುಕ್ಕಾಣಿಯನ್ನು ಹಿಡಿಯದಂತೆ ತಡೆಯಬೇಕಾದ ಅಗತ್ಯದಿಂದಾಗಿಯೇ ಬಹುಮಟ್ಟದ ವಾಸ್ತವದಲ್ಲಿ ಇಂತಹ ಬದಲಾವಣೆಗಳು ಬಂದಿವೆ. ಕಳೆದ ಆರು ವರ್ಷಗಳಲ್ಲಿ ಅವರು ಹಿಡಿದ ದಾರಿ ಆಧುನಿಕ ಭಾರತೀಯ ಗಣತಂತ್ರದ ಅಡಿಗಲ್ಲನ್ನೇ ಹಾಳುಗೆಡಹುವ ಮಟ್ಟಿಗೆ ಹೋಗಿದ್ದು ದೇಶಕ್ಕೆ ಮತ್ತು ಜನತೆಗೆ ಇನ್ನೊಮ್ಮೆ ಇಂತಹ ಅಪಾಯ ಬಂದೊದಗದಂತೆ ಜಾತ್ಯತೀತ ಪಕ್ಷಗಳು ಪರಸ್ಪರ ಸಹಕರಿಸಬೇಕಾದ ಅಗತ್ಯ ಎದ್ದು ಕಂಡಿದೆ. ವಾಸ್ತವತೆಯಲ್ಲಿನ ಈ ಬುಡಮಟ್ಟದ ಬದಲಾವಣೆಯನ್ನು ಕಾಂಗ್ರೆಸ್ ಅರಿಯಬೇಕಾಗಿದೆ.

ಬಿಜೆಪಿ ಬೊಬ್ಬೆ?

ಈ ನಡುವೆ ಬಿಜೆಪಿ ಕೂಗಾಡುತ್ತಿದೆ. ತಾನೇ ರಾಜ್ಯಪಾಲರನ್ನು ಈ ಹಿಂದೆ ದುರುಪಯೋಗಪಡಿಸಿಕೊಂಡಿದ್ದರೂ, ಈಗ ಅದೇ ರಾಜ್ಯಪಾಲರನ್ನು ದುರುಪಯೋಗಪಡಿಸಲಾಗುತ್ತಿದೆ ಎಂದು ಬೊಬ್ಬಿಡುತ್ತಿದೆ. ಒಂದು ಪ್ರಜಾಪ್ರಭುತ್ವದಲ್ಲಿ ರಾಜ್ಯಪಾಲರ ಪಾತ್ರ ಕಟ್ಟುನಿಟ್ಟಾಗಿ ಸಂವಿಧಾನದ ಪ್ರಕಾರವೇ ಇರಬೇಕು ಆರೋಪಕ್ಕೆ ಒಳಗಾಗಬಾರದು ಎಂಬುದು ಬೇರೆ ಸಂಗತಿ. ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಅಪ್ರತಿನಿಧಿಕ ಅಲ್ಪಮತದ ಸರಕಾರಗಳನ್ನು ಸ್ಥಾಪಿಸಲು ರಾಜ್ಯಪಾಲರ ಅಧಿಕಾರವನ್ನು ಬಳಸಿಕೊಂಡಿತ್ತು; 2000ದ ಚುನಾವಣೆಗಳ ನಂತರ ಬಿಹಾರದಲ್ಲಿ ನಿತಿಶ್ ಕುಮಾರ್ ಸರಕಾರವನ್ನು ಅಧಿಕಾರದಲ್ಲಿ ಕೂರಿಸಲು ಈ ರೀತಿಯ ಪ್ರಯತ್ನ ನಡೆಸಿತ್ತು. ಈಶಾನ್ಯದ ಕೆಲವು ರಾಜ್ಯಗಳಲ್ಲೂ ಇದನ್ನೇ ಮಾಡಿತ್ತು. 1996ರಲ್ಲಿ ಆಗಿನ ರಾಷ್ಟ್ರಪತಿಗಳು ಅತಿ ದೊಡ್ಡ ಪಕ್ಷವಾಗಿದ್ದರಿಂದ ಬಿಜೆಪಿಯನ್ನು ಕೇಂದ್ರದಲ್ಲಿ ಸರಕಾರ ರಚಿಸಲು ಕರೆದುದನ್ನು ಸ್ವಾಗತಿಸಿದರು. ಆಗ ಸಂಯುಕ್ತರಂಗ ಲೋಕಸಭೆಯಲ್ಲಿ ಅಗತ್ಯ ಬಹುಮತದಲ್ಲಿದ್ದು ತನ್ನ ಮುಖಂಡನನ್ನು (ದೇವೇಗೌಡರನ್ನು) ಆರಿಸಿದ್ದರೂ ಹೀಗೆ ಮಾಡಲಾಗಿತ್ತು. ಆದರೆ ಈಗ ಅದೇ ಅಳತೆಗೋಲಿನಿಂತ ಆರ್‌ಜೆಡಿ ಸರಕಾರ ರಚಿಸುವ ಧಾವೆ ಮಂಡಿಸಿದಾಗ ಅದನ್ನು ಅವರು ವಿರೋಧಿಸುತ್ತಾರೆ!

ಅಡ್ವಾಣಿ ಬೂಟಾಟಿಕೆ

ಬಿಜೆಪಿ ಅಧ್ಯಕ್ಷ ಅಡ್ವಾಣಿ ಅತ್ಯಂತ ಸಂಶನೀಯ ಟಿಪ್ಪಣಿ ಮಾಡಿದ್ದಾರೆ. ಹಲವು ರಾಜ್ಯಪಾಲರ ವಿರುದ್ಧ ವೈಯಕ್ತಿಕ ಟೀಕೆ ಮಾಡಿದ್ದಾರೆ ಹಾಗೂ ಬಿಹಾರ ಮತ್ತು ಜಾರ್ಖಂಡ್‌ನ ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು ಎಂದು ಕೇಳಿದ್ದಾರೆ. ಆದರೆ ಇಂತಹ ಬೂಟಾಟಿಕೆಯ ಮೂಲಕ, ಅವರು ತಾವು ಕೂಡಾ ಜಾರ್ಖಂಡ್‌ನಲ್ಲಿ ಅಗತ್ಯ ಬಹುಮತ ಪಡೆದಿಲ್ಲ, ಬಿಹಾರದಲ್ಲಿಯೂ ಬಹುಮತದಿಂದ ಬಹಳ ದೂರ ಇದ್ದೇವೆ ಎಂಬುದನ್ನು ಮರೆಮಾಚಲು ಸಾಧ್ಯವಾಗಿಲ್ಲ.


ಬಿಹಾರದಲ್ಲಿ ಅಂತಿಮವಾಗಿ ಏನೇ ಸಂಭವಿಸಲಿ, ಒಂದು ಜಾತ್ಯತೀತ ಸರಕಾರವನ್ನು ಸ್ಥಾಪಿಸಲು ಸರ್ವ ಪ್ರಯತ್ನಗಳಿಗೆ ಮುಂದುವರೆಯಬೇಕಾದ ಅಗತ್ಯವಿದೆ. ಈ ಪ್ರಕ್ರಿಯೆಯಲ್ಲಿ ಜಾತ್ಯತೀತ ಪಕ್ಷಗಳೇ ಈ ಬೆಳವಣಿಗೆಗಳಿಂದ ಸೂಕ್ತ ಪಾಠ ಕಲಿಯಬೇಕಾಗಿದೆ.

ಜಾರ್ಖಂಡ್ : ವಿವಾದಾತ್ಮಕ ನಿರ್ಣಯ

ಬಹುಮತದ ಬೆಂಬಲ ಹಾಗೂ ಸರಕಾರ ರಚನೆಯ ದಾವೆಗಳನ್ನು ಪರೀಕ್ಷಿಸಬೇಕಾದ್ದು, ವಿಧಾನಸಭೆಯಲ್ಲಿಯೇ ಹೊರತು ರಾಜ್ಯಪಾಲರು ಅಥವಾ ರಾಜಭವನ ನಿರ್ಣಯದ ಅಂಶಗಳಾಗಲು ಸಾಧ್ಯವೇ ಇಲ್ಲ ಎಂದು ಸಿಪಿಐ(ಎಂ) ಸದಾ ಹೇಳುತ್ತಲೇ ಬಂದಿದೆ. ಆದರೆ ಬಿಜೆಪಿ ನೇತೃತ್ವದ ಮೈತ್ರಿ ಕೂಟ ಜಾರ್ಖಂಡ್‌ನಲ್ಲಿ ಬಹುಮತ ಗಿಟ್ಟಿಸಿದೆ ಎಂಬ ದಾವೆಯನ್ನು ಒಪ್ಪಲು ಸಾಧ್ಯವಿಲ್ಲವಿದ್ದರೂ ರಾಜ್ಯಪಾಲರು ಎರಡು ಮೈತ್ರಿಕೂಟಗಳ ಬೆಂಬಲವನ್ನು ಪರಿಶೀಲಿಸುವಲ್ಲಿ ತೋರಿದ ತರಾತುರಿ ವಿವಾದಾಸ್ಪದ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಜಾರ್ಖಂಡ್‌ನ ಘಟನೆಗಳ ಬಗ್ಗೆ ಬಿಜೆಪಿ ಜೋರಾಗಿ ಪ್ರತಿಭಟಿಸುತ್ತಿದೆ. ಆದರೆ ಅದು ಕೂಡಾ ರಾಜ್ಯಪಾಲರನ್ನು ದುರುಪಯೋಗ ಪಡಿಸಿಕೊಂಡ ಹೊಣೆ ಹೊರಬೇಕಾಗಿದೆ. 2000ದಲ್ಲಿ ಬಿಹಾರದಲ್ಲಿ ಈ ಮೂಲಕ ಅದು ಒಂದು ಅಪ್ರಾತಿನಿಧಿಕ ಸರಕಾರವನ್ನು ಹೇರಲು ಪ್ರಯತ್ನಿಸಿತು ಎಂಬುದನ್ನು ನೆನಪಿಸಿರುವ ಸಿಪಿಐ(ಎಂ) ರಾಜ್ಯಪಾಲರು ಪ್ರಜಾಪ್ರಭುತ್ವ ಆಚರಣೆಗಳನ್ನು ರಕ್ಷಿಸಲು ನಿಯಮಾವಳಿಗೆ ಬದ್ಧವಾಗಿಸಲು ಅಗತ್ಯ ಎಂದಿದೆ.

ಕಾಮ್ರೇಡ್ ಕನಕ್ ಮುಖರ್ಜಿ ಇನ್ನಿಲ್ಲ



ಪಶ್ಚಿಮ ಬಂಗಾಳದ ಮಹಿಳಾ ಚಳುವಳಿಯಲ್ಲಿ, ಆ ಮೂಲಕ ದೇಶದಲ್ಲಿ ಮುಂಚೂಣಿಯಲ್ಲಿದ್ದ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (AIDWA) ಯ ಅಖಿಲ ಭಾರತ ಉಪಾಧ್ಯಕ್ಷರಾಗಿದ್ದ ಕಾಮ್ರೇಡ್ ಕನಕ್ ಮುಖರ್ಜಿ ಮಾರ್ಚ್ 8 ರಂದು ನಿಧನರಾಗಿರುತ್ತಾರೆ.

1938 ರಲ್ಲಿ ವಿದ್ಯಾರ್ಥಿ ಚಳುವಳಿಗೆ ಧುಮುಕಿದ ಕನಕ್ ಮುಖರ್ಜಿ ಅಂದಿನ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (AISF) ದ ಮುಖಂಡರಾಗಿದ್ದರು. ನಂತರ ಕಮ್ಯುನಿಸ್ಟ್ ಚಳುವಳಿಗೂ ಧುಮುಕಿದರು. 1978 ರಿಂದ ಜೀವಿತದ ಕೊನೆಯಕಾಲದವರೆಗೂ ಪಶ್ಚಿಮ ಬಂಗಾಳದ ರಾಜ್ಯ ಸಮಿತಿ ಸದಸ್ಯರಾಗಿದ್ದರು. 1978 ರಿಂದ 1990 ರವರೆಗೆ ಎರಡು ಬಾರಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

ಜೈಲುವಾಸ : ಸಮರಶೀಲ ಹೋರಾಟಗಾರ್ತಿಯಾದ ಕನಕ್ ಮುಖರ್ಜಿಯವರು ಎಲ್ಲಾ ವಿಧದ ದಬ್ಬಾಳಿಕೆಯನ್ನು ಎದುರಿಸಿ ಜನಪರ ಚಳುವಳಿಯನ್ನು ಮುನ್ನಡೆಸಿದರು. 1949 ರಿಂದ 1952 ರ ವರೆಗೆ ಒಮ್ಮೆ ಜೈಲು ವಾಸ ಅನುಭವಿಸಿದ್ದ ಅವರು 1962 ರಲ್ಲಿ ಭಾರತ-ಚೀನಾ ವಿವಾದದ ಸಂದರ್ಭದಲ್ಲಿ ತನ್ನ ಪತಿ ಸರೋಜ್ ಮುಖರ್ಜಿಯವರೊಂದಿಗೆ) ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳದ ರಾಜ್ಯ ಸಮಿತಿ ಕಾರ್ಯದರ್ಶಿಯಾಗಿದ್ದರು) ಜೈಲು ವಾಸ ಅನುಭವಿಸಿದ್ದರು. ಅವರಿಗೆ ಕ್ರಾಂತಿಕಾರಿ ಶ್ರದ್ಧಾಂಜಲಿಗಳು.

ಪೇಟೆಂಟ್ ಕಾನೂನು 1970ರ ಇತ್ತೀಚಿನ ವಿವಾದಿತ ತಿದ್ದುಡಿಯಿಂದ ಪೇಟೆಂಟ್ ಬಗ್ಗೆ ಎಲ್ಲ
ಕುತೂಹಲ. ಪೇಟೆಂಟ್ ಕಾನೂನು ಬದಲಾದರೆ ಔಷಧಿ ಬೆಲೆ ಏಕೆ ಏರಬೇಕು? ಎಂದು
ಹಲವರಿಗೆ ಅಚ್ಚರಿ. ಪೇಟೆಂಟ್‌ನಂತಹ ವಿಷಯದ ಬಗ್ಗೆ ಮಾಹಿತಿ ಕನ್ನಡದಲ್ಲಿ ಲಭ್ಯವಿರುವು
ಕಡಿಮೆ. ಪುಸ್ತಕವಂತೂ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಈ ಕೊರತೆ ತುಂಬುವ ಪುಸ್ತ
ಋತ ಪುಸ್ತಕ ಹೊರತಂದಿರುವ ಮಾಧವ ಐತಾಳರ ಪುಸ್ತಕ 'ಪೇಟೆಂಟ್ ಪೆಡಂಭೂತ! ಕೆ
ಕೊರತೆಗಳಿದ್ದರೂ ಪೇಟೆಂಟ್‌ನ ಹಲವು ಮೂಲಗಳ ಬಗ್ಗೆ ಪರಿಚಯಿಸುವ ಉತ್ತಮ ಪುಸ್ತಕ
ಕಳೆದ ಡಿಸೆಂಬರ್ 26ರಂದು ತಂದ ಸುಗ್ರೀವಾಜ್ಞೆ ಬಗ್ಗೆ ಸಹ ಉಲ್ಲೇಖ ಇರುವ ಇತ್ತೀಚಿನ
ಪುಸ್ತಕ. ಪೇಟೆಂಟ್ ಬಗ್ಗೆ ವಿವರವಾಗಿ ತಿಳಿದುಕೊಳ್ಳಬಯಸುವವರು ಓದಲೇಬೇಕಾದ ಪು
ಪುಸ್ತಕದ ಕಿರು ವಿಮರ್ಶೆಯೊಂದಿಗೆ ಪುಸ್ತಕದ ಕೆಲವು ಆಯ್ದ ಉತ್ತಮ ಭಾಗಗಳನ್ನು
ಕೊಡಲಾಗಿದೆ ಇಲ್ಲಿ.

‘ಪೇಟೆಂಟ್ ಪೆಡ
ಸಕಾಲಿಕ ಮಾಹಿ

'ಪೇಟೆಂಟ್ ಪೆಡಂಭೂತ' ಪೇಟೆಂಟ್ ಬಗ್ಗೆ ಬಹುಶಃ ಕನ್ನಡದಲ್ಲಿ ಉತ್ತಮ ಸಕಾಲಿಕ ಮಾಹಿತಿ ಕೊಡುವ ಮೊದಲ ಪುಸ್ತಕ. ಪೇಟೆಂಟ್‌ಗಳ ಆಸಕ್ತಿಕಾರಕ ಚಾರಿತ್ರಿಕ ಮೂಲಗಳಿಂದ ಪುಸ್ತಕ ಆರಂಭವಾಗುತ್ತದೆ. ಪೇಟೆಂಟ್‌ಗಳು ಚರಿತ್ರೆಯುದ್ದಕ್ಕೂ ವಸಾಹತುಶಾಹಿಯೊಂದಿಗೆ, ಪ್ರಬುದ್ಧ ದರ್ಪದೊಂದಿಗೆ ತಳಕು ಹಾಕಿಕೊಂಡಿದ್ದರ ಬಗ್ಗೆ ಹಲವು ಉದಾಹರಣೆಗಳನ್ನು ಕೊಡಲಾಗಿದೆ. ಹಿಂದೆನೂ ಪೇಟೆಂಟ್‌ಗೂ ಅನ್ವೇಷಣೆಗೆ ಸಂಶೋಧನೆಗೆ ಉತ್ತೇಜನ ಕೊಡುವುದಕ್ಕೆ ಸಂಬಂಧವಿರಲಿಲ್ಲ. ಬದಲಾಗಿ ಯಾರೋ ಮಾಡಿದ ಸಂಶೋಧನೆ ಅನ್ವೇಷಣೆಯನ್ನು ಲಪಟಾಯಿಸಿ 'ಆಸ್ತಿ' ಮಾಡಿಕೊಳ್ಳುವ ಸಾಧನ ಪೇಟೆಂಟ್ ಎಂದು ಉದಾಹರಣೆಗಳಿಂದ ಹೇಳಲಾಗಿದೆ. ಪೇಟೆಂಟ್ ಹೊಸ ಜ್ಞಾನ ಸೃಷ್ಟಿ, ಬಳಕೆಗೆ ಉತ್ತೇಜನ ಕೊಡುತ್ತದೆ ಎಂಬುದು ಮಿಥ್ಯೆ ಎಂದು ತೋರಿಸಲಾಗಿದೆ. ಜ್ಞಾನದ ವಿನಿಮಯವೇ ಪಾತಕ ಎಂದು ಪರಿಗಣಿಸುವ ಅಮೆರಿಕದಂತಹ ಆರ್ಥಿಕ ಗೂಢಚರ್ಯೆ ತಡೆ ಕಾನೂನಿನ ಧೋರಣೆ ಈಗ ಇಡೀ ಜಗತ್ತಿನಲ್ಲಿ ಹರಡುತ್ತಿದೆ. ಜೈವಿಕವಾಗಿ ಮಾರ್ಪಡಿಸಿದ ಸೂಕ್ಷ್ಮಜೀವಿಗಳಿಗೆ ಪೇಟೆಂಟ್ ಕೊಡುವ ಅಮೆರಿಕದ ಕ್ರಮದಿಂದ, ಪೇಟೆಂಟ್ ಪೆಡಂಭೂತ ಇನ್ನೂ ಅಪಾಯಕರಿಯಾಗಿ ಬೆಳೆದಿದೆ. ಬಾಸ್ಮತಿ ಅಕ್ಕಿ, ಬೇವು, ಅರಿಶಿನಗಳನ್ನು ಬೇರೆ ಬೇರೆ ರೂಪದಲ್ಲಿ ಪೇಟೆಂಟ್ ಮಾಡಿದ್ದರ ಅಪಾಯದ ಬಗ್ಗೆ ಪುಸ್ತಕ ಕ್ಷ-ಕಿರಣ ಬೀರುತ್ತದೆ. ಬೀಜದ ಪೇಟೆಂಟ್, ಟರ್ಮಿನೇಟರ್ ಕೊಡಲಿಯೇಟು ಕೊಡುತ್ತದೆ ಎಂದು ವಿವರಿಸಲಾಗಿದೆ.


ಟ್ರಿಪ್ಸ್ - ಪೇಟೆಂಟ್ ಕಾನೂನುಗಳು

ಅಂತರರಾಷ್ಟ್ರೀಯ ವ್ಯಾಪಾರ ಒಪ್ಪಂದಗಳಲ್ಲಿ ಬೌಧಿಕ ಆಸ್ತಿ, ಪೇಟೆಂಟ್‌ಗಳು ತೂರಿಕೊಂಡ ಬಗೆಗೂ ಟ್ರಿಪ್ಸ್- ಟ್ರಿಮ್ಸ್ ಮಾತುಕತೆಗಳು ಸಾಗಿ ಬಂದ ಬಗೆಗೂ ಮಾಹಿತಿ ಇದೆ. ಜೈವಿಕ ವೈವಿಧ್ಯ ಒಪ್ಪಂದ 1992 ಮತ್ತು ಟ್ರಿಪ್ಸ್ ನಡುವೆ ಸಂಘರ್ಷದ ಬಗೆಗೂ ಉತ್ತಮ ಮಾಹಿತಿ ಇದೆ. ಭಾರತದ ಪೇಟೆಂಟ್ ಕಾಯಿದೆ 1970ರ ಹಿಂದಿನ ಪ್ರಕ್ರಿಯೆಯನ್ನು ವಿವರಿಸಲಾಗಿದೆ. 1986ರ ನಂತರ ಈ ಕಾಯಿದೆಯ 'ನಿಧಾನ ಸಾವು' ಬಗ್ಗೆ ಉತ್ತಮ ವಿವರಣೆ ಇದೆ. 1999, 2002 ರಲ್ಲಿ ತಂದ ಮತ್ತು ಇತ್ತೀಚಿಗೆ ಸುಗ್ರೀವಾಜ್ಞೆ (ಡಿಸೆಂಬರ್ 26, 2004) ಮೂಲಕ ತಂದ ತಿದ್ದುಪಡಿಗಳ ಬಗೆಗೂ ವಿವರಗಳಿವೆ. ಪೇಟೆಂಟ್ ಪಡೆಯುವುದರಲ್ಲಿ ಭಾರತದ ರೆಕಾರ್ಡ ಬಗೆಗೂ ವಿವರ ಕೊಡುತ್ತದೆ ಪುಸ್ತಕ. ಪೇಟೆಂಟ್ ಬಗ್ಗೆ ಮಹತ್ವದ ಅಂಕಿಸಂಖ್ಯೆ ಜತೆ, ಕೊನೆಗೆ 'ಜಾಗತೀಕರಣವೆಂಬ ಅಪಘಾತ"ಕ್ಕೂ ಪೇಟೆಂಟ್‌ಗೂ ಇರುವ ಸಂಬಂಧ ಹೇಳುತ್ತದೆ.

ಕೆಲವು ಕೊರತೆಗಳು

ಪೇಟೆಂಟ್‌ನ ಬಗ್ಗೆ ಕನ್ನಡದ ಓದುಗರಿಗೆ ಇದುರವರೆಗೆ ಲಭ್ಯವಿರದ ಹಲವು ಮಾಹಿತಿಗಳನ್ನು ಕಲೆ ಹಾಕಿದ್ದು, ಹಲವು ಮುಖಗಳನ್ನು ಪರಿಚಯಿಸಿರಿಸುವುದು ಈ ಪುಸ್ತಕದ ಹೆಗ್ಗಳಿಕೆ. ಹಲವು ಭಾಗಗಳಲ್ಲಿ ವಿಶ್ಲೇಷಣೆ ಸಹ ಉತ್ತಮವಾಗಿದೆ. ಆದರೆ ಸಮಗ್ರ ವಿಶ್ಲೇಷಣೆ, ಪೇಟೆಂಟ್‌ನ ಹಲವು ಮುಖಗಳ ವಿಶ್ಲೇಷಣೆಗಳ ಸಂಬಂಧಗಳನ್ನು ನೋಡುವ ಒಟ್ಟಾರೆ ದೃಷ್ಟಿಕೋಣ ಇಲ್ಲದಿರುವುದು ಪುಸ್ತಕದ ಮುಖ್ಯ ಕೊರತೆ. ಪುಸ್ತಕದ ಭಾಗಗಳು ಬಹು ಚೆನ್ನಾಗಿದ್ದರೂ, ಪುಸ್ತಕದ ಒಟ್ಟಾರೆ ಹರಿವು, ಓದಿಸಿಕೊಂಡು ಹೋಗುವುದಿಲ್ಲ. ಹಲವು ಕಡೆ ಇಂಗ್ಲೀಷ್‌ನ ಭಾಷಾಂತರ ಭಾರವಾಗಿ ಓದು ಮುಂದೆ ಸಾಗುವುದಿಲ್ಲ. ಕೆಲವು ಕಡೆ ಅಂಕಿಸಂಖ್ಯೆ, ಮಾಹಿತಿ ಕೊಟ್ಟು ಬಿಡುವುದು, ಕೆಲವು ಕಡೆ ಬರಿಯ ತೀರ್ಮಾನಗಳ ಹೇಳಿಕೆಯಾಗುವುದು ಹೀಗೆ ನಿರೂಪಣೆಯಲ್ಲಿ ಒಂದು ಸಮಗ್ರ ಶೈಲಿ ಕಂಡು ಬರುವುದಿಲ್ಲ. ವಿವಿಧ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು, ವಿಶ್ಲೇಷಣೆಯನ್ನು ಹೀಗೆ ಭಾಷಾಂತರಿಸಿ ಕೊಡಲಾಗಿದೆಯೆನೋ ಅನ್ನಿಸುತ್ತದೆ. ಅವೆಲ್ಲವನ್ನೂ ತಾರ್ಕಿಕವಾಗಿ ಜೋಡಿಸುವ ಪ್ರಯತ್ನ ಅಷ್ಟಾಗಿ ಕಾಣುವುದಿಲ್ಲ. ಈ ಕೊರತೆಗಳು ಇಲ್ಲದಿದ್ದರೆ ಇದು ಒಂದು ಅದ್ಭುತ ಪುಸ್ತಕವಾಗಿರುತ್ತಿತ್ತು. ಆದರೂ ಸಕಾಲಿಕವಾಗಿ ಉತ್ತಮ ಮಾಹಿತಿ ನೀಡುವ, ಮೆಚ್ಚಬೇಕಾದ ಪ್ರಯತ್ನ 'ಪೇಟೆಂಟ್ ಪೆಡಂಭೂತ' ಎಂದೇ ಹೇಳಬಹುದು. ಪೇಟೆಂಟ್ ಬಗ್ಗೆ ವಿವರವಾಗಿ ತಿಳಿಕೊಳ್ಳಬಯಸುವವರು ಓದಲೇಬೇಕಾದ ಪುಸ್ತಕ.





ಪುಸ್ತಕದ ಬೆಲೆ ರೂ. 100
ಋತು ಪ್ರಕಾಶನ, ಬೆಂಗಳೂರು

ಪುಸ್ತಕದಿಂದ

ವಸಾಹತೀಕರಣದೊಂದಿಗೆ ತಳುಕು ಹಾಕಿದೆ

ಚರಿತ್ರೆಯುದ್ದಕ್ಕೂ ಪೇಟೆಂಟ್‌ಗಳು ವಸಾಹತೀಕರಣದೊಂದಿಗೆ ತಳುಕು ಹಾಕಿಕೊಂಡಿವೆ. ಯೂರೋಪ್ ಜಗತ್ತಿನ ವಸಾಹತೀಕರಣಕ್ಕೆ ಹೊರಟಾಗ ಭೂಪ್ರದೇಶಗಳ ವಶಪಡಿಸಿಕೊಳ್ಳುವಿಕೆಯು ಪೇಟೆಂಟ್‌ಗಳ ಗುರಿಯಾಗಿದ್ದರೆ, ಈಗ ಅರ್ಥ ನೀತಿಯನ್ನು ತಮ್ಮ ಗುರಿಯಾಗಿಸಿಕೊಂಡಿವೆ. ತೃತೀಯ ಜಗತ್ತು ಪೇಟೆಂಟ್‌ಗಳನ್ನು ಮರುವಸಾಹತೀಕರಣದ ಹತಾರವಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ದೂರಿದೆ, ಪಾಶ್ಚಾತ್ಯ ಶಕ್ತಿಗಳು ಅದು 'ಸ್ವಾಭಾವಿಕ ಹಕ್ಕು' ಎನ್ನುತ್ತವೆ. ಮರುವಸಾಹತೀಕರಣ ಒಂದು ಜಾತ್ಯತೀತ ಯೋಜನೆಯಾಗಿದ್ದು, ಇದನ್ನು ಮುನ್ನಡೆಸುತ್ತಿರುವ ಶಕ್ತಿ ಮಾರುಕಟ್ಟೆಯೆಂಬ ಹೊಸ ಧರ್ಮ. ಭೂಪ್ರದೇಶ, ಚಿನ್ನ, ಖನಿಜಗಳು ಇಂದು ದಮನದ ಗುರಿಯಾಗಿ ಉಳಿದಿಲ್ಲ. ಬದಲಿಗೆ ಮಾರುಕಟ್ಟೆ ಹಾಗು ಆರ್ಥಿಕ ವ್ಯವಸ್ಥೆಯ ನಿಯಂತ್ರಣವು ಇಂದು ವಿಜಯಯಾತ್ರೆಯ ಗುರಿಯಾಗಿವೆ. ವಸಾಹತು ಕಾಲದಲ್ಲಿ ನೆಲವನ್ನು ಆಸ್ತಿಯಾಗಿ ಬದಲಾಯಿಸಿದ್ದರೆ, ಇಂದು ಜ್ಞಾನವನ್ನು ಹಣವಾಗಿ ಪರಿವರ್ತಿಸಲಾಗುತ್ತಿದೆ. ಇದರಿಂದಾಗಿಯೇ ಈಗ ಪೇಟೆಂಟ್‌ಗಳನ್ನು 'ಬೌದ್ಧಿಕ ಆಸ್ತಿ'ಗೆ ನೀಡಲಾಗುತ್ತಿದೆ. ಆಗ ಮೂಲನಿವಾಸಿಗಳಿದ್ದರೂ 'ಕಂಡುಹಿಡಿದ' ನೆಲವನ್ನು ಶ್ವೇತವರ್ಣದ ಯುರೋಪಿಯನ್ನರು ವಾಸಿಸದೆ ಇದ್ದುದರಿಂದ 'ಖಾಲಿ ನೆಲ' ಎನ್ನಲಾಯಿತು. ಇದೇ ರೀತಿ 'ಶೋಧಿಸಿದ' ಪೇಟೆಂಟ್‌ಗಳಿಂದ ಬೌದ್ಧಿಕ ಆಸ್ತಿಯಾಗಿ ಪರಿವರ್ತಿತವಾದ ಜ್ಞಾನವು ಈಗಾಗಲೇ ಇದ್ದ ದೇಶಿ ಜ್ಞಾನವ್ಯವಸ್ಥೆಯ ಕಳವು ಆಗಿರುತ್ತದೆ. ತಾವು ಶೋಧಿಸಿದೆವು ಎಂಬ ಘೋಷಣೆಯು ಜಾಗತೀಕರಿಸಿದ ಪೇಟೆಂಟ್ ಸಾಮ್ರಾಜ್ಯದ ಮೂಲಕ ಮಾರುಕಟ್ಟೆ ಹಾಗು ಆರ್ಥಿಕ ವ್ಯವಸ್ಥೆಯನ್ನು ಹಸ್ತಗತ ಮಾಡಿಕೊಳ್ಳಲು ನೀಡಿದ ಸಬೂಬು. ಅನ್ವೇಷಕ ಪ್ರವೃತ್ತಿಗೆ ಉತ್ತೇಜನದ ಹೆಸರಿನಲ್ಲಿ ಜಾಗತಿಕ ಆರ್ಥಿಕತೆಯ ನಿಯಂತ್ರಣದ ಹುನ್ನಾರ ನಡೆಯುತ್ತಿದೆ.

ದೋಣಿ ಕಂಡುಹಿಡಿಯದವನಿಗೆ ನದಿಸಂಚಾರ ಪೇಟೆಂಟ್

'ಮೂಲಪ್ರತಿ'ಯನ್ನಾಧರಿಸಿ ನೀಡುವ ಪೇಟೆಂಟ್‌ಗಳ ಇನ್ನೊಂದು ಲಕ್ಷಣವೆಂದರೆ ಆ ಉತ್ಪನ್ನ 'ನವೀನ'ವಾಗಿರಬೇಕೆಂದೇನೂ ಇಲ್ಲ. ಇದರಿಂದಾಗಿ ಕೈಗಾರಿಕಾ ಕ್ರಾಂತಿಯ ಬಹುಪಾಲು ಶೋಧಗಳ ತವರು ಯುರೋಪ್. ಆದರೂ, ಇಂಗ್ಲೆಂಡ್‌ನಲ್ಲಿ ಅವನ್ನು ಕಂಡುಹಿಡಿದರೆ ಇಲ್ಲವೇ ಅವು ಇಂಗ್ಲೆಂಡ್‌ನಲ್ಲಿ ಹೊಸ ಉತ್ಪನ್ನಗಳಾದರೆ, ಪೇಟೆಂಟ್ ನೀಡಲಾಗುತ್ತಿತ್ತು. ಇದರಿಂದಾಗಿ ದೋಣಿಯನ್ನು ಕಂಡುಹಿಡಿಯದ ಜೇಮ್ಸ್ ರುಮ್ಸೆಗೆ ನದಿ ಸಂಚಾರಕ್ಕೆ ಪೇಟೆಂಟ್ ನೀಡಲಾಯಿತು. 1787ರ ಮಾರ್ಚ್ 28ರಂದು ಅಮೆರಿಕದ ಪೆನ್ಸಿಲ್ವೇನಿಯಾ ರಾಜ್ಯದ ಜಾನ್ ಪಿಚ್‌ಗೆ ಎಲ್ಲ ರೀತಿಯ ದೋಣಿ ನಿರ್ಮಾಣ, ಬಳಕೆ, ಯಾನಕ್ಕೆ ಪೆನ್ಸಿಲ್ವೇನಿಯಾ ರಾಜ್ಯದ ಗಡಿಯೊಳಗೆ 14 ವರ್ಷ ವಿಶೇಷ ಹಕ್ಕು ನೀಡಲಾಯಿತು. 1772ರಲ್ಲಿ ಸ್ಕಾಟ್‌ಲೆಂಡ್‌ನಲ್ಲಿ ಜೇಮ್ಸ್‌ವ್ಯಾಟ್ ಉಗಿಯಂತ್ರ ಕಂಡುಹಿಡಿದಿದ್ದರೂ, ಅಮೆರಿಕದಲ್ಲಿ ಆ ಪೇಟೆಂಟ್ ಏನೂ ಮಾಡದ ಜಾನ್‌ಪಿಚ್‌ಗೆ ಕಿಲುಬು ಕಾಸು, ಶ್ರಮವಿಲ್ಲದೆ ದಕ್ಕಿತು!



ಅಮೆರಿಕದ ಬಹುಮುಖ್ಯ ಆಸ್ತಿ - ಪೇಟೆಂಟ್

ಪೇಟೆಂಟ್‌ಗಳು ಅಮೆರಿಕದ ಬಹುಮುಖ್ಯ ಆಸ್ತಿಯಾಗಿದ್ದು, ರಫ್ತಿನ ಹೆಚ್ಚಳಕ್ಕೆ ಕಾರಣವಾಗಿವೆ. 1947ರಲ್ಲಿ ಅಮೆರಿಕದ ಒಟ್ಟು ರಫ್ತಿನಲ್ಲಿ ಬೌದ್ಧಿಕ ಆಸ್ತಿ ಉತ್ಪನ್ನಗಳ ಪ್ರಮಾಣ ಶೇ.10ಕ್ಕಿಂತ ಕಡಿಮೆ ಇತ್ತು. 1986ಕ್ಕೆ ಅದು ಶೇ.37ಕ್ಕೆ, 1994ರ ಹೊತ್ತಿಗೆ ಶೇ.50ಕ್ಕೆ ಹೆಚ್ಚಿತು. ಆದರೆ ಈ ಜ್ಞಾನದ ರಫ್ತು ಪ್ರಪಂಚದ ಎಲ್ಲ ದೇಶಗಳು ಅಮೆರಿಕದಂತದ್ದೇ ಪೇಟೆಂಟ್ ಕಾನೂನು ಹೊಂದಿದ್ದರೆ ಮಾತ್ರ ಸಾಧ್ಯ. 1987ರಲ್ಲಿ ಅಮೆರಿಕದ ಔಷಧ ಹಾಗೂ ಕಂಪ್ಯೂಟರ್ ಲಘುವರ (ಸಾಫ್ಟ್‌ವೇರ್) ಉದ್ಯಮಗಳು ಅಮೆರಿಕದಂತದ್ದೇ ಪೇಟೆಂಟ್ ಕಾನೂನು ಜಗತ್ತಿನೆಲ್ಲೆಡೆ ಇದ್ದಿದ್ದರೆ ಹೆಚ್ಚಬಹುದಾದ ಲಾಭ ಕುರಿತು ಲೆಕ್ಕಾಚಾರ ನಡೆಸಿದವು. ಅಮೆರಿಕದ ಅಂತರರಾಷ್ಟ್ರೀಯ ವ್ಯಾಪಾರ ಆಯೋಗದ ಪ್ರಕಾರ ಈ ತಪ್ಪಿಹೋಗುತ್ತಿರುವ ಆದಾಯದ ವಾರ್ಷಿಕ ಪ್ರಮಾಣ 43 ರಿಂದ 61 ಬಿಲಿಯನ್ ಡಾಲರ್, ಪ್ರಪಂಚದ ಎಲ್ಲ ದೇಶಗಳೂ ಅಮೆರಿಕದಂತದ್ದೇ ಪೇಟೆಂಟ್ ಕಾನೂನು ಹೊಂದಿದ್ದರೆ ದೇಶದ ವ್ಯಾಪಾರ ಕೊರತೆ (ಟ್ರೇಡ್ ಡಿಫಿಸಿಟ್) ಪ್ರಮಾಣ ಕಡಿಮೆ ಮಾಡಬಹುದು ಎಂದು ಉದ್ಯಮಗಳು ಅಧ್ಯಕ್ಷ ರೇಗನ್ ಮೇಲೆ ಒತ್ತಡ ಹೇರಿದವು. ವಿಶ್ವ ವ್ಯಾಪಾರ ಸಂಘಟನೆಯ ಚೌಕಟ್ಟಿನೊಳಗೆ ಪೇಟೆಂಟ್ ಬರಲು ಕಾರಣ ಇದು. ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರದ ಅನ್ವೇಷಣೆಗಳು ತಾಂತ್ರಿಕ-ಆರ್ಥಿಕ ಬೆಳವಣಿಗೆಗೆ ಶಕ್ತಿ ತುಂಬುತ್ತಿದ್ದುದರಿಂದ ಅವನ್ನು ಪೇಟೆಂಟ್‌ಗಳು ಗುರಿಯಾಗಿಸಿಕೊಂಡವು.

ಸೂಕ್ಷ್ಮಜೀವಿ - ಹೊಸ 'ಉತ್ಪನ್ನ'

ಜೀವ ಪ್ರಕಾರಗಳಿಗೆ ಪೇಟೆಂಟ್ ನೀಡುವಲ್ಲಿ ಮೊದಲ ಹೆಜ್ಜೆ - ಸೂಕ್ಷ್ಮಜೀವಿಗಳಿಗೆ (ಜೈವಿಕವಾಗಿ ಮಾರ್ಪಡಿಸಿದವು) ಪೇಟೆಂಟ್ ನೀಡುವಿಕೆ. 1980ಕ್ಕೆ ಮೊದಲು ಅಮೆರಿಕದ ಪೇಟೆಂಟ್ ಕಚೇರಿಯು ಪ್ರಯೋಗಶಾಲೆಯಲ್ಲಿ ಉತ್ಪತ್ತಿಯಾದ ಸೂಕ್ಷ್ಮ ಜೀವಿಗಳಿಗೆ ಪೇಟೆಂಟ್ ನೀಡುತ್ತಿರಲಿಲ್ಲ. ಜೂನ್ 16, 1980ರಲ್ಲಿ ಅಮೆರಿಕದ ಸುಪ್ರೀಂಕೋರ್ಟ್ ಮಾನವ ನಿರ್ಮಿತ ಬ್ಯಾಕ್ಟೀರಿಯಾಕ್ಕೆ ಪೇಟೆಂಟ್ ನೀಡಬಹುದೆಂದು ತೀರ್ಪಿತ್ತಿತು. ಜನರಲ್ ಎಲೆಕ್ಟ್ರಿಕ್‌ನ ಆನಂದ ಮೋಹನ ಚಕ್ರವರ್ತಿ ತೈಲವನ್ನು ಒಡೆಯಬಲ್ಲ ಸೂಕ್ಷ್ಮಜೀವಿಗೆ ಪೇಟೆಂಟ್ ನೀಡಬೇಕೆಂದು ಅರ್ಜಿ ಸಲ್ಲಿಸಿದರು. ಅವರು ಹೊಸದೇನನ್ನೂ ಸೃಷ್ಟಿಸಿರಲಿಲ್ಲ. ಬದಲಿಗೆ ಈಗಾಗಲೇ ಇದ್ದ ಬ್ಯಾಕ್ಟೀರಿಯಾಗಳ ವಂಶವಾಹಿಗಳನ್ನು ಅದಲು - ಬದಲು ಮಾಡಿದರಷ್ಟೇ. ಚಕ್ರವರ್ತಿ ತಾವು ಹೊಸಜೀವಿಯನ್ನು ಸೃಷ್ಟಿಸಿದ್ದೇನೆಂದು ಹೇಳದಿದ್ದರೂ, ಸುಪ್ರೀಂಕೋರ್ಟ್ ಸೂಕ್ಷ್ಮಜೀವಿಯನ್ನು 'ಉತ್ಪನ್ನ' ಎಂದು ಗಣಿಸಿ ಪೇಟೆಂಟ್ ನೀಡಿತು. ಅಮೆರಿಕದ ಪೇಟೆಂಟ್ ಕಾನೂನು ಸಸ್ಯ ಮತ್ತು ಪ್ರಾಣಿಗಳನ್ನು ಪೇಟೆಂಟ್‌ನಿಂದ ಹೊರಗಿಟ್ಟಿದ್ದರೂ, ಅಮೆರಿಕ ಅಂದಿನಿಂದ ಎಲ್ಲ ಜೀವ ಪ್ರಕಾರಾಗಳಿಗೂ ಪೇಟೆಂಟ್ ನೀಡಲಾರಂಭಿಸಿತು. ಇಂದು ಮೀನು,

ವಸ, ಇಲಿ ಹಾಗೂ ಹಂದಿಗೆ ಪೇಟೆಂಟ್ ೀಡಲಾಗಿದೆ. ಈ ಪೇಟೆಂಟ್‌ಗಳ ಅವಧಿ 20 ರ್ಷ. ಚಕ್ರವರ್ತಿ ಬ್ಯಾಕ್ಟೀರಿಯಾಗಳ ಸಹಜ ್ರಯೆಗಳ ಮಧ್ಯೆ ಪ್ರವೇಶಿಸಿ ಹೊಸ ಪ್ರಭೇದವನ್ನು ್ಸೃಷ್ಟಿಸಿದರಷ್ಟೇ. ಆತ ಸೃಷ್ಟಿಸಿದನೆನ್ನಲಾದ ್ಯಾಕ್ಟೀರಿಯಾ ಎಲ್ಲ ಕೋಶ ಜೀವಿಗಳಂತೆ ಎದುಕುತ್ತದೆ, ಪುನರುತ್ಪಾದಿಸುತ್ತದೆ. ಅದು ್ರಕೃತಿಯ ಸೃಷ್ಟಿಯಲ್ಲ ಎನ್ನುವ ವಾದವು ಮನುಷ್ಯನ ಕ್ತಿಯನ್ನು ಉತ್ಪ್ರೇಕ್ಷಿಸುತ್ತದೆ ಹಾಗು ಜೀವಶಾಸ್ತ್ರದ ುರಿತ ಅಜ್ಞಾನದ ಫಲವೆನ್ನಬಹುದು.

ಭೂತ'

ತ

ಬಾಸ್ಮತಿ

ಬಾಸ್ಮತಿಯನ್ನು ಈ ಉಪಖಂಡದಲ್ಲಿ ಶತಮಾನಗಳಿಂದ ಬೆಳೆಯುತ್ತಿದ್ದರೆನ್ನುವುದಕ್ಕೆ ಜನಪದ, ಕಾವ್ಯ ಹಾಗೂ ಪುರಾತನ ಗ್ರಂಥಗಳಲ್ಲಿ ದಾಖಲೆಯಿದೆ. ಭಾರತದಲ್ಲಿ 27 ವಿವಿಧ ಬಾಸ್ಮತಿ ತಳಿಗಳನ್ನು ಬೆಳೆಯಲಾಗುತ್ತಿದೆ. ಹಿಸ್ಸಾರ್‌ನ ಹರಿಯಾಣ ಕೃಷಿ ವಿಶ್ವವಿದ್ಯಾಲಯದ ಪ್ರಕಾರ

ಶರತ್ ಚಂದ್ರ

ಬಾಸ್ಮತಿ ಕುರಿತು ಪ್ರಥಮ ಉಲ್ಲೇಖವಿರುವುದು 1766 ರಲ್ಲಿ ಕವಿ ವಾರೀಸ್ ಶಾ ಬರೆದ ಹೀರ್‌ರಾಂಜಾದಲ್ಲಿ. ಅತ್ಯುತ್ತಮ ಸುಗಂಧವಿರುವ ಈ ಅಕ್ಕಿಯನ್ನು ರಾಜರು ಬಹಳ ಹಿಂದಿನಿಂದ ಕಾಪಿಟ್ಟುಕೊಂಡು ಬಂದಿದ್ದಾರೆ. ಇದನ್ನು ಬೆಳೆಸಿ, ಅಭಿವೃದ್ಧಿಪಡಿಸಿದವರು ರೈತರು. 1997ರ ಸೆಪ್ಟೆಂಬರ್ 2 ರಂದು ಟೆಕ್ಸಾಸ್ ಮೂಲದ ರೈಸ್‌ಟೆಕ್ ಇಂಕ್‌ಗೆ (ಪೇಟೆಂಟ್ ಸಂಖ್ಯೆ 5663484) ಬಾಸ್ಮತಿಯ ಪೇಟೆಂಟ್ ನೀಡಲಾಯಿತು. ಈ ಪೆಟೆಂಟ್ ಬಾಸ್ಮತಿಯ ವಂಶವಾಹಿಯಲ್ಲದೆ, ರೈತರು ಅಭಿವೃದ್ಧಿಪಡಿಸಿದ ಬಾಸ್ಮತಿಯ ಮೇಲೂ ರೈಸ್‌ಟೆಕ್‌ಗೆ ಹಕ್ಕು ನೀಡಿತು. ರೈಸ್‌ಟೆಕ್ ಕಾಸ್ಮತಿ, ಟೆಕ್ಸ್‌ಮತಿ ಹಾಗೂ ಜಾಸ್ಮತಿ ಹೆಸರಿನಲ್ಲಿ ಬಾಸ್ಮತಿ ಅಕ್ಕಿ ವ್ಯಾಪಾರ ಪ್ರಾರಂಭಿಸಿದೆ. ರೈಸ್‌ಟೆಕ್‌ನ ಬಾಸ್ಮತಿ ಭಾರತದ ಸಾಂಪ್ರದಾಯಿಕ ತಳಿಗಳಂತೆ ಉದ್ದ ಕಾಳು, ವಿಶಿಷ್ಟ ಸುಗಂಧ, ಹೆಚ್ಚು ಇಳುವರಿ ಹಾಗೂ ಮಧ್ಯಮ ಎತ್ತರ ಹೊಂದಿದೆ. ಯಾವ ರೀತಿಯಲ್ಲೂ ಭಾರತ ತಳಿಗಳಿಗಿಂತ ವಿಶಿಷ್ಟವಲ್ಲದ ರೈಸ್‌ಟೆಕ್ ಬಾಸ್ಮತಿಯ ಪೇಟೆಂಟ್‌ಗೆ ಅರ್ಹವಲ್ಲ.


ಬೇವು

1992ರಲ್ಲಿ ಅಮೆರಿಕದ ರಾಷ್ಟ್ರೀಯ ಸಂಶೋಧನಾ ಮಂಡಳಿಯು 'ಪಾಶ್ಚಿಮಾತ್ಯ ಜಗತ್ತಿನ ಕಾರ್ಪೊರೇಟ್ ಸಂಸ್ಥೆಗಳ ಕಣ್ಣು ತೆರೆಸಲು' ಬೇವಿನ ಉತ್ಪನ್ನಗಳ ಕುರಿತು ವರದಿಯೊಂದನ್ನು ಪ್ರಕಟಿಸಿತು. ಆ ಮಂಡಳಿಯ ಸದಸ್ಯರ ಪ್ರಕಾರ 'ಕೃತಕ ಕೀಟನಾಶಕ'ಗಳ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲದ ಇಂದಿನ ದಿನಗಳಲ್ಲಿ ಬೇವಿಗೆ ಭಾರಿ ಮಾರುಕಟ್ಟೆಯಿದೆ.

ಬೇವಿನ ಮುಖ್ಯ ಅಂಶಗಳನ್ನು ಆಧರಿಸಿದ ಉತ್ಪನ್ನ, ಉತ್ಪಾದನೆ ವಿಧಾನಗಳಿಗೆ ಪೇಟೆಂಟ್ ನೀಡಲಾಗಿದೆ. ಬೇವಿನ ಪೇಟೆಂಟ್ ಕುರಿತು ಭಾರತದಲ್ಲಿ ಭಾರೀ ಪ್ರತಿಭಟನೆ ನಡೆದಿದೆ. ಗ್ರೇಸ್ ಪ್ರಕಾರ ಸಂಸ್ಥೆಯ ಆಧುನಿಕ ಸಂಶ್ಲೇಷಣೆ ವಿಧಾನವು ನಿಜವಾದ ಅನ್ವೇಷಣೆ. ಸಾಂಪ್ರದಾಯಿಕ ಜ್ಞಾನವು ಈ ಸಂಶೋಧನೆ ಮತ್ತು ಅಭಿವೃದ್ಧಿಗೆ ಮೂಲವಾದರೂ, ಗ್ರೇಸ್‌ನ ಉತ್ಪನ್ನ ಹೊಸದು ಹಾಗೂ ಪ್ರಕೃತಿಯ ಉತ್ಪನ್ನಕ್ಕಿಂತ ಬೇರೆ ರೀತಿಯದು ಎಂದು ವಾದಿಸಲಾಗಿದೆ. ಈ ಉತ್ಪಾದನಾ ವಿಧಾನ ಹೊಸದು ನಿಜ. ಆದರೆ ಆ 'ಹೊಸತನ' ಪಾಶ್ಚಿಮಾತ್ಯದ ಅಜ್ಞಾನದಲ್ಲಿದೆ. 2000 ವರ್ಷಗಳಿಂದ ಬೇವಿನ ಉತ್ಪನ್ನಗಳನ್ನು ವಿವಿಧ ಉತ್ಪಾದನಾ ವಿಧಾನ ಬಳಸಿ ತಯಾರಿಸಲಾಗುತ್ತಿದೆ. ಆದರೆ ಆ ಉತ್ಪನ್ನಗಳಿಗೆ ವೈಜ್ಞಾನಿಕ ಲ್ಯಾಟಿನ್ ಹೆಸರು ಇಟ್ಟಿಲ್ಲ. ಬೇವಿನ ಕುರಿತ ಸಾಮಾನ್ಯ ಜ್ಞಾನ ಹಾಗು ಬಳಕೆಯಿಂದಾಗಿ, ಭಾರತೀಯ ಕೇಂದ್ರ ಕೀಟನಾಶಕ ಮಂಡಳಿಯು 1968ರ ಕೀಟನಾಶಕಗಳ ಕಾಯಿದೆಯಡಿ ಬೇವನ್ನು 'ಕೀಟನಾಶಕ' ಎಂದು ನೋಂದಾಯಿಸಿಲ್ಲ. ಮಂಡಳಿ ಪ್ರಕಾರ ಬೇವನ್ನು ವಿವಿಧ ಉದ್ದೇಶಗಳಿಗಾಗಿ, ಯಾವುದೇ ಪರಿಣಾಮಗಳಿಲ್ಲದೆ ಅನಾದಿಕಾಲದಿಂದ ಬಳಸಲಾಗುತ್ತಿದೆ. ಆದರೆ ಅಮೆರಿಕದ ಪರಿಸರ ಸಂರಕ್ಷಣಾ ಏಜೆನ್ಸಿ ಭಾರತೀಯರ ಸಾಂಪ್ರದಾಯಿಕ ಜ್ಞಾನವನ್ನು ಮಾನ್ಯ ಮಾಡುತ್ತಿಲ್ಲ.

ಟರ್ಮಿನೇಟರ್ ಬೀಜದ ಅಪಾಯ

ಬೀಜಗಳನ್ನು ಪೇಟೆಂಟ್ ಮಾಡಿಸುವಲ್ಲಿ ಇರುವ ಅತಿ ದೊಡ್ಡ ಅಪಾಯವು ಟರ್ಮಿನೇಟರ್ ತಂತ್ರಜ್ಞಾನದಲ್ಲಿದೆ. ಟರ್ಮಿನೇಟರ್ ತಂತ್ರಜ್ಞಾನವನ್ನು ಹೈಬ್ರಿಡ್ ಅಲ್ಲದ, ಜೈವಿಕವಾಗಿ ಬದಲಿಸಿದ ಇಲ್ಲವೇ ಮುಕ್ತ ಪರಾಗಸ್ಪರ್ಶದಿಂದ ಸೃಷ್ಟಿಯಾದ, ಬೀಜೋತ್ಪಾದನೆ ಸಂಸ್ಥೆಗಳು ಮಾರುವ ಬೀಜಗಳನ್ನು ರೈತರು ಉಳಿಸಿಕೊಂಡು ಮುಂದಿನ ಬಿತ್ತನೆಗೆ ಬಳಸದಂತೆ ಮಾಡಲು ಸೃಷ್ಟಿಸಲಾಗಿದೆ. ಅಮೆರಿಕದ ಕೃಷಿ ಇಲಾಖೆ ಮತ್ತು ಮಾನ್‌ಸಾಂಟೋದ ಅಂಗ ಸಂಸ್ಥೆ ಡೆಲ್ಟಾ ಆ್ಯಂಡ್ ಪೈನ್‌ಲ್ಯಾಂಡ್ ಕಂಪನಿ (ಇದು ಹತ್ತಿ ಬೀಜ ಉತ್ಪಾದಿಸುವ ಜಗತ್ತಿನ ಅತ್ಯಂತ ದೊಡ್ಡ ಸಂಸ್ಥೆ) ಜಂಟಿಯಾಗಿ ತಾವು ಹೊಸ ಕೃಷಿ ಜೈವಿಕ ತಂತ್ರಜ್ಞಾನವೊಂದಕ್ಕೆ ಪೇಟೆಂಟ್ ಪಡೆದಿರುವುದಾಗಿ ಘೋಷಿಸಿದವು. 'ಸಸ್ಯ ವಂಶವಾಹಿ ಅಭಿವ್ಯಕ್ತಿ ನಿಯಂತ್ರಣ' ಎಂದು ಹೆಸರಿಡಲಾದ ಈ ಪೇಟೆಂಟ್ ಅದರ ಮಾಲೀಕರು ಹಾಗೂ ಲೈಸನ್ಸ್



ಹೊಂದಿರುವಾತನಿಗೆ ಭ್ರೂಣವನ್ನು ಕೊಲ್ಲಬಲ್ಲ ಬಂಜೆ ಬೀಜದ ಸೃಷ್ಟಿಗೆ ಅನುಮತಿ ಕೊಡುತ್ತದೆ. ಎಲ್ಲ ಪ್ರಭೇದದ ಬೀಜ ಹಾಗೂ ಸಸ್ಯಗಳಿಗೂ ಈ ಪೇಟೆಂಟ್ ಅನ್ವಯಿಸುತ್ತದೆ. ಮುಂದಿನ ಬೆಳೆಗಾಗಿ ಈ ಬೀಜದ ಉಳಿಸುವಿಕೆ ಸಾಧ್ಯವಿಲ್ಲ. ಇದರಿಂದಾಗಿ ಪ್ರತಿವರ್ಷ ರೈತ ಹೊಸ ಬೀಜವನ್ನು ಬೀಜೋತ್ಪಾದನೆ ಸಂಸ್ಥೆಗಳಿಂದ ಖರೀದಿಸಬೇಕಾಗುತ್ತದೆ.

ಅರಿಷಿಣ

ವೈಟ್‌ಕಪ್, ಎಲಿಗೆನ್ಸ್‌ಪಿಂಕ್, ಪಿಂಕ್ ಶೇಡ್, ಸಯಾಮ್ ಸ್ನೋ, ಪರ್ಲ್ ಸ್ನೋ, ಥ್ಯಾಕ್ಯಾಂಡಿ ಇವೆಲ್ಲ ಜನಪ್ರಿಯ ಅರಿಷಿಣದ ವೈವಿಧ್ಯಗಳು. ಮೊದಲಿನ ಮೂರನ್ನು ಜಪಾನಿನ ಟಕೇಡಾ ಕೆಮಿಕಲ್ ಇಂಡಸ್ಟ್ರೀಸ್, ಉಳಿದ 3ನ್ನು ಹಾಲೆಂಡ್‌ನ ಸಂಸ್ಥೆಗಳು ಅಭಿವೃದ್ಧಿಪಡಿಸಿದ್ದು, ಅವುಗಳ ಮೇಲೆ ಬೌದ್ಧಿಕ ಆಸ್ತಿ ಹಕ್ಕು ಹೊಂದಿವೆ.

ರಾಸಾಯನಿಕಗಳನ್ನು ತಯಾರಿಸುವ ಜಪಾನಿನ ದೈತ್ಯ ಸಂಸ್ಥೆ ಟಕೇಡಾ ಈಗ ಔಷಧ ತಯಾರಿಕೆ ಕ್ಷೇತ್ರಕ್ಕೆ ಕಾಲಿರಿಸಿದ್ದು, ತಾನು ಅಭಿವೃದ್ಧಿಪಡಿಸಿದ ಅರಿಶಿಣದ ತಳಿಗಳ ಔಷಧೀಯ ಗುಣ ರಕ್ಷಿಸಲು ಪೇಟೆಂಟ್ ಪಡೆದುಕೊಂಡಿದೆ. ಹಾಲೆಂಡ್‌ನ ಕೆ.ಪಿ.ಹಾಲೆಂಡ್ ಸಂಸ್ಥೆಯು ಕುಂಡಗಳಲ್ಲಿ ಬೆಳೆಸುವ ಅರಿಷಿಣದ ತಳಿಗಳನ್ನು ಅಭಿವೃದ್ಧಿಪಡಿಸಿದೆ.

ಅರಿಷಿಣದ ಗಾಯ ವಾಸಿ ಮಾಡುವ ಗುಣ ಕುರಿತ ಪೇಟೆಂಟ್‌ನ್ನು ಭಾರತ ಪ್ರಶ್ನಿಸಿ ಗೆದ್ದಿತು. ಆದರೆ ಈ ಅದ್ಭುತ ಗಿಡ (ಕುರ್ಕುಮಾ ಲೊಂಗಾ)ದ 18 ವೈವಿಧ್ಯಗಳ ಮೇಲೆ ಕಾರ್ಪೋರೇಟ್ ಸಂಸ್ಥೆಗಳು ಹಕ್ಕು ರಕ್ಷಣೆ ಪಡೆದಿವೆ. ಸಸ್ಯಪೋಷಕರ ಹಕ್ಕು(ಪಿಬಿಆರ್) ಮೂಲಕ ಹೊಸ ತಳಿಯೊಂದರ ರಕ್ಷಣೆ ಆಗಬೇಕೆಂದರೆ ಅದಕ್ಕೆ ಬೇರೊಂದು ಪದನಾಮ (ಡಿನಾಮಿನೇಷನ್)ಕೊಡಬೇಕು. ಪಿಬಿಆರ್ ಮೂಲಕ ರಕ್ಷಣೆ ಪಡೆಯುತ್ತಿರುವ ಸಸ್ಯಗಳ ಪಟ್ಟಿ ಬೆಳೆಯುತ್ತಿದ್ದು, ಗುಲಾಬಿಯ 13,362 ಜೋಳದ 15987, ಗೋಧಿಯ 7306 ಹಾಗೂ ಟೊಮೋಟೋದ 2332 ವಿಧಗಳ ಮೇಲ ಈ ರೀತಿಯ ರಕ್ಷಣೆ ಪಡೆಯಲಾಗಿದೆ.

1970 ರ ಪೇಟೆಂಟ್ ಕಾಯಿದೆ

1970 ರ ಕಾಯಿದೆಯು ಸಂಶೋಧನೆಯನ್ನು ಉತ್ತೇಜಿಸಲು ಹಾಗೂ ವಾಣಿಜ್ಯಕವಾಗಿ ಆ ಅನ್ವೇಷಣೆಯನ್ನು ಭಾರತದಲ್ಲೇ ಉತ್ಪಾದಿಸುವುದಿದ್ದರೆ ಮಾತ್ರ ಪೇಟೆಂಟ್ ನೀಡಬೇಕೆಂದು ಹೇಳಿತು. ಪೇಟೆಂಟ್ ಆದ ವಸ್ತುಗಳನ್ನು ಆಮದು ಮಾಡಿಕೊಳ್ಳಬಾರದು. ಏಕಸ್ವಾಮ್ಯ ಸಾಧಿಸಲು ಪೇಟೆಂಟ್ ನೀಡಬಾರದು ಎಂದು ಸ್ಪಷ್ಟಪಡಿಸಿತು. ಸಾರ್ವಜನಿಕ ಹಿತಾಸಕ್ತಿ ಕಾಯಲು ಈ ಕಾಯಿದೆ ಮಾಡಿದ್ದೆಂದರೆ . ಆಹಾರ ಮತ್ತು ಔಷಧಗಳನ್ನು ಪೇಟೆಂಟ್‌ನಿಂದ ಹೊರಗಿಟ್ಟಿತು . ಪೇಟೆಂಟ್‌ನ ಜೀವಿತಾವಧಿಯನ್ನು ಕಡಿತಗೊಳಿಸಿತು. . ಆಮದು ದೇಶಿ ಉತ್ಪಾದನೆಗೆ ಸಮ ಎಂಬುದು ತಳ್ಳಿ ಹಾಕಿತು ಹಾಗೂ ಕಡ್ಡಾಯ ಲೈಸೆನ್ಸ್ ಶರತ್ತು ಹೇರಿತು.

ಆಹಾರ ಮತ್ತು ಔಷಧಗಳನ್ನು ಏಕಸ್ವಾಮ್ಯಕ್ಕೊಳಪಡಿಸಬಾರದು. ಇದನ್ನು ಉತ್ಪನ್ನವೊಂದಕ್ಕೆ ಪೇಟೆಂಟ್ ನೀಡದೆ ಉತ್ಪಾದನಾ ವಿಧಾನ ಇಲ್ಲದೇ ತಯಾರಿಕಾ ವಿಧಾನಕ್ಕೆ ಪೇಟೆಂಟ್ ನೀಡುವ ಮೂಲಕ ಸಾಧಿಸಲಾಯಿತು. ವಸ್ತುವೊಂದನ್ನು ಔಷಧ, ಆಹಾರವಾಗಿ ಬಳಸುವ ಸಾಧ್ಯತೆ ಇದ್ದರೆ ಹಾಗೂ ರಾಸಾಯನಿಕ ಪ್ರಕ್ರಿಯೆ ಬಳಸಿ ಉತ್ಪಾದಿಸಿದ ಉತ್ಪನ್ನಗಳಿಗೆ ಪೇಟೆಂಟ್ ನೀಡುವಂತಿಲ್ಲ. ಬದಲಿಗೆ ತಯಾರಿಕಾ ವಿಧಾನಕ್ಕೆ ಪೇಟೆಂಟ್ ನೀಡಬಹುದು. ಇದರರ್ಥ ಔಷಧವೊಂದನ್ನು ಬೇರೆ ವಿಧಾನ (ಪೇಟೆಂಟ್ ಆದ ತಯಾರಿಕಾ ವಿಧಾನ ಬಿಟ್ಟು) ಬಳಸಿ ಉತ್ಪಾದಿಸಬಹುದು. 1970 ರ ಕಾಯಿದೆಯ ಈ ಕಲಮು ಭಾರತವು ಇಂದು ವಿಶ್ವದ ಔಷಧ ತಯಾರಿಕಾ ಕ್ಷೇತ್ರದಲ್ಲಿ ದೊಡ್ಡ ಶಕ್ತಿ ಎನ್ನಿಸಿಕೊಳ್ಳಲು ಕಾರಣವಾಗಿದ್ದು, ಭಾರತದಲ್ಲಿ ಔಷಧಗಳ ಬೆಲೆ ಅತ್ಯಂತ ಕಡಿಮೆ ಇದೆ.

ಸೆಣಬಿಗೆ ಪೇಟೆಂಟ್

ಯುರೋಪಿಯನ್ ಪೇಟೆಂಟ್ ಕಚೇರಿಯಲ್ಲಿ ಹೆಸಿಯನ್ ಸೆಣಬಿನ ನಾರು ಕುರಿತ ವ್ಯಾಜ್ಯದಲ್ಲಿ ಭಾರತ ಜಯಗಳಿಸಿದೆ. ನೆಲ ಮುಚ್ಚಲು ಹಾಗೂ ಪೊಟ್ಟಣ ಕಟ್ಟಲು ಬಳಸುವ ಹೆಸಿಯನ್ ಸೆಣಬಿನ ನಾರಿನ ಮೇಲೆ ಇಂಗ್ಲೆಂಡಿನ ಜಿಯೋಹೆಸ್ ಕಂಪನಿ ಪೇಟೆಂಟ್ ಪಡೆದುಕೊಂಡಿತ್ತು. ತ್ಯಾಜ್ಯ ಹಾಗೂ ಕಸದ ಗುಂಡಿಗಳನ್ನು ಮುಚ್ಚಲು ಇದರ ಬಳಕೆ ತನ್ನ ಶೋಧ ಎಂದು ಘೋಷಿಸಿಕೊಂಡು ಸಂಸ್ಥೆ ಪೇಟೆಂಟ್ ಗಳಿಸಿತ್ತು. ಇದರಿಂದಾಗಿ 1999-2000 ದಲ್ಲಿ 86,000 ಟನ್‌ನಷ್ಟಿದ್ದ ಭಾರತದ ಸೆಣಬಿನ ರಫ್ತು 2001-02 ರಲ್ಲಿ 51,000 ಟನ್‌ಗೆ ಕುಸಿದಿತ್ತು. ಈಗ ರಫ್ತಿನ ಪ್ರಮಾಣ 1.42 ಲಕ್ಷ ಟನ್ ಇದೆ (2003-04). ಈ ವಿವಾದ ಬಗೆಹರಿಯಲು 5 ವರ್ಷ ತೆಗೆದುಕೊಂಡಿದೆ. ಭಾರತದ ಸೆಣಬಿನ ಚೀಲಗಳ ಮೇಲೆ ಬ್ರೆಜಿಲ್ ಹೇರಿದ್ದ ಸುರಿಯುವಿಕೆ ಸುಂಕ ಕುರಿತ ವಿವಾದ ಬಗೆಹರಿದಿದ್ದು, 12 ವರ್ಷಗಳ ನಂತರ ಭಾರತ ಭಾಗಶಃ ಗೆದ್ದಿದೆ. ಬ್ರೆಜಿಲ್ ಸೆಣಬಿನ ಚೀಲ ರಫ್ತು ಮಾಡಿಕೊಳ್ಳುವ ದೊಡ್ಡ ರಫ್ತುದಾರ ದೇಶ. ಈಗ ಸುರಿಯುವಿಕೆ ಸುಂಕವನ್ನು ಬ್ರೆಜಿಲ್ ಸರ್ಕಾರ ಕಡಿಮೆ ಮಾಡಿದೆ.

1970 ರ ಪೇಟೆಂಟ್ ಕಾಯಿದೆ -1,2ನೇ ತಿದ್ದುಪಡಿ

1999, 2002 ರ ತಿದ್ದುಪಡಿಗಳು ಈಗಾಗಲೇ ಪೇಟೆಂಟ್ ಅವಧಿಯನ್ನು 7 ರಿಂದ 20 ವರ್ಷಕ್ಕೆ ವಿಸ್ತರಿಸಿದ್ದು, ಔಷಧ ಹಾಗೂ ಕೃಷಿ ರಾಸಾಯನಿಕಗಳಿಗೆ ವಿಶೇಷ ಮಾರುಕಟ್ಟೆ ಹಕ್ಕು ನೀಡಿದೆ. ಇದರಿಂದಾಗಿ ಪೇಟೆಂಟ್ ಪಡೆಯುವ ಮೊದಲೇ ಉತ್ಪನ್ನಗಳ ಮೇಲೆ ಏಕಸ್ವಾಮ್ಯ ಲಭಿಸಿವೆ.

ತೀವ್ರ ಮೈಲಾಯ್ಡ್ ಲ್ಯುಕೇಮಿಯಾದಿಂದ ಬಳಲುವ ರೋಗಿಗಳು ಬಳಸುವ, ಭಾರತದಲ್ಲಿ ಉತ್ಪಾದಿಸುವ ಜೆನೆರಿಕ್ ಔಷಧಕ್ಕೆ ತಿಂಗಳೊಂದಕ್ಕೆ ತಗಲುವ ವೆಚ್ಚ 9 ರಿಂದ 12,000 ರೂ. ಸರ್ಕಾರ ನ.ವಾರ್ಟಿಸ್‌ನ ಔಷಧ ಗ್ಲೀವೆಕ್‌ಗೆ ವಿಶೇಷ ಮಾರುಕಟ್ಟೆ ಹಕ್ಕು ನೀಡಿರುವುದರಿಂದ, ಜೆನೆರಿಕ್ ಔಷಧಗಳನ್ನು ದೇಶಿ ಉತ್ಪಾದಕರು ಹಿಂತೆಗೆದುಕೊಳ್ಳಬೇಕಾಗುತ್ತದೆ. ಗ್ಲೀವೆಕ್ ವೆಚ್ಚ ತಿಂಗಳೊಂದಕ್ಕೆ ರೂ. 1.2 ಲಕ್ಷ ಆಗಲಿದ್ದು, ಈ ಜೀವರಕ್ಷಕ ಔಷಧ ಬಳಸುವವರು ಸಾವಿಗೆ ಶರಣಾಗಬೇಕಾಗುತ್ತದೆ. ಈ ಉತ್ಪನ್ನಕ್ಕೆ ನೀಡಲಾದ ವಿಶೇಷ ಮಾರುಕಟ್ಟೆ ಹಕ್ಕನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ.

1970 : ಪೇಟೆಂಟ್ ಕಾಯಿದೆ - 3ನೇ ತಿದ್ದುಪಡಿ

3ನೇ ತಿದ್ದುಪಡಿ ಈಗಾಗಲೇ ಲಭ್ಯವಿರುವ ಔಷಧಗಳ 'ಹೊಸ ಬಳಕೆ'ಗೆ ಪೇಟೆಂಟ್ ನೀಡುವ ಮೂಲಕ ಔಷಧ ಸಂಸ್ಥೆಗಳು ಉತ್ಪನ್ನದ ಮೇಲೆ ನಿರಂತರ ಹಿಡಿತ ಸಾಧಿಸಲು ಅನುವು ಮಾಡಿಕೊಡುತ್ತದೆ. ಈಗಾಗಲೇ ಲಭ್ಯವಿರುವ ಔಷಧಗಳ ಬೇರೆ ಬಳಕೆ ಹಾಗೂ ಡೋಸೇಜ್‌ಗಳಿಗೆ ಪೇಟೆಂಟ್ ನೀಡಲು ಟ್ರಿಪ್ಸ್ ಹೇಳುವುದಿಲ್ಲ. ಡಾ. ಎಆರ್.ಎ.ಮಶೇಲ್ಕರ್ ನೇತೃತ್ವದ ಸಮಿತಿ ಕೂಡಾ ಹೊಸ ರಾಸಾಯನಿಕ ಕಣಗಳಿಗೆ ಪೇಟೆಂಟ್ ನೀಡುವ ಮೂಲಕ ಪೇಟೆಂಟ್‌ನಡಿ ರಕ್ಷಿಸಲ್ಪಟ್ಟ ಔಷಧಗಳ ಸಂಖ್ಯೆ ಕಡಿಮೆಗೊಳಿಸಬೇಕೆಂದು ಶಿಫಾರಸು ಮಾಡಿದೆ. ಔಷಧದ 'ಹೊಸಬಳಕೆ'ಗೆ ನೀಡಲಾಗುವ ಪೇಟೆಂಟ್‌ನಿಂದ ಔಷಧಗಳಿಗೆ ಪೇಟೆಂಟ್ ರಕ್ಷಣೆಯು 20 ವರ್ಷಕ್ಕಿಂತ ಹೆಚ್ಚು ಕಾಲ ವಿಸ್ತರಿಸುವ ಸಾಧ್ಯತೆ ಇದೆ.

ಬಹುಪಾಲು ಕಾಯಿಲೆಗಳಿಗೆ ಜೆನೆರಿಕ್ ಔಷಧಗಳು ಲಭ್ಯವಿರುವುದರಿಂದ, ಉತ್ಪನ್ನ ಪೇಟೆಂಟ್‌ಗಳಿಂದ ಔಷಧಗಳ ಬೆಲೆ ಹೆಚ್ಚುವುದಿಲ್ಲ ಎಂಬ ವಾದದಲ್ಲಿ ಅರ್ಥವಿಲ್ಲ. ಔಷಧಗಳ ಶೋಧನೆಯು ನಿರಂತರ ಪ್ರಕ್ರಿಯೆಯಾಗಿದ್ದು, ಹೊಸ ಹಾಗೂ ಪರಿಣಾಮಕಾರಿ ಔಷಧಗಳ ಜೆನೆರಿಕ್ ರೂಪಗಳು ದೇಶದಲ್ಲಿ ಈಗಾಗಲೇ ಅತಿ ಕಡಿಮೆ ಬೆಲೆಯಲ್ಲಿ ಲಭ್ಯವಿದೆ. ಒಮ್ಮೆ ಉತ್ಪನ್ನ ಪೇಟೆಂಟ್ ಜಾರಿಗೊಂಡರೆ, ಈ ಪರಿಸ್ಥಿತಿ ಬದಲಾಗುತ್ತದೆ.

ಹಿಂಬಾಗಿಲ ಒಪ್ಪಿಗೆ

ಡಿಸೆಂಬರ್ 26, 2004 ರ ಭಾನುವಾರ ಕೇಂದ್ರ ಸರ್ಕಾರವು ವಿಶೇಷ ಶಾಸನದ ಮೂಲಕ 3ನೇ ತಿದ್ದುಪಡಿಯನ್ನು ಅಂಗೀಕರಿಸಿದೆ. ಸಂಸತ್ತನ್ನು ಬದಿಗೊತ್ತಿ ನಡೆದ ಈ ಪ್ರಕ್ರಿಯೆಯು ಸರ್ಕಾರದ ಜನವಿರೋಧಿ ನಿಲುವಿಗೆ ಹಿಡಿದ ಕನ್ನಡಿಯಾಗಿದೆ.

ಈ ಶಾಸನವು ವಿಶೇಷ ಮಾರುಕಟ್ಟೆ ಹಕ್ಕು (ಇಎಂಆರ್) ಗಳನ್ನು ವಜಾಗೊಳಿಸಿದ್ದು, ಅದರ ಬದಲಿಗೆ ಈಗಾಗಲೇ ಇಎಂಆರ್ ನೀಡಲಾದ ಉತ್ಪನ್ನಗಳ ರಕ್ಷಣೆಗೆ ಪ್ರಕ್ರಿಯೆಯೊಂದನ್ನು ಪರಿಚಯಿಸಿದೆ. ಔಷಧ ಉತ್ಪಾದನೆ ಇಲ್ಲದ ದೇಶಗಳಿಗೆ ಸಾರ್ವಜನಿಕ ಆರೋಗ್ಯ ತುರ್ತು ಸ್ಥಿತಿಯಲ್ಲಿ ಔಷಧ ರಫ್ತಿಗೆ ಕಡ್ಡಾಯ ಅನುಮತಿ ನೀಡಿದೆ. ಅಲ್ಲದೆ ಪೇಟೆಂಟ್ ಅನುಮತಿಗೆ

ಪುಟ 10ಕ್ಕೆ



ವೈಚಾರಿಕತೆಯ ಸಿಂಚನದಿಂದ ಯುವಜನರಿಗೆ ಸ್ಫೂರ್ತಿ ತುಂಬಿದ ನಿಡುಮಾಮಿಡಿ ಸ್ವಾಮೀಜಿ

ಪ್ರೀತಿ ಹಂಚೋಣ ಬನ್ನಿ....

ಸಂದೇಶವನ್ನು ನಗರದೆಲ್ಲೆಡೆ ಸಾರಿದ ಡಿವೈಎಫ್ಐ ಮಂಗಳೂರು ನಗರ ಸಮ್ಮೇಳನ

ಡಿವೈಎಫ್ಐನ 7ನೇ ಮಂಗಳೂರು ನಗರ ಸಮ್ಮೇಳನವು ಫೆಬ್ರವರಿ 27ರಂದು ಕಾವೂರಿನಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು. ಅಂದು ಬೆಳಿಗ್ಗೆಯಿಂದ ರಾತ್ರಿಯವರೆಗೆ ಹಬ್ಬದ ವಾತಾವರಣವನ್ನೇ ನಿರ್ಮಾಣ ಮಾಡಿತು. ಪೂರ್ವಭಾವಿ ಕಾರ್ಯಕ್ರಮಗಳು ಹಾಗು ಸಮ್ಮೇಳನದ ದಿನದಂದು ಜರುಗಿದ ಕಾರ್ಯಕ್ರಮಗಳು ಕಾರ್ಯಕರ್ತರಲ್ಲಿ ಸ್ಫೂರ್ತಿ, ಉತ್ಸಾಹ ಮೂಡಿಸಿತು.

ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕಿಂತ ಮುಂಚಿತವಾಗಿ ಡಿವೈಎಫ್ಐನ ಹಿರಿಯ ಸಂಗಾತಿ, ಮಾಜಿ ನಗರಾಧ್ಯಕ್ಷರಾದ ತಿಮ್ಮಪ್ಪ ಕಾವೂರು ರವರು ಡಿವೈಎಫ್ಐನ ಶ್ವೇತ ಪತಾಕೆಯನ್ನು ಹಾರಿಸುವುದರ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು. ಮುಗಿಲು ಮುಟ್ಟುವ ಘೋಷಣೆಗಳ ನಡುವೆಯೇ ಕಾವೂರಿನ 'ಮಕ್ಕಳ ಸ್ವರ' ತಂಡದ ಪುಟಾಣಿಗಳು ಹುತಾತ್ಮ ಸಂಗಾತಿ ಶ್ರೀನಿವಾಸ್ ಬಜಾಲ್ ರವರ ಭಾವಚಿತ್ರವನ್ನು ಮೆರವಣಿಗೆಯ ಮೂಲಕ ತಂದಿರುವುದು ಸಮ್ಮೇಳನಕ್ಕೆ ಇನ್ನಷ್ಟು ಮೆರುಗನ್ನು ನೀಡಿತು. ಹುತಾತ್ಮ ಸ್ತಂಭಕ್ಕೆ ನಮನ ಸಲ್ಲಿಸಿದ ಬಳಿಕ ಕಾಂ|| ಸುಧೀರ್ ಉರ್ವಾಸ್ಟೋರು ವೇದಿಕೆಯಲ್ಲಿ ಉದ್ಘಾಟನಾ ಸಮಾರಂಭ ಜರುಗಿತು. ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಡಾ|| ಗಣನಾಥಶೆಟ್ಟಿ ಎಕ್ಕಾರು ರವರು ಸ್ವಾಗತಭಾಷಣ ಮಾಡಿದರೆ, ಡಿವೈಎಫ್ಐ ನಾಯಕರಾದ ಮನೋಜ್‌ಕುಮಾರ್ ಶೆಟ್ಟಿಯವರು ಶ್ರದ್ಧಾಂಜಲಿ ನಿರ್ಣಯ ಮಂಡಿಸಿದರು. ಸಮ್ಮೇಳನದ ಉದ್ಘಾಟನೆಯನ್ನು ಡಿವೈಎಫ್ಐನ ಕರ್ನಾಟಕ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್‌ರವರು ನೆರವೇರಿಸುತ್ತಾ, ಜನಸಾಮಾನ್ಯರನ್ನು ಕಾಡುತ್ತಿರುವ ಬಡತನ, ಅಸ್ಪೃಶ್ಯತೆ, ವರದಕ್ಷಿಣೆ, ಕೋಮುವಾದದ ವಿರುದ್ಧ ಧೀಮಂತ ಹೋರಾಟವನ್ನು ನಡೆಸುತ್ತಾ ಸಾವಿರಾರು ಕಾರ್ಯಕರ್ತರನ್ನು ಹುತಾತ್ಮರನ್ನಾಗಿ ಹೊಂದಿ, ಇಂದು 1 ಕೋಟಿ 41 ಲಕ್ಷ ಸದಸ್ಯತ್ವದೊಂದಿಗೆ ಮುನ್ನಡೆಯುತ್ತಾ ಡಿವೈಎಫ್ಐ ಸಾಗಿ ಬಂದಿದೆ. ಜಗತ್ತಿನ ಯುವಜನ ಚಳುವಳಿಯ ಜೊತೆ ಗುರುತಿಸಿಕೊಂಡಿರುವ ಡಿವೈಎಫ್ಐ ದೇಶದ ಕಾಶ್ಮೀರ, ಪಂಜಾಬ್, ಅಸ್ಸಾಂ ರಾಜ್ಯಗಳಲ್ಲಿ ನಡೆಯುತ್ತಿರುವ ಪ್ರತ್ಯೇಕತಾವಾದದ ವಿರುದ್ಧ ದೇಹ ಛಿದ್ರವಾದರೂ ದೇಶ ಛಿದ್ರವಾಗಲು ಬಿಡಲಾರೆವು ಎಂಬ ಘೋಷಣೆಯೊಂದಿಗೆ ದೇಶದ ಐಕ್ಯತೆಗಾಗಿ 5750 ಕಾರ್ಯಕರ್ತರು ಬಲಿದಾನಗೈದ ಧೀಮಂತ ಪರಂಪರೆಯ ಸಂಘಟನೆಯಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಖ್ಯಾತ ಸಾಹಿತಿ ಅದಮೂರು ಶ್ರೀಪತಿ ಆಚಾರ್ಯ ರವರು ರಾಜ್ಯದಲ್ಲಿ ಸಂಘ ಪರಿವಾರ ನಡೆಸುವ ಚಟುವಟಿಕೆಯುಗಳನ್ನು ಗಮನಿಸುವಾಗ ಯಾರು ಆಡಳಿತ ನಡೆಸುತ್ತಿದ್ದಾರೆ ಎಂಬ ಬಗ್ಗೆ ಸಂಶಯ ಮೂಡುತ್ತದೆ. ಇಲ್ಲಿ ಸಂಘಪರಿವಾರವು ಪೊಲೀಸ್ ಇಲಾಖೆ ಮತ್ತು ಸರಕಾರದೊಂದಿಗೆ ಶಾಮೀಲಾಗಿದೆ. ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಾದ್ಯಂತ ಗೋವು ರಕ್ಷಣೆ ಹೆಸರಿನಲ್ಲಿ ನಡೆಯುವ ಅಲ್ಪಸಂಖ್ಯಾತರ ಮೇಲಿನ ಧಾಳಿಗೆ ಖೇದ ವ್ಯಕ್ತಪಡಿಸಿದ ಅವರು, ಗೋವಿಗೂ ಮಾತೆಗೂ ಪ್ರತ್ಯೇಕವಾದ ಸ್ಥಾನ ಇದೆ. ಮಾತೆಯನ್ನು ಗೋವಿಗೆ ಹೋಲಿಸುವುದು ಸಮಂಜಸವಲ್ಲ. ಪ್ರಾಣಿಗಳ ಹತ್ಯೆ ಮಾಡಬಾರದು ನಿಜ. ಆದರೆ ಎಲ್ಲ ಹಾಲು ಕೊಡುವ ಪ್ರಾಣಿಗಳು ಮಾತೆಗೆ ಸಮಾನವಲ್ಲ ಎಂದು ಹೇಳಿದರು.

ವೇದಿಕೆಯಲ್ಲಿ ಡಿವೈಎಫ್ಐ ಮಾಜಿ ಜಿಲ್ಲಾಧ್ಯಕ್ಷರಾದ ಕೃಷ್ಣಪ್ಪ ಕೊಂಚಾಡಿ, ಡಿವೈಎಫ್ಐ ಜಿಲ್ಲಾ ನಾಯಕರಾದ ಸುನಿಲ್ ಕುಮಾರ್ ಬಜಾಲ್, ಅಶೋಕ್ ಕೊಂಚಾಡಿ, ಸಂತೋಷ್ ನೀತಿನಗರ, ಮುನೀರ್ ಕಾಟಿಪಳ್ಳ, ದಯಾನಂದ ಶೆಟ್ಟಿ, ಕಾರ್ಯಾಧ್ಯಕ್ಷರಾದ ರೋಹಿತಾಕ್ಷ ರೈ ಕುಳಾಯಿಗುತ್ತು, ಖಜಾಂಚಿಯಾದ ಅಬ್ದುಲ್ ಹಕೀಂ ಮಾಯಿಲ ಹಾಗೂ ನಗರ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರತಿನಿಧಿ ಅಧಿವೇಶನ :

ಸುಮಾರು 400 ಪ್ರತಿನಿಧಿ ಸಂಗಾತಿಗಳು ಭಾಗವಹಿಸಿದ್ದ ಸಮ್ಮೇಳನದಲ್ಲಿ ನಗರ ಕಾರ್ಯದರ್ಶಿಯಾದ ಸಂತೋಷ್ ನೀತಿನಗರ ಕರಡು ವರದಿ ಮಂಡಿಸಿದರು. ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ಸುನಿಲ್‌ಕುಮಾರ್ ಬಜಾಲ್‌ರವರು ವರದಿಗೆ ಪೂರಕ ಅಂಶಗಳನ್ನು ಹೇಳಿದರು. ವರದಿಯ ಮೇಲೆ ಹಲವಾರು ಸಂಗಾತಿಗಳು ಚರ್ಚೆ ನಡೆಸಿ ಡಿವೈಎಫ್ಐಯನ್ನು ನಗರದೆಲ್ಲೆಡೆ ಬಲಿಷ್ಠವಾಗಿ ಕಟ್ಟಿ ಬೆಳೆಸಲು ಪ್ರತಿಜ್ಞೆ ಸ್ವೀಕರಿಸಿದರು. ಸಮ್ಮೇಳನದಲ್ಲಿ ಹಲವಾರು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಇವುಗಳಲ್ಲಿ ಸಂತೂರು ಮತ್ತು ಕೊಟ್ಟಾರ ಚೌಕಿಯಲ್ಲಿ ಓವರ್‌ಬ್ರಿಡ್ಜ್ ಸ್ಥಾಪನೆ, ಮಂಗಳೂರು ಬೆಂಗಳುರು ರೈಲು ಸಂಪರ್ಕ, ಉದ್ಯೋಗಾವಕಾಶಗಳ ಕೈಗಾರಿಕೆಗಳು ಸ್ಥಾಪನೆ, ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಶೇ.18ರ ನಿಧಿಯ ದುರ್ಬಳಕೆ ತನಿಖೆ ಪ್ರಮುಖವಾದವುಗಳು

ನೂತನ ನಾಯಕತ್ವ ಸಂಘಟನೆಯ ಬೆಳವಣಿಗೆಯನ್ನು ಅರಿತ ಸಮ್ಮೇಳನವು ಪ್ರಪ್ರಥಮ ಬಾರಿಗೆ ಮಂಗಳೂರು ನಗರ ಸಮಿತಿ ಹಾಗು ಮಂಗಳೂರು ಗ್ರಾಮಾಂತರ ಸಮಿತಿಯೆಂಬ 2 ಸಮಿತಿಗಳನ್ನು ರಚಿಸಿತು. ನಗರ ಸಮಿತಿಯ ನೂತನ ಅಧ್ಯಕ್ಷರಾಗಿ ಮುನೀರ್ ಕಾಟಿಪಳ್ಳರವರು ಪುನರಾಯ್ಕೆಗೊಂಡರೆ, ಕಾರ್ಯದರ್ಶಿಯಾಗಿ ವಾಸುದೇವ ಜೆ.ಪಿ. ಕುಲಶೇಖರರವರನ್ನು ಆರಿಸಲಾಯಿತು. ಉಪಾಧ್ಯಕ್ಷರಾಗಿ ದೀಪಕ್ ಬಜಾಲ್, ರಾಜೇಶ್ ಉರ್ವಾಸ್ಟೋರು, ಸಹಕಾರ್ಯದರ್ಶಿಯಾಗಿ ಜಯಪ್ರಕಾಶ್ ಬೊಲ್ಲ, ಯಶವಂತಿ ಉರ್ವಾಸ್ಟೋರು, ಖಜಾಂಚಿಯಾಗಿ ಯೋಗೀಶ ಜಪ್ಪಿನಮೊಗರು ಆಯ್ಕೆಗೊಂಡರು. ಸಮಿತಿ ಸದಸ್ಯರಾಗಿ ಬಶೀರ್ ಪಂಜಿಮೊಗರು, ಮನೋಜ್ ಶೆಟ್ಟಿ, ಕಿಶೋರ್, ಗೋಪಾಲ್, ಮುಸ್ತಫ, ಫಾರೂಕ್, ರಘುರಾಮ, ರೆಹಮಾನ್, ಹಕೀಂ, ಸುನಂದ, ಯಾದವರವರನ್ನು ಆರಿಸಲಾಯಿತು.

ಮಂಗಳೂರು ಗ್ರಮಾಂತರ ಸಮಿತಿಯ ಅಧ್ಯಕ್ಷರಾಗಿ ಸುನಿಲ್ ಅಧ್ಯಪಾಡಿ ಕಾರ್ಯದರ್ಶಿಯಾಗಿ ಅಜೀಜ್ ಜೋಕಟ್ಟೆ ಹಾಗೂ ಖಜಾಂಚಿಯಾಗಿ ಕಿಶೋರ್ ಪೊರ್ಕೋಡಿ ಯವರನ್ನು ಸರ್ವಾನುಮತದಿಂದ ಆರಿಸಲಾಯಿತು. ಉಪಾಧ್ಯಕ್ಷರಾಗಿ ಮುಸ್ತಫ ಜೋಕಾ, ಶ್ರೀನಾಥ್ ಕಾಟಿಪಳ್ಳ, ಸಹಕಾರ್ಯದರ್ಶಿಯಾಗಿ ಬಾಲಕೃಷ್ಣ ಕೊಳಂಜೆ, ಜೋಸೆಫ್ ಸರಿಪಲ್ಲರವರು ಆಯ್ಕೆಗೊಂಡರು. ಸಮಿತಿ ಸದಸ್ಯರಾಗಿ ಸಿದ್ದಿಕ್ ಅಡ್ಡೂರು, ಅಶ್ರಫ್ ಜೋಕಟ್ಟೆ, ಅಶ್ರಫ್ ಸೂರಿಂಜೆ, ರಮೇಶ್ ಅದ್ಯಪಾಡಿ, ಕ್ಲೆಮೆಂಚ್ ಕೊಳಂಜೆ, ಫೈಜಲ್ ಅಡ್ಡೂರು, ರಿಯಾಜ್ ಅಡ್ಡೂರು ಉಸ್ಮಾನ್ ಬಡಕಟ್ಟೈಲ್, ಕಮಲಾಕ್ಷ ಬಿತ್ತಿಪಾದೆಯವರನ್ನು ಆರಿಸಲಾಯಿತು.

ಆಕರ್ಷಕ ಮೆರವಣಿಗೆ ಹಾಗೂ ಬಹಿರಂಗ ಸಭೆ:

ಸಂಜೆ 5ಕ್ಕೆ ಪಂಜಿಮೊಗರುನಿಂದ ಆಕರ್ಷಕ ಮೆರವಣಿಗೆಯು ಕಾವೂರಿನತ್ತ ಹೆಜ್ಜೆ ಹಾಕಿತು. ಸಾವಿರಕ್ಕೂ ಮಿಕ್ಕಿದ ಯುವಜನರು ಸ್ಫೂರ್ತಿಯುತ ಘೋಷಣೆಗಳನ್ನು ಹಾಕುತ್ತಾ, ಇತರರನ್ನು ಹುರಿದುಂಬಿಸಿದರು. ಬಳಿಕ ಕಾವೂರಿನ ಮೈದಾನದ ಕಾಂ|| ಭಾಸ್ಕರ ಕುಂಬ್ಳೆ ವೇದಿಕೆಯಲ್ಲಿ ಬಹಿರಂಗ ಸಭೆಯು ಜರುಗಿತು.

ಸಭೆಯ ಕೇಂದ್ರ ಬಿಂದುವಾದ ನಿಡುಮಾಮಿಡಿ ಮಠದ ಶ್ರೀ ವೀರಭದ್ರ ಚೆನ್ನಮಲ್ಲ ಸ್ವಾಮೀಜಿಯವರ ಭಾಷಣವನ್ನು ಸೇರಿದ್ದ ಸಮಸ್ತ ಜನತೆಯು ಮೈಯೆಲ್ಲಾ ಕಿವಿಯಾಗಿ ಆಲಿಸುವಂತಿತ್ತು. ಕೋಮುವಾದ ಮತ್ತು ಯುವಜನವೆಂಬ ವಿಷಯದ ಬಗ್ಗೆ ಕೇಂದ್ರೀಕೃತಗೊಂಡ ಸ್ವಾಮೀಜಿಯವರ ಭಾಷಣದಲ್ಲಿ ಸಂಘಪರಿವಾರವನ್ನು ತರಾಟೆಗೆ ತೆಗೆದುಕೊಂಡರು. 'ಸಂಘ ಪರಿವಾರದ ಕೇಂದ್ರವಾದ ನಾಗಪುರದ ಸಂದೇಶ ರವಾನೆಯ ಕೈದಿಗಳನ್ನಾಗಿ ಬಜರಂಗದಳವನ್ನು ಉಪಯೋಗಿಸಲಾಗುತ್ತಿದೆ. ವೈದಿಕಶಾಹಿಯ ಈ ಕುಟಿಲ ಯೋಜನೆಗೆ ದಲಿತರನ್ನು, ಹಿಂದುಳಿ ವರ್ಗದ ಯುವಕರನ್ನು ಉಪಯೋಗಿಸಿ ಅವರನ್ನು ಕ್ರಿಮಿನಲ್ ಕೃತ್ಯಕ್ಕೆ ಬಳಸಲಾಗುತ್ತಿದೆ. ಸಂಘಪರಿವಾರ ಹಂತಹಂತವಾಗಿ ತನ್ನ ಆಯುಧವನ್ನು ಆಧುನೀಕರಿಸುತ್ತಿದೆ. ಲಾಠಿಯಿಂದ ತ್ರಿಶೂಲಕ್ಕೆ ಬದಲಾಗಿದೆ. ತ್ರಿಶೂಲದಿಂದ ಸ್ಟೆನ್‌ಗನ್‌ಗೆ ಸಾಗುತ್ತದೆ. ಎಲ್ಲಾ ಧರ್ಮಗಳಲ್ಲಿರುವ ಮೂಢನಂಬಿಕೆ, ಶೋಷಣೆ ಯಜಮಾನಿಕೆ ಮತ್ತು



ಮಹಾಂತೇಶ್ ಮಾತನಾಡುತ್ತಿರುವುದು

ಮಾನವೀಯತೆಗಳನ್ನು ವಿರೋಧಿಸಿದಾಗ ಮಾತ್ರ ಮನುಷ್ಯ - ಮನುಷ್ಯನಾಗಲು ಸಾಧ್ಯ' ಎಂದು ಹೇಳಿದರು.

ಕಾಸರಗೋಡು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಸಿ.ಅಹಮ್ಮದ್, ಸಿಪಿಐಎಂ ಮಂಗಳೂರು ನಗರ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಡಿವೈಎಫ್ಐ ನಾಯಕರುಗಳಾದ ಮಹಾಂತೇಶ್, ಸುನಿಲ್ ಕುಮಾರ್ ಬಜಾಲ್, ಅಶೋಕ್‌ಕೊಂಚಾಡಿ, ದಯಾನಂದ ಶೆಟ್ಟಿ, ಮುನೀರ್‌ಕಾಟಿಪಳ್ಳ, ಸಂತೋಷ್ ನೀತಿನಗರ, ವಾಸುದೇವ ಜೆ.ಪಿ. ಸುನಿಲ್ ಅದ್ಯಪಾಡಿ, ಅಜೀಜ್ ಜೋಕಟ್ಟೆ, ಹಕೀಂ ಮಾಮಿಲ, ಉಶೀರ್ ಪಂಜಿಮೊಗರು, ಶಂಕರ್ ಕಾವೂರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾದ ರೋಹಿತಾಕ್ಷ ರೈ ಕುಳಾಯಿಗುತ್ತುರವರು ವಹಿಸಿದ್ದರು.

ಸಮ್ಮೇಳನಕ್ಕೆ ವ್ಯಾಪಕ ತಯಾರಿ

ಸಮ್ಮೇಳನದ ಸಿದ್ಧತೆಗಾಗಿ 2 ತಿಂಗಳ ಹಿಂದೆಯೇ ಕಾವೂರಿನಲ್ಲಿ ಸುಮಾರು 100 ಮಂದಿಯನ್ನೊಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಗಿತ್ತು. ಗೌರವಾಧ್ಯಕ್ಷರಾಗಿ ಕಾವೂರಿನ ಸರಕಾರಿ ಪ್ರಥಮ ದರ್ಜೆ ಕಾಲೇಜ್‌ನ ಪ್ರಾಧ್ಯಾಪಕರಾದ ಡಾ|| ಗಣನಾಥ ಎಕ್ಕಾರು, ಕಾರ್ಯಾಧ್ಯಕ್ಷರಾಗಿ ಹಿರಿಯ ಸಮಾಜಸೇವಕರಾದ ರೋಹಿತಾಕ್ಷ ರೈ ಕುಳಾಯಿಗುತ್ತು, ಪ್ರಧಾನ ಕಾರ್ಯದರ್ಶಿಯಾಗಿ ದಯಾನಂತ ಶೆಟ್ಟಿ, ಖಜಾಂಚಿಯಾಗಿ ಅಬ್ದುಲ್ ಹಕೀಂ ಮಾಯಿಲರವರು ಆಯ್ಕೆಗೊಂಡಿದ್ದರು. ನಿಧಿ ಸಂಗ್ರಹದಿಂದ ಹಿಡಿದು ಎಲ್ಲಾ ತಯಾರಿಗಳು ವ್ಯವಸ್ಥಿತವಾಗಿ ನಡೆದವು. ಕೂಳೂರು - ಕಾವೂರು ಪ್ರದೇಶದಲ್ಲೇ 7 ಘಟಕಗಳು ಸಕ್ರಿಯವಾಗಿ ಕಾರ್ಯಾಚರಿಸುತ್ತಿದ್ದು, ಸಮ್ಮೇಳನಕ್ಕೆ ಹೆಚ್ಚಿನ ಕೊಡುಗೆಗಳನ್ನು ನೀಡಿದ್ದವು. ಗೋಡೆಬರಹ, ಬ್ಯಾನರ್, ಡೆಕೊರೇಷನ್‌ನ ಮೂಲಕ ಸಾವಿರಾರು ಜನರ ಮನಸ್ಸನ್ನು ಸೂರೆಗೊಳ್ಳಲಾಯಿತು. ಆಕರ್ಷಕ ಘೋಷಣೆಗಳು ಜನರ ಮನವನ್ನು ತಟ್ಟಿತು.

ಕಲಾ ಜಾಥಾ

'ಪ್ರೀತಿ ಹಂಚೋಣ ಬನ್ನಿ' ಎಂಬ ಸಮ್ಮೇಳನದ ಸಂದೇಶವನ್ನು 3 ದಿನಗಳ ಕಾಲ ಸಾಂಸ್ಕೃತಿಕ ಕಲಾ ಜಾಥಾದ ಮೂಲಕ ನಗರದೆಲ್ಲೆಡೆ ಸಾರಲಾಯಿತು. ಜೋಕಟ್ಟೆ ಪ್ರದೇಶದಲ್ಲಿ ಕಾರ್ಪೊರೇಟರ್ ಪುರುಷೋತ್ತಮ ಚಿತ್ರಾಪುರರವರಿಂದ ಉದ್ಘಾಟನೆಗೊಂಡ ಜಾಥಾವು, ಮಧುರ ಸಂಗೀತವುಳ್ಳ ಹಾಡು ಹಾಗೂ ಭಾಷಣದ ಮೂಲಕ ಸುಮಾರು 50 ಕಡೆಗಳಲ್ಲಿ ಕಾರ್ಯಕ್ರಮವನ್ನು ನೀಡಿತು. ಜಾಥಾ ಹೋದ ಕಡೆಗಳಲ್ಲಿ ಭವ್ಯ ಸ್ವಾಗತ ದೊರೆಯಿತು. ಅಂತಿಮವಾಗಿ ಬಜಾಲ್‌ನ ಫೈಸಲ್‌ನಗರದಲ್ಲಿ ಅದ್ದೂರಿ ಸ್ವಾಗತದೊಂದಿಗೆ ಜಾಥಾವು ಸಮಾರೋಪಗೊಂಡಿತು. ಒಟ್ಟಿನಲ್ಲಿ **'ದ್ವೇಷ ಹಬ್ಬಿಸಲು ನೂರಾರು ಸಂಘಟನೆಗಳಿವೆ. ಆದರೆ ಪ್ರೀತಿ ಹಂಚುವ ಸಂಘಟನೆಯಿದ್ದರೆ ಡಿವೈಎಫ್ಐ ಮಾತ್ರ'** ಎಂದು ಮಂಗಳೂರು ನಗರವೇ ಸಾರಿ ಹೇಳುವಂತಿತ್ತು.

ಹುತಾತ್ಮಜ್ಯೋತಿ ಮೆರವಣಿಗೆ

ಸಮ್ಮೇಳನದ 2 ದಿನಗಳ ಮುಂಚಿತವಾಗಿ ಶ್ರೀನಿವಾಸ್ ಬಜಾಲ್ ಹುತಾತ್ಮ ಜ್ಯೋತಿ ಮೆರವಣಿಗೆಯನ್ನು ಬಜಾಲ್‌ನಿಂದ ಕಾವೂರಿನವರೆಗೆ ದ್ವಿಚಕ್ರ ವಾಹನದ ಮೂಲಕ ತರಲಾಯಿತು. ಡಿವೈಎಫ್ಐನ ಮಾಜಿ ಜಿಲ್ಲಾಧ್ಯಕ್ಷರಾದ ಬಿ.ಎಂ. ಮಾಧವ ರವರು ಹುತಾತ್ಮ ಜ್ಯೋತಿಯನ್ನು ಬೆಳಗಿಸಿ, ನಗರಾಧ್ಯಕ್ಷರಾದ ಮುನೀರ್ ಕಾಟಿಪಳ್ಳರವರಿಗೆ ಹಸ್ತಾಂತರಿಸಿದರು. ಬಳಿಕ ಡಿವೈಎಫ್ಐನ ತ್ಯಾಗ ಬಲಿದಾನದ ಪರಂಪರೆಯನ್ನು ಸ್ಮರಿಸಿದರು. ಸಭೆಯನ್ನುದ್ದೇಶಿಸಿ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಅಶೋಕ್ ಕೊಂಚಾಡಿಯವರು ಮಾತನಾಡಿದರು. ಬೈಕ್, ರಿಕ್ಷಾ, ಜೀಪುಗಳನ್ನೊಳಗೊಂಡ ಆಕರ್ಷಕ ಮೆರವಣಿಗೆಯು ನಗರ ಪ್ರದೇಶದಲ್ಲೆಲ್ಲಾ ಹಾದು ಕಾವೂರನ್ನು ಪ್ರವೇಶಿಸಿತು. ಹುತಾತ್ಮ ಜ್ಯೋತಿಯನ್ನು ಮುನೀರ್‌ರವರು ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾದ ರೋಹಿತಾಕ್ಷ ರೈಯರವರಿಗೆ ಹಸ್ತಾಂತರಿಸಿದರು. ಬಳಿಕ ಸುನಿಲ್‌ಕುಮಾರ್, ಮುನೀರ್, ರೋಹಿತಾಕ್ಷ ರೈಯರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಒಟ್ಟಿನಲ್ಲಿ ಡಿವೈಎಫ್ಐ ನಗರ ಸಮ್ಮೇಳನವು ಜಿಲ್ಲೆಯ ಯುವಜನ ಚಳುವಳಿಯಲ್ಲಿ ಮೈಲುಗಲ್ಲಾಗುವಂತೆ ಇತಿಹಾಸ ನಿರ್ಮಿಸಿತು. ಮಾತ್ರವಲ್ಲದೆ ಕೋಮುವಾದಿಗಳಿಗೆ ಎದಿರೇಟು ನೀಡುವಲ್ಲಿಯೂ ಯಶಸ್ವಿಯಾಗಿದೆ.

- **'ಸಿಂಚನ'** ಮಂಗಳೂರು

ಮಹಿಳಾ ವಿಮೋಚನೆ ಪ್ರಸ್ತುತ ಸನ್ನಿವೇಶ

– ಒಂದು ಚಿಂತನೆ

ಮಹಿಳಾ ಸಮುದಾಯ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳು ಹಾಗೂ ಹೋರಾಟದ ಹಾದಿಯತ್ತ ನೋಟ. ಅಂತರ್‍ರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ

ನೀಲಾ ಕೆ.

1907ರಲ್ಲಿ ನ್ಯೂಯಾರ್ಕಿನ ಗಾರ್ಮೆಂಟ್ ಕಾರ್ಖಾನೆಯಲ್ಲಿ ದುಡಿಯುವ ಮಹಿಳೆಯರು ಹೋರಾಟದ ಕಹಳೆ ಮೊಳಗಿಸಿದರು. ದಿನಕ್ಕೆ ಹತ್ತು ಗಂಟೆಯ ಕೆಲಸ, ಸಮಾನ ಕೆಲಸಕ್ಕೆ ಸಮಾನ ವೇತನ, ಮತದಾನದ ಹಕ್ಕು ಮತ್ತು ಲಿಂಗಭೇದವಿಲ್ಲದ, ಜನಾಂಗ ಭೇದವಿಲ್ಲದ ಆಸ್ತಿ, ವಿದ್ಯೆಯ ತಾರತಮ್ಯವಿಲ್ಲದೆ ಎಲ್ಲ ರೀತಿಯ ಮೂಲಭೂತ ಹಕ್ಕುಗಳಿಗಾಗಿ ಆ ಮಹಿಳೆಯರು ದನಿ ಎತ್ತಿದರು. ನ್ಯೂಯರ್ಕಿನ ರಟ್ಗೇರ್ ಚೌಕದಲ್ಲಿ ಬೃಹತ್ ಪ್ರದರ್ಶನ ನಡೆಸಿದರು. ಆ ವಿಜಯದ ದಿನವನ್ನು ಅಂತರರಾಷ್ಟ್ರೀಯ ಮಹಿಳಾ ದಿನವನ್ನಾಗಿಸಿದ ಕೀರ್ತಿ ಕಮ್ಯುನಿಸ್ಟ್ ನಾಯಕಿ ಜರ್ಮನಿಯ ಕ್ಲಾರಾ ಜೆಟ್‌ಕಿನ್‌ರಿಗೆ ಸಲ್ಲುತ್ತದೆ. ಜಗತ್ತಿನ ಅನೇಕ ದೇಶಗಳಲ್ಲಿ ಮಹಿಳೆಯರ ವಿಮೋಚನೆಗಾಗಿ ತನ್ಮೂಲಕ ಸಮತೆಯ ನಾಡಿನ ಉದಯಕ್ಕಾಗಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಗುತ್ತಿದೆ.

ವೈವಿಧ್ಯತೆ ಎನ್ನುವುದು ಚರಾಚರ ಜೀವಿಗಳಿಗೆ ಪ್ರಕೃತಿ ನೀಡಿದ ಕೊಡುಗೆಯಾಗಿದೆ. ಖಾಸಗಿ ಆಸ್ತಿಯ ಉಗಮದೊಂದಿಗೆ ಹುಟ್ಟಿದ ತಾರತಮ್ಯವು ಬಡವ-ಶ್ರೀಮಂತ, ಕರಿ-ಬಿಳಿ, ಹೆಣ್ಣು- ಗಂಡು, ಮೇಲ್ಜಾತಿ- ಕೆಳಜಾತಿ, ಹೀಗೆ ನಾನಾ ಸ್ವರೂಪದಲ್ಲಿ ತಲೆ ಎತ್ತಿತು. ಜಗತ್ತಿಗೆ ಹೊಸ ಜೀವವನ್ನು ಕೊಡುವ ಹೆಣ್ಣೊಡಲನ್ನು - ಹೆಣ್ಣನ್ನು ಗೌರವಿಸುವ ಬದಲು ಕೀಳಾಗಿ ಕಾಣಲಾಯಿತು. ಎರಡನೆಯ ದರ್ಜೆಯ ಪ್ರಜೆಯಾಗಿಸಲಾಯಿತು. ಎಲ್ಲ ರೀತಿಯ ಮೂಲಭೂತ ಹಕ್ಕುಗಳಿಂದ ವಂಚಿಸಲಾಯಿತು. 'ಹೆಣ್ಣು' ದುಡಿವ ಮತ್ತು ಮಕ್ಕಳನ್ನು ಹೆರುವ ಯಂತ್ರ ಮಾತ್ರ ಎಂಬ ಮಾತನ್ನು ಎಲ್ಲರ ಮೆದುಳಿನೊಳಗೆ ತೂರಿಸಲಾಯಿತು.

ಕಾಲ ಚಕ್ರ ಉರುಳುತ್ತಿದೆ. ಮಹಿಳೆಯು ತಾನು ಜಗತ್ತಿನ ಪ್ರಥಮ ಶೋಷಿತಳು ಎಂಬ ಸತ್ಯ ಕ್ರಮೇಣ ಅರಿಯತೊಡಗಿಸಿದ್ದಾಳೆ. ತನ್ನ ಮೇಲೆ ನಡೆಯುವ ಎಲ್ಲ ನಮೂನೆಯ ಅನ್ಯಾಯದ ವಿರುದ್ಧ ನಿರಂತರ ದನಿ ಎತ್ತಿ ಪ್ರತಿಭಟಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ ಮಾರ್ಚ್ 8 ಕುಟುಂಬದ ಒಳಗೂ ಹೊರಗೂ ನಿರಂತರ ಶ್ರಮ ಪಡುವ ಮಹಿಳೆಯು ತನ್ನ ತನ್ನ ಒಡಲ ಕಿಡಿಯನ್ನೂ, ಕಣ್ಣೀರ ಹನಿಯ ಕತೆಯನ್ನೂ ಒಟ್ಟೊಟ್ಟಿಗೆ ಬೀದಿಯ ಅಂಗಳದ ಧ್ವಜ ಸ್ತಂಭಕ್ಕೆ ತಂದಿದ್ದಾಳೆ. ಒಟ್ಟು ಸಮಾಜದ ಅಭಿವೃದ್ಧಿಯ ಶಕ್ತಿಯಾಗಬೇಕಾದ ಮಹಿಳೆಯನ್ನು ಅಡುಗೆ ಮನೆಯ ಸೀಮಿತ ಕೆಲಸದಲ್ಲಿ ತಳ್ಳುವ ಮೂಲಕ ಅವಳ ಶಕ್ತಿಯನ್ನು ಪೋಲು ಮಾಡಲಾಗುತ್ತಿದೆ, ಆದ್ದರಿಂದ ಅಡಿಗೆ ಎನ್ನುವುದು ಉದ್ಯಮವಾಗಲಿ, ಮಹಿಳೆಯು ತನ್ನ ವಿಮೋಚನೆಗಾಗಿ ಸಮಾಜದ ಕಾರ್ಯ ಚಟುವಟಿಕೆಗಳೊಂದಿಗೆ ಸಂಬಂಧ ಹೆಣೆದುಕೊಳ್ಳಲಿ, ಒಟ್ಟು ಶೋಷಿತರ ಚಳುವಳಿಯೊಂದಿಗೆ ಹೆಜ್ಜೆ ಸೇರಿಸಲಿ ಮತ್ತು ಶೋಷಕ ಸಮಾಜವನ್ನು ಕಿತ್ತೊಗೆದು ಶೋಷಣಾ ಮುಕ್ತ ಸಮಾಜ ತಂದಾಗ ಮಾತ್ರ ನಿಜವಾದ ವಿಮೋಚನೆ ಕಾಣಲು ಸಾಧ್ಯ" ಎಂಬ ಮಾತು ಮಹಾ ಮಾನವತಾವಾದಿ ಲೆನಿನ್ ಹೇಳಿದ್ದು ಈ ಸಂದರ್ಭದಲ್ಲಿ ನೆನಪಾಗುತ್ತದೆ.

ಈ ಹೊತ್ತಿನಲ್ಲಿ ಜಗತ್ತು ಹೊಸ ಹೊಸ ತಂತ್ರಜ್ಞಾನ-ವಿಜ್ಞಾನದಿಂದ ವಿಜೃಂಭಿಸುತ್ತಿದೆ. ಜ್ಞಾನ-ಶಿಸ್ತುಗಳ ಪರಿಭಾಷೆಯು ಬದಲಾಗಿದೆ. ಕಂಪ್ಯೂಟರ್-ಸಿಂಪ್ಯೂಟರ್‌ಗಳ ದರ್ಬಾರು ಶುರುವಾಗಿದೆ. ಇವುಗಳ ಭಾಷೆ ಅರಿಯದವು ಅಜ್ಞಾನಿಗಳು ಎನ್ನುವಂತಾಗಿದೆ. ಒಂದು ಮುಷ್ಠಿಯಲ್ಲಿ ಸಂಪತ್ತಿದ್ದರೆ ಇನ್ನೊಂದು ಮುಷ್ಠಿಯಲ್ಲಿ ನಿಮಗೆ ಬೇಕಾದ ಸೌಲಭ್ಯಗಳು - ಮಾಹಿತಿಗಳು ಸಿಗುತ್ತವೆ. ಕಡಲಾಚೆಯ ನಾಡನ್ನು ಕಲ್ಪಿಸಿಕೊಳ್ಳಲೂ ಹೈರಣಾಗುವ ಕಾಲವು ಥಟ್ಟಂತ ಬದಲಾಗಿದೆ. ಜಗತ್ತು ಹಳ್ಳಿಯಾಗುತ್ತಿದೆ. ದೇಶಗಳು ನೆರೆಮನೆಯಂತಾಗಿವೆ. ಜೇಬಿನಲ್ಲಿ ಕಾಂಚಣವಿದ್ದರೆ ಸಾಕು ಎಲ್ಲ ವೈಭೋಗದ ಬಯಕೆಗಳಿಗೆ ರೆಕ್ಕೆ ಬಂದು ಎಲ್ಲೆಂದರಲ್ಲಿ ವಿಹರಿಸುವ ಕಾಲವಿದು.

ಆದರೆ ಇದೇ ಜಗತ್ತಿನಲ್ಲಿ ಎಲ್ಲ ಮಹಿಳೆಯರು ಎರಡನೆಯ ದರ್ಜೆಯ ಪ್ರಜೆಗಳು ಮಾತ್ರ. ಇದೇ ಜಗತ್ತಿನಲ್ಲಿ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪಾದನಾ ವಸ್ತುಗಳ ಮಾರಾಟಕ್ಕಾಗಿ ಹೆಂಗಸಿನ ಚರ್ಮ ಮತ್ತು ಅಂಗಾಂಗಗಳನ್ನು ಬಳಸಿಕೊಳ್ಳುತ್ತಾರೆ. ಹೆಚ್ಚು ಹಣ ಸಿಗುವುದು ಎಂದಾದಾಗ ಹೊಳೆವ ಅವಳ ಹರೆಯವನ್ನು ಮಾರುತ್ತಾರೆ. ಎಳೆ ಹೆಣ್ಣು ಕೂಸುಗಳ ವ್ಯಾಪಾರವೂ ನಡೆಯುತ್ತವೆ. ಮತ್ತು ಎಳೆ ಬಾಲೆಯನ್ನು 'ದಂಧೆ'ಗೂ ಇಳಿಸಲಾಗುತ್ತದೆ.

ಮತ್ತು ಇದೇ ಸಮಾಜದಲ್ಲಿ ಆಕೆಯನ್ನು ಬಹಿರಂಗವಾಗಿಯೇ ಕೆಲಸ ಮಾಡುವ ಸ್ಥಳಗಳಲ್ಲಿ ಲೈಂಗಿಕವಾಗಿ ಹಿಂಸಿಸಲಾಗುತ್ತಿದೆ. ಅವಳು ದನಿ ಎತ್ತಿದರೆ ಕೆಲಸದಿಂದ ಕಿತ್ತೊಗೆಯಲಾಗುತ್ತಿದೆ. ಕಟ್ಟಡ



ಕಾರ್ಮಿಕ ಮಹಿಳೆಯರು, ಮನೆಗೆಲಸದ ಮಹಿಳೆಯರು, ಕೃಷಿಯಲ್ಲಿ ದುಡಿವ ಮಹಿಳೆಯರು ಮತ್ತು ತಮ್ಮ ಶ್ರಮ ಮಾರಿ ಹೊಟ್ಟೆ ಹೊರೆವ ಯಾವುದೇ ಉದ್ಯೋಗಸ್ಥ ಮಹಿಳೆಯರು ಈ ದೇಶದಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ ಮತ್ತು ಈ ಭೀತಿಯಲ್ಲಿಯೇ ಬದುಕುತ್ತಿದ್ದಾರೆ.

ತೂಗು ಗತ್ತಿಗಳು

ಈ ವ್ಯವಸ್ಥೆಯ ಅನೇಕ ಮನೆಗಳಲ್ಲಿ ಮಹಿಳೆಯ ಅಸಹಾಯಕ ಚೀತ್ಕಾರಗಳನ್ನು ಗಂಟಲೊಳಗೇ ಅಮುಕಲಾಗುತ್ತಿದೆ. ವರದಕ್ಷಿಣೆ ಹೆಸರಿನ ಹೆಣ್ಣೆಂಬ ತುಚ್ಛೀಕಾರದ ತೂಗುಗತ್ತಿಗಳು ಯಾವಾಗ ಬೇಕಾದರೂ ಅವಳ ಮೇಲೆ ಎರಗುತ್ತವೆ. ಇರುವ ಕಾನೂನಿನೊಳಗಿನ ಏಕೈಕ ಆಧಾರವಾದ 'ವರದಕ್ಷಿಣೆ ವಿರೋಧಿ' ಕಾನೂನು ಸಹ ಸಹಾಯಕ್ಕೆ ಬರದಂತೆ ಮಾಡುವ ಎಲ್ಲ ವಿದ್ಯಮಾನಗಳೂ ಇಲ್ಲಿ ಘಟಿಸುತ್ತವೆ. ಕುಟುಂಬದೊಳಗಿನ ದೌರ್ಜನ್ಯಗಳನ್ನು ತಡೆಗಟ್ಟಲೆಂದು ತರಬೇಕಾದ 'ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ'ಯು ಅನೇಕ ನ್ಯೂನ್ಯತೆಗಳನ್ನು ಹೊಂದಿದೆ. ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರ ಸಂರಕ್ಷಣೆಗಾಗಿ ಇರುವ ಸುಪ್ರೀಂ ಕೋರ್ಟಿನ ತೀರ್ಪು ಬಹಷ್ಟು ಕಡೆ ಜಾರಿಯೇ ಆಗಿಲ್ಲ, 'ಲೈಂಗಿಕ ದೌರ್ಜನ್ಯ ತಡೆ ಸಮಿತಿ'ಗಳನ್ನು ರಚಿಸಿ ಎಂದು ಒತ್ತಾಯಿಸಿದರೇನೇ ಕೆಕ್ಕರಿಸಿ ನೋಡುವ ಮನಸ್ಸುಗಳಿವೆ. ಇವೇ ಮನಸುಗಳು 'ಹೆಣ್ಣನ್ನು' ಈ ಭೂಮಿಗೆ ಬರದಂತೆ ತಡೆಯುವ ಶಕ್ತಿಯೂ ಹೊಂದಿವೆ. ಆವಿಷ್ಕಾರವಾದ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಗರ್ಭದಲ್ಲಿದ್ದಾಗಲೇ ಲಿಂಗ ಪತ್ತೆ ಮಾಡಿ ಹೆಣ್ಣಾದಲ್ಲಿ ಕಿತ್ತು ಬಿಸಾಡುತ್ತಿರುವುದರಿಂದ ಇಡೀ ಜಗತ್ತೇ ಇಂದು ಹೆಣ್ಣು ಸಂಖ್ಯೆಯಲ್ಲಿ ಕುಸಿತ ಕಾಣುತ್ತಿದೆ. ಭಾರತದ ಅನೇಕ ರಾಜ್ಯಗಳಲ್ಲಿ 1000 ಪುರುಷರಿಗೆ 787,764ರಷ್ಟಿದ್ದರೆ ಇನ್ನು ಅವೇ ರಾಜ್ಯದ ಕೆಲವು ಜಿಲ್ಲೆಗಳಲಿ 640 ರಷ್ಟು ಹೆಣ್ಣು ಕೂಸುಗಳು ಮಾತ್ರ ಇವೆ. ಮಗಳು ಇಲ್ಲದ ಮನೆಗಳಿಗೆ ಕೊರತೆಯೇ ಇಲ್ಲ. ಮುಂದೊಂದು ದಿನ ಎಲ್ಲ ನಮೂನೆಯ ಅತ್ಯಾಚಾರ, ಶೋಷಣೆಗೆ ಮಹಿಳೆಯರು ಬಲಿಯಾಗುತ್ತಾರೆ ಎನ್ನುವುದಕ್ಕೆ ಸಾಕ್ಷಿಗಳು ಇವು.

ಒಂದು ಕಡೆ ಈ ಪಾಳೇಗಾರಿ ಮೌಲ್ಯದ ಸಮಾಜವು ಮಹಿಳೆಯ ಶ್ರಮದ ಶಕ್ತಿ ಸಾಮರ್ಥ್ಯವನ್ನು ಕಸಿಯುತ್ತಾ ಮತ್ತೊಂದು ಕಡೆ ಅವಳ ಶರೀರವನ್ನು ಸಹ ಬಿಕರಿಗಿಟ್ಟು ಅವಳ ಒಟ್ಟು 'ಅಸ್ತಿತ್ವ'ವನ್ನು ಅಳಿಸಿಹಾಕುವ ಹುನ್ನಾರ ಹೊಂದಿದೆ. ಇದಕ್ಕೆ ಪೂರಕವಾಗಿ ಸಾಮ್ರಾಜ್ಯಶಾಹಿ ಒಡ್ಡಿದ 'ಆರ್ಥಿಕ ನೀತಿಗಳ' ಸವಾಲುಗಳು ಆಕೆಯನ್ನು ಜರ್ಝರಿತಗೊಳಿಸುತ್ತಿವೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳೆಂಬ ತ್ರಿ'ಕರಣ'ಗಳು ಉಳ್ಳವರನ್ನು ಮಾತ್ರ ಸಂತೃಪ್ತಪಡಿಸಲು 'ತ್ರಿಶೂಲ'ವಾಗಿ ಎರಗುತ್ತಿದೆ. ಕೆರೆಗೆ ಹಾರದಲ್ಲಿನ ಭಾಗೀರಥಿಯಂತೆ ಈ ತ್ರಿಶೂಲಗಳಿಗೆ ಮೊದಲ ಬಲಿ ಮಹಿಳೆ ಪರಿಣಾಮ;

ಅನ್ನವಿಲ್ಲ, ದುಡಿಮೆ ಇಲ್ಲ

ಅವಳ ಕೈಯಿಂದ ರೇಷನ್ ಕಾರ್ಡ್ ಕಸಿದುಕೊಳ್ಳಲಾಗಿದೆ. ಹಳದಿ ಕಾರ್ಡ್ ಸಿಕ್ಕಿತೆಂದು ಹಸಿರು ಕಾರ್ಡ್ ವಾಪಸ್ ಕೊಟ್ಟು ಯಾವುದೂ ಸಿಗದೆ ಕಂಗಾಲಾಗಿದ್ದಾಳೆ. ದಿನವೆಲ್ಲ ಕೂಲಿ ಮಾಡಿದರೂ ಕೇವಲ ಹತ್ತು ರೂಪಾಯಿ ನೋಟು ಕೈಗೆ. ತನಗೆ ಸಿಗಬೇಕಾದ ಅಕ್ಕಿ ಲಾರಿಗಟ್ಟಲೇ ವಿದೇಶಕ್ಕೆ ರವಾನೆಯಾಗಿದ್ದು ತನ್ನ ಕಣ್ಮುಂದೇ. ಕೊಡ ನೀರು ಬೇಕೆಂದರೂ ಪಟ್ಟಣಗಳಲ್ಲಿ ಖಾಸಗಿಯವರಿಗೆ ರೂ. 2ರಿಂದ 5ರೂ.ಳ ಕೊಡಬೇಕು. ಗ್ರಾಮಗಳಲ್ಲಾದರೆ ಮೂರ್‍ನಾಲ್ಕು ಕಿ.ಮೀ. ನಡೆಯಬೇಕು. ಈಗ ಮನುಷ್ಯರಿಗೆ ಕೆಲಸವಿಲ್ಲ. ಕೃಷಿ ಕೆಲಸಕ್ಕೂ ಯಂತ್ರ. ಪುರಾಣದಲ್ಲಿ ಬರುತ್ತದೆ. ವನವಾಸದಲ್ಲಿ ಸೀತೆಯು ರಾಮನೊಂದಿಗೆ ಕಾಡಿಗೆ ಹೋದಳು. ಆದರೆ ಈ ಹೊಲದಲ್ಲಿ ದುಡಿಯಬೇಕೆಂದರೂ ಕೆಲಸವಿಲ್ಲ. ಕೃಷಿ ಕುಸಿದಿದ್ದರಿಂದಾಗಿ ಮತ್ತು ಯಾವ ಮೂಲಭೂತ ಸೌಲಭ್ಯಗಳೂ ಇಲ್ಲದ ಹಳ್ಳಿಯ ವಾಸವೇ ದುಡಿವ ಜನರಿಗೆ ವನವಾಸವಾಗಿದೆ. ಬದುಕು ಹುಡುಕಿ ಗಂಡನೊಂದಿಗೆ ಪಟ್ಟಣಕ್ಕೆ ಬಂದ ಮಹಿಳೆಗೆ ಅಲ್ಲಿಯೂ ಹೆಚ್ಚು ಕೆಲಸವಿಲ್ಲ. ರಸ್ತೆ ಕೆಲಸಕ್ಕೂ ಯಂತ್ರಗಳಿವೆ. ಈ ವಾಸ್ತವದ ಸೀತೆಯು ಗೇಣು ಹೊಟ್ಟೆ ತುಂಬಿಕೊಳ್ಳಲು ಕಿಂಮದೀಪದ ಕೆಳಗೆ ಮತ್ತು ಕೋಣೆಗಳಲ್ಲಿ ಚರ್ಮದ ವ್ಯಾಪಾರಕ್ಕೆ ತಳ್ಳಲ್ಪಟ್ಟಿದ್ದಾಳೆ. ಹಿಂದೆ ಎನ್.ಡಿ.ಎ. ಸರಕಾರವಿದ್ದಾಗ (ಮಾತೆಯರ ಗೌರವದ ಬಗ್ಗೆ ಸುಳ್ಳು ಸಂಸ್ಕೃತಿಯ ಮಾತಾಡುವ) ವಾಜಪೇಯಿಯವರು ಮನೆಗೊಂದು ಉದ್ಯೋಗ ಎಂಬ ಬಣ್ಣದ ಭರವಸೆ ಕೊಟ್ಟರೇ ವಿನಃ ಮಹಿಳೆಯರ ಕೈಗೆ ಕೆಲಸ ಕೊಡಲಿಲ್ಲ. ಈಗಿನ ಕೇಂದ್ರದ ಯುಪಿಎ ಸರಕಾರವು ತನ್ನ ಕನಿಷ್ಠ ಕಾರ್ಯಕ್ರಮಗಳಲ್ಲಿ ವರ್ಷಕ್ಕೆ ನೂರು ದಿನಗಳ ಕೆಲಸದ ಗ್ಯಾರಂಟಿಯೇನೋ ಕೊಟ್ಟಿದೆ. 150 ಜಿಲ್ಲೆಗಳಲ್ಲಿ ಜಾರಿಯ ಪ್ರಯೋಗ ಮಾಡಲಿದೆ. ಆದರೆ ಅಷ್ಟೇ ಸಾಲದು. ದೇಶದೆಲ್ಲೆಡೆ ಈ ನೂರು ದಿನಗಳ ಕೆಲಸ ಎಲ್ಲ ನಿರುದ್ಯೋಗಿಗಳಿಗೂ ಸಿಗಬೇಕು ಮತ್ತು ಅದರಲ್ಲಿ ಮಹಿಳೆಯರಿಗೆ ಶೇಕಡ 40ರಷ್ಟು ಮೀಸಲಿಡಬೇಕು.

ರಾಜಕೀಯ ಮೀಸಲಾತಿ

ಮಹಿಳೆಯರು ಹೆಚ್ಚೆಚ್ಚು ಸಂಖ್ಯೆಯಲ್ಲಿ ನೀತಿ ನಿರೂಪಣಾ ಸ್ಥಾನಗಳಲ್ಲಿ ಭಾಗವಹಿಸಬೇಕು. ಆದರೆ ಎಷ್ಟೋ ಸಾರಿ ಖಂಡಿತವಾಗಿಯೂ ಈ ಪಾಳೇಗಾರಿ ಮೌಲ್ಯದ ಸಮಾಜವು ತನ್ನದೇ ರೀತಿಯ ಅಡ್ಡಿ ಆತಂಕಗಳನ್ನು ಸೃಷ್ಟಿಸುತ್ತದೆ. ಯಾವುದೇ ಕಾರಣಕ್ಕೂ ಮಹಿಳಾ ಸಮಾನತೆ ಅದಕ್ಕೆ ಬೇಕಿರುವುದಿಲ್ಲ. ಮಹಿಳೆಯನ್ನೂ ಸಹ ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಹವಣಿಕೆ ಹೊಂದಿರುತ್ತದೆ ಆದರೆ ಮಹಿಳೆಯು, ದೀರ್ಘ ಸಂಘರ್ಷದ ತರುವಾಯ ಅನೇಕ ಹಕ್ಕುಗಳನ್ನು ಪಡೆದಿದ್ದಾಳೆ ಎನ್ನುವುದಕ್ಕೆ ರಾಜಕೀಯದಲ್ಲಿ ಮಹಿಳಾ ಮೀಸಲಾತಿ (ಶಾಸನ - ಸಂಸತ್‌ನಲ್ಲಿ) ಮಸೂದೆಯೊಂದು ಅಸ್ತಿತ್ವ ಪಡೆದಿದ್ದೇ ಒಂದು ಉದಾಹರಣೆ. ಆದರೆ ಮಸೂದೆಯು ಸಂಸತ್ತಿನಲ್ಲಿ ಪಾಸಾಗಬೇಕಿದೆ. ಕಾಯ್ದೆಯಾಗಿ ಜಾರಿಯಾಗಬೇಕಿದೆ. ಹಿಂದಿನ ಸರಕಾರವು ಮಹಿಳಾ ಮೀಸಲಾತಿಯ ವಿರೋಧಿಯಾಗಿಯೇ ನಡೆದುಕೊಂಡಿದ್ದು ಬಹಿರಂಗ ಸತ್ಯವಾಗಿದೆ. ಆದರೆ ಇಂದಿನ ಯುಪಿಎ ಸರಕಾರವು ಎಡಪಕ್ಷಗಳ ತೀವ್ರ ಒತ್ತಡದ ತರುವಾಯ ಕನಿಷ್ಠ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಿದೆ. ಈ ಮಸೂದೆಯು ಸಂಸತ್ತಿನಲ್ಲಿ ಮಂಡಿಸಬೇಕು ಮತ್ತು ಈ ಮಸೂದೆಯ ಪರವಾಗಿ ಮತ ಚಲಾಯಿಸುವ ಮೂಲಕ ಎಲ್ಲ ಪಕ್ಷಗಳು ಮಹಿಳಾ ಪರ ನಿಲುವು ಸಾಬೀತುಗೊಳಿಸಬೇಕು ಎಂಬುದು ಮಹಿಳೆಯರ ಒತ್ತಾಯವಾಗಿದೆ. ಈಗಾಗಲೇ ಎಡಪಕ್ಷಗಳು ಮಸೂದೆಗೆ ಬೆಂಬಲಿಸಿ ತಮ್ಮ ನಿಲುವು ಸಾರಿ ಹೇಳಿವೆ ಎಂಬುದು ಗಮನಿಸಬೇಕು.

ಹಚ್ಚಬೇಕು ಅರಿವಿನ ಹಣತೆ

ಈ ಬಾರಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು, ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯೊಂದಿಗೆ, ಅಂಗನವಾಡಿ ನೌಕರರ ಸಂಘಟನೆಯೊಂದಿಗೆ ಕೈ ಜೋಡಿಸಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಿತು. ಕೋಮುವಾದ ವಿರೋಧಿಸಿ, ಸಮಾನ ವೇತನ ಮತ್ತು ಹಕ್ಕಿಗಾಗಿ ಎಲ್ಲ ಬಡವರಿಗೂ ರೇಷನ್ ಕಾರ್ಡ್‌ಗಾಗಿ, ಮಹಿಳಾ ಮೀಸಲಾತಿ ಮಸೂದೆ ಜಾರಿಗಾಗಿ. 100 ದಿನಗಳ ಕೆಲಸದ ಗ್ಯಾರಂಟಿಗಾಗಿ, ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲು ಒತ್ತಾಯಿಸಿತು. ಹೆಣ್ಣುಭ್ರೂಣ ಹತ್ಯೆ ತಡೆಗಟ್ಟಲು, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಗಾಗಿ ಆಸ್ತಿ ಹಕ್ಕಿನ ಜಾರಿಗಾಗಿ ಆಗ್ರಹಿಸಬೇಕಿದೆ. ಸಾಮ್ರಾಜ್ಯಶಾಹಿ ಒಡ್ಡಿದ ಸವಾಲುಗಳನ್ನು ಮೆಟ್ಟಿ ಮೀರಿ, ಕೋಮುವಾದಿಗಳ ಆಟವನ್ನು ಹುಸಿಗೊಳಿಸಿ, ಪಾಳೇಗಾರಿ ಮೌಲ್ಯಗಳನ್ನು ಧಿಕ್ಕರಿಸಿ, ತ್ರಿಕರಣಗಳ, 'ತ್ರಿಶೂಲ'ಗಳ ದುಷ್ಪರಿಣಾಮಗಳನ್ನು ಎದುರಿಸಿ **ಎಲ್ಲ ಮಹಿಳೆಯರು ವಿಶಾಲ ತಳಹದಿಯ ಚಳುವಳಿಯನ್ನು ಕಟ್ಟಬೇಕಿದೆ. ಜಾತೀಯತೆಯ ಗೋಡೆ ಒಡೆಯುತ ಮೌಢ್ಯತೆಯನ್ನು ತೊಡೆಯುತ ಅರಿವಿನ ಹಣತೆ ಹಚ್ಚಬೇಕಿದೆ.** ನವಸಮಾಜ ಕಟ್ಟಲು ಚಿಂತನೆ ಮತ್ತು ಚಳುವಳಿಯನ್ನು ಬೆಸೆಯುತ ಮಹಿಳೆಯು ಮುನ್ನಡೆದ ಪಣವನ್ನು ಈ ಸಂದರ್ಭದಲ್ಲಿ ತೊಡಬೇಕಿದೆ.

- ○

ಶಕ್ತಿಶಾಲಿಯಾದ ಸಾಮ್ರಾಜ್ಯಶಾಹಿ ವಿರೋಧಿ ರಂಗ ಕಟ್ಟಬೇಕು

ಭಾರತದಲ್ಲಿ ಚವೇಜ್


ಪ್ರಧಾನಿ ಹಾಗೂ ರಾಷ್ಟ್ರಪತಿಗಳೊಂದಿಗೆ

ಸಾಮ್ರಾಜ್ಯಶಾಹಿಗಳು ಎಲ್ಲಾ ಹವಣಿಕೆ, ಕುತಂತ್ರಗಳನ್ನು ಜನತೆಯ ಬೆಂಬಲದೊಂದಿಗೆ ಎದುರಿಸುತ್ತಾ ಪ್ರತಿರೋಧದ ಸ್ಫೂರ್ತಿ ಹಂಚುತ್ತಿರುವ ಕ್ರಾಂತಿಕಾರಿ ಚವೇಜ್ ಭಾರತಕ್ಕೆ ಬಂದುಹೋದರು. ಕಲ್ಕತ್ತಾದಲ್ಲಿ ಜನತೆಯ ಸ್ವಾಗತ ಕಂಡು ಮರೆಯಲಾಗದ ರೋಮಾಂಚನ ತಂದಿತು ಎಂದರು. ಭಾರತದ ಒಟ್ಟು ಭೇಟಿಯಲ್ಲಿ ಎಲ್ಲರ ಮನ ಗೆದ್ದರು.

"1998 ರ ವರೆಗೆ ವೆನೆಜುವೆಲಾದ ತೈಲ ಸಂಪತ್ತು ಅಮೆರಿಕಾದ ಕಂಪನಿಗಳ ಮೂಲಕ ಆ ದೇಶದ ಪಾಲಾಗುತ್ತಿತ್ತು. ಭೂಮಿ ಮತ್ತು ತೈಲದ ಒಡೆತನ ಕೆಲವೇ ಕೆಲವು ಖಾಸಗಿ ವ್ಯಕ್ತಿಗಳ ಕೈಯಲ್ಲಿತ್ತು. ಅದನ್ನು ಸರಿಪಡಿಸಲು ಹೊರಟಾಗ ಅಮೆರಿಕಾವು ತನ್ನ ಸರ್ಕಾರವನ್ನೇ ಕಿತ್ತೊಗೆಯಲು ಪ್ರಯತ್ನಿಸಿತು. ಆದರೆ ಎರಡು ದಿನ ಮಾತ್ರ ಅವರು ನನ್ನ ಸರ್ಕಾರವನ್ನು ಬುಡಮೇಲು ಮಾಡಿದರು. ವೆನೆಜುವೆಲಾದ ಜನತೆ ಗೋಡೆಯಂತೆ ಅಡ್ಡ ನಿಂತು ಅಮೆರಿಕಾದ ಕುಕೃತ್ಯವನ್ನು ತಡೆದರು" ಇದು 4 ದಿನಗಳ ಭೇಟಿಗಾಗಿ ಭಾರತಕ್ಕೆ ಬಂದ ವೆನೆಜುವೆಲಾದ ಅಧ್ಯಕ್ಷ ಹ್ಯೂಗೊ ಚವೇಜ್ ಅವರು ದೆಹಲಿಯ ಜವಹರಲಾಲ್ ವಿಶ್ವವಿದ್ಯಾಲಯ (ಜೆಎನ್‌ಯು) ವಿದ್ಯಾರ್ಥಿಗಳನ್ನು ಮತ್ತು ಶಿಕ್ಷಕರನ್ನು ಉದ್ದೇಶಿಸಿ ಮಾತನಾಡುವಾಗ ಹೇಳಿದ ಮಾತು.

ಅವರು ಮುಂದುವರೆಯುತ್ತಾ 'ಇನ್ನು ಮುಂದೆ ಪ್ರತಿಬಾರಿಯೂ ನಮ್ಮ ಮೇಲೆ ಧಾಳಿ ನಡೆದಾಗ ಅಷ್ಟೇ ತೀವ್ರವಾದ ಪ್ರತಿಧಾಳಿಯನ್ನು ನಡೆಸುತ್ತೇವೆ. ಆಗಸ್ಟ್ 15, 2004 ರ ಜನಗಣನೆಯ ನಂತರ ಬೊಲಿವೆರಿಯ ಕ್ರಾಂತಿಯ ರಾಜಕೀಯ ಅಧಿಕಾರ ಬಲಗೊಂಡಿದೆ" ಎಂದು ತಿಳಿಸಿದರು.

19ನೇ ಶತಮಾನದಲ್ಲಿ ಸೈಮನ್ ಬೊಲಿವರ್ ನೇತೃತ್ವದಲ್ಲಿ ವಿಮೋಚನೆಗೊಂಡ ಲ್ಯಾಟಿನ್ ಅಮೆರಿಕಾ ದೇಶಗಳ ಭಾಗವಾಗಿರುವ ವೆನೆಜುವೆಲಾದ ಅಧ್ಯಕ್ಷ ಹ್ಯೂಗೊ ಚವೇಜ್ ಕ್ರಾಂತಿಕಾರಿ ಮುನ್ನೋಟವನ್ನು ಹೊಂದಿದ್ದು ತನ್ನ ದೇಶದ ಸಾರ್ವಭೌಮತೆಯನ್ನು ಕಾಪಾಡಲು, ಅಮೆರಿಕಾ ಸಾಮ್ರಾಜ್ಯಶಾಹಿಯ ಬಿಗಿ ಹಿಡಿತವನ್ನು ಕಳಚಿ ಹಾಕಲು ಹೆಣಗುತ್ತಿದ್ದಾರೆ. ಅವರನ್ನು ಅಧಿಕಾರದಿಂದ ಕಿತ್ತೊಗೆಯಲು ಹಲವು ಬಾರಿ ಪ್ರಯತ್ನಿಸಿದ ಅಮೆರಿಕಾ, ಇದೀಗ ಸಿಐಎ ಮೂಲಕ ಕೊಲ್ಲಲು ಹವಣಿಸುತ್ತಿದೆ.


ಮಧ್ಯಾಹ್ನದ ಊಟ ಬಡಿಸುತ್ತಾ

ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಪ್ರಾತಿನಿಧ್ಯ

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತದ ಪ್ರಾತಿನಿಧ್ಯಕ್ಕೆ ತೀವ್ರವಾಗಿ ಒತ್ತಾಯಿಸಿದ ಚವೇಜ್, ಇದರಿಂದ ವಿಶ್ವಸಂಸ್ಥೆ ಬಲಗೊಳ್ಳುವುದು ಮಾತ್ರವಲ್ಲದೆ ಪ್ರಜಾಪ್ರಭುತ್ವೀಕರಣಗೊಳಿಸಲು ಸಹಾಯವಾಗುತ್ತದೆ ಎಂದು ಹೇಳಿದರು.

ಪ್ರಧಾನಮಂತ್ರಿ ಮನಮೋಹನ್ ಸಿಂಗ್‌ರೊಂದಿಗೆ ಮಾತುಕತೆ ನಡೆಸಿದ ಚವೇಜ್, ಎರಡು ದೇಶಗಳ ನಡುವಣ 6 ಒಪ್ಪಂದಗಳಿಗೆ ಸಹಿ ಹಾಕಿದರು. ಬಹುದ್ರುವೀಕರಣದ ಜಗತ್ತಿಗಾಗಿ, ಅಲಿಪ್ತ ಚಳುವಳಿಯನ್ನು ಪುನಶ್ಚೇನತಗೊಳಿಸಬೇಕೆಂದು ಎರಡು ದೇಶಗಳು ಒತ್ತು ಕೊಟ್ಟಿವೆ.

ಭಾರತದ ಕಂಪನಿಗಳಿಗೆ ಆಹ್ವಾನ

ಭಾರತಕ್ಕೆ ಅಗತ್ಯವಾದ ವಾರ್ಷಿಕ 100 ಮಿಲಿಯ ಬ್ಯಾರೆಲ್ ಕಚ್ಚಾ ತೈಲವನ್ನು ಪೂರೈಸಲು ವೆನೆಜುವೆಲಾ ಸಿದ್ಧವಿದೆ. ಚೀನಾ ಮತ್ತು ರಶಿಯಾ ದೇಶಗಳಂತೆ ಭಾರತದ ಕಂಪನಿಗಳೂ ಸಹ ವೆನೆಜುವೆಲಾದ ತೈಲ ಕ್ಷೇತ್ರದಲ್ಲಿ ಬಂಡವಾಳ ಹೂಡಬೇಕೆಂದು ಕರೆ ನೀಡಿದ ಚವೇಜ್ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲೂ ಜಂಟಿ ಸಹಭಾಗಿತ್ವ ನಡೆಸಲು ಭಾರತದ ಕಂಪನಿಗಳಿಗೆ ಆಹ್ವಾನ ನೀಡಿದರು.

ಎರಡು ದೇಶಗಳ ನಡುವಣ ಒಪ್ಪಂದದ ಭಾಗವಾಗಿ ವೆನೆಜುವೆಲಾದ ತೈಲ ಉದ್ದಿಮೆಯಲ್ಲಿ ಭಾರತದ ಸಾರ್ವಜನಿಕ ಉದ್ದಿಮೆಯಾದ ಓಎನ್‌ಜಿಸಿ(ವಿದೇಶ್) ಬಂಡವಾಳ ಹೂಡಲಿದೆ.

ಪಶ್ಚಿಮ ಬಂಗಾಳಕ್ಕೆ ಭೇಟಿ

ಮಾರ್ಚ್ 5 ರಂದು ಕಲ್ಕತ್ತ ನಗರದಲ್ಲಿ ಸಾರ್ವಜನಿಕ ಸ್ವಾಗತವನ್ನು ಏರ್ಪಡಿಸಲಾಗಿತ್ತು. ಕಲ್ಕತ್ತದಲ್ಲಿ ವಿದೇಶಿ ನಾಯಕರುಗಳ ಪೈಕಿ ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ಅವರಷ್ಟೇ ಜನಪ್ರಿಯರಾಗಿರುವ ಚವೇಜ್ ಅವರನ್ನು ಸ್ವಾಗತಿಸಲು ವಿಮಾನ ನಿಲ್ದಾಣದಿಂದ ಸಭೆ ನಡೆಯುವ ರವೀಂದ್ರ ಸ್ಟೇಡಿಯಂ 20 ಕಿ.ಮಿ.ದೂರದ ವರೆಗೆ ಜನಜಂಗುಳಿ ಸೇರಿತ್ತು. ಇದಲ್ಲದೆ ರವೀಂದ್ರ ಸ್ಟೇಡಿಯಂನಲ್ಲಿ 20000 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದು ಮಾತ್ರವಲ್ಲದೆ, ಹೊರಗಡೆ ನಿಂತು ಟಿ.ವಿ.ಮೂಲಕ ತಮ್ಮ ನೆಚ್ಚಿನ ನಾಯಕನನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಭೆಯಲ್ಲಿ ನಾಲ್ಕು ಗಂಟೆಗಳ ಕಾಲ ಮಾತನಾಡಿದ ಚವೇಜ್ ಶಕ್ತಿಶಾಲಿಯಾದ ಸಾಮ್ರಾಜ್ಯಶಾಹಿ ವಿರೋಧಿ ರಂಗವೊಂದನ್ನು ಕಟ್ಟುವ ಅಗತ್ಯವನ್ನು ಒತ್ತಿ ಹೇಳಿದರು. ಲ್ಯಾಟಿನ್ ಅಮೆರಿಕಾ, ಆಫ್ರಿಕಾ ಮತ್ತು ಏಶಿಯಾದಲ್ಲಿನ ದೇಶಗಳು ಒಂದಾಗಿ ಆರ್ಥಿಕ ಮತ್ತು ಇತರ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಬೇಕಾಗಿದೆ. 19 ಮತ್ತು 20ನೇ ಶತಮಾನಗಳಲ್ಲಿ ಯುರೋಪು ಮತ್ತು ಅಮೆರಿಕಾ ದೇಶಗಳ ಹಿಡಿತವೇ ಜಾಸ್ತಿಯಾಗಿತ್ತು. ಆದರೆ ಈ ಶತಮಾನದಲ್ಲಿ ಇತರೆ ದೇಶಗಳು ತಮ್ಮ ಪ್ರಾಬಲ್ಯವನ್ನು ಮೆರೆಯಬೇಕಾಗಿದೆ ಎಂದರು.


ಪ.ಬಂಗಾಳ ಮುಖ್ಯಮಂತ್ರಿ ಬುದ್ಧದೇವ್ ಜೊತೆ

ಚೀನಾ ಮತ್ತು ರಶಿಯಾ ದೇಶಗಳಿಗೆ ತೈಲವನ್ನು ನೀಡುತ್ತಿರುವುದರಿಂದ ಬುಶ್ ಆಡಳಿತ ಆಕ್ರೋಶಗೊಂಡಿದೆ. ಆದರೂ ಭಾರತಕ್ಕೆ ತೈಲಕ್ಷೇತ್ರದ ತಂತ್ರಜ್ಞರನ್ನು ಕಳುಹಿಸುವುದಾಗಿ ಹೇಳಿದರು. ಈಗಾಗಲೇ ವೆನೆಜುವೆಲಾದ ತೈಲ ತಂತ್ರಜ್ಞರು ರಾಜಸ್ತಾನದ ಬಾಗ್ಗವಾಲಾ ತೈಲ ಬಾವಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಮಾರ್ಚ್ 6 ಮತ್ತು 7 ರಂದು ಬೆಂಗಳೂರಿಗೆ ಭೇಟಿ ನೀಡಿದ ಚವೇಜ್ ಇಲ್ಲಿನ ಹೆಚ್.ಎ.ಎಲ್. ಇನ್‌ಫೋಸಿಸ್ ಮೊದಲಾದ ಕಂಪನಿಗಳಿಗೆ ಭೇಟಿ ನೀಡಿದರು. ಸಾರ್ವಜನಿಕ ಉದ್ದಿಮೆ ಹಿಂದೂಸ್ತಾನ್ ಏರೋನಾಟಿಕ್ಸ್(ಹೆಚ್‌ಎಎಲ್) ತಯಾರಿಸಿದ ವಿಮಾನಗಳನ್ನು ವೀಕ್ಷಿಸಿದ ಚವೇಜ್ ತಮ್ಮ ದೇಶಕ್ಕೆ ಖರೀದಿಸಲು ಇಚ್ಛೆ ವ್ಯಕ್ತಪಡಿಸಿದರು.

'ಪೇಟೆಂಟ್ ಪೆಡಂಭೂತ'........

ಪುಟ 7ರಿಂದ

ಮೊದಲು ಹಾಗೂ ನಂತರ ಅದನ್ನು ಪ್ರಶ್ನಿಸಲು ಅವಕಾಶ ನೀಡಿದೆ.

ಪೇಟೆಂಟ್ ಪಡೆದ ಔಷಧವನ್ನು ಸ್ಥಳೀಯವಾಗಿ ಉತ್ಪಾದಿಸಬೇಕು ಎಂಬ ನಿಯಮ ಶಾಸನದಲ್ಲಿ ಸೇರ್ಪಡೆ ಆಗಿಲ್ಲ.

ಔಷಧ ಉದ್ಯಮವು ಶಾಸನಕ್ಕೆ ಸೂಕ್ತ ಸುರಕ್ಷಾ ಕ್ರಮಗಳನ್ನು ಸೇರಿಸಬೇಕೆಂದು ಆಗ್ರಹಿಸಿದೆ. ಪೇಟೆಂಟ್ ನೀಡುವ ಮೊದಲೇ ಪ್ರಶ್ನಿಸುವ ಹಕ್ಕನ್ನು ಕಾಯ್ದಿರಿಸಬೇಕು ಹಾಗೂ ಮೇಲ್ ಬಾಕ್ಸ್ ಪೇಟೆಂಟ್‌ನಿಂದ ಹಾನಿಗೊಳಗಾಗುವ ಮುಖ್ಯ ಔಷಧಗಳ ಜೆನೆರಿಕ್ ಅವತರಣಿಕೆಗಳ ಉತ್ಪಾದನೆಗೆ ಅವಕಾಶ ನೀಡಬೇಕೆಂದು ಒತ್ತಾಯಿಸಿದೆ.

ಮೂಲ ಉತ್ಪನ್ನಕ್ಕಿಂತ ಹೆಚ್ಚು ಭಿನ್ನವಲ್ಲದ ಉತ್ಪನ್ನಗಳಿಗೆ ಪೇಟೆಂಟ್ ನೀಡಬಾರದು. ಇದರಿಂದ ವಿವಾದ ಹೂಡುವಿಕೆ ಕಡಿಮೆಯಾಗುವುದರ ಜೊತೆಗೆ, ನಕಲಿ ಪೇಟೆಂಟ್ ಅರ್ಜಿಗಳ ಮೂಲಕ ಒಂದೇ ಉತ್ಪನ್ನಕ್ಕೆ ನಿರಂತರ ಪೇಟೆಂಟ್ ಪಡೆಯುವ ಕ್ರಿಯೆಗೆ ತಡೆಯೊಡ್ಡಿದಂತಾಗುತ್ತದೆ ಎಂದು ಉದ್ಯಮ ಹೇಳಿದೆ.

ಖಾಸಗಿ ಆಸ್ತಿ ರಕ್ಷಣೆಗೆ ಪೇಟೆಂಟ್

ಪೇಟೆಂಟ್ ವೈಯಕ್ತಿಕ ಹಕ್ಕು ಹಾಗೂ ಸಾರ್ವಜನಿಕ ಹಿತಾಸಕ್ತಿ ನಡುವಿನ ಸಂಘರ್ಷವನ್ನು ಒಳಗೊಂಡಿವೆ. ಇದರಿಂದಾಗಿ ಸಾರ್ವಜನಿಕ ಹಿತಾಸಕ್ತಿ ರಕ್ಷಿಸುವಲ್ಲಿ ದುರ್ಬಲವಾಗಿದ್ದು, ಖಾಸಗಿ ಆಸಕ್ತಿ ರಕ್ಷಿಸುವಲ್ಲಿ ಬಲಿಷ್ಟವಾಗಿರುತ್ತವೆ. ಹಾಗೆ ನೋಡಿದರೆ ದುರ್ಬಲ ಅಥವಾ ಪ್ರಬಲ ಪೇಟೆಂಟ್ ಕಾನೂನು ಎಂಬುದಿಲ್ಲ. ರಕ್ಷಿಸಬೇಕಾದ್ದರ ಆಸಕ್ತಿಯನ್ನು ಆಧರಿಸಿ, ಅದು ಪ್ರಬಲ ಇಲ್ಲವೇ ದುರ್ಬಲವಾಗಿ ಬದಲಾಗುತ್ತದೆ. ಗ್ಯಾಟ್‌ನಲ್ಲಿ ಐಪಿಆರ್ ಕುರಿತ ಚರ್ಚೆಯಲ್ಲಿ 'ಪ್ರಬಲ ವ್ಯವಸ್ಥೆ' ಎಂಬ ಉಲ್ಲೇಖವಿದ್ದು, ಇದರರ್ಥ ಕಾರ್ಪೊರೇಟ್ ಹಕ್ಕುಗಳಿಗಷ್ಟೇ ಮನ್ನಣೆ ಎಂದು.

ಪೇಟೆಂಟ್ - ಬಡವರಿಗೆ ಜೀವನ, ಮರಣದ ಪ್ರಶ್ನೆ

ದೇಶವೊಂದರ ಆರ್ಥಿಕತೆಯನ್ನು ರೂಪುಗೊಳಿಸುವಲ್ಲಿ ಪೇಟೆಂಟ್ ಕಾನೂನುಗಳು ಬಹುಮುಖ್ಯ ಪಾತ್ರವಹಿಸುತ್ತದೆ. ಜೈವಿಕ ವೈವಿಧ್ಯವನ್ನು ಆಧರಿಸಿ ಬದುಕುತ್ತಿರುವ ದೇಶದ 2/3 ರಷ್ಟು ಜನರಿಗೆ ಪೇಟೆಂಟ್‌ಗಳು ಜೀವ-ಮರಣದ ಪ್ರಶ್ನೆಯಾಗಲಿವೆ. ನಮ್ಮ ಬೌದ್ಧಿಕ ಹಾಗೂ ಜೀವವೈವಿಧ್ಯವನ್ನು ಪೇಟೆಂಟ್ ಮೂಲಕ ಸೆರೆಯಾಗಿಸುವುದು ವಸಾಹತೀಕರಣಕ್ಕೆ ಕಾರಣವಾಗಲಿದೆ. ಇದು ನಮ್ಮ ಉಳಿವಿಗೇ ಧಕ್ಕೆ ತರಲಿದೆ.

ಜಗತ್ತಿನ ಇತಿಹಾಸದ ವಿವಿಧ ಘಟ್ಟದಲ್ಲಿದ್ದ ರಾಜಕೀಯ ಹಾಗೂ ಆರ್ಥಿಕ ಹೊಂದಾಣಿಕೆಗಳ ಪ್ರತಿರೂಪವೇ ಪೇಟೆಂಟ್‌ಗಳು: ವಸಾಹತುಗಳ ಕಾಲದಲ್ಲಿ ಅವು ವಸಾಹತೀಕರಣ ಹಾಗೂ ವಸಾಹತುಗಳು ಅಧೀನದಲ್ಲಿರುವಂತೆ ನೋಡಿಕೊಳ್ಳಲು ಬಳಕೆಯಾದವು. ವಸಾಹತೋತ್ತರ ಕಾಲದಲ್ಲಿ ಪೇಟೆಂಟ್‌ಗಳು ವಸಾಹತೀಕರಣದ ಹೊಸ ಅಧ್ಯಾಯಕ್ಕೆ ಅನುವಾಗವಂತೆ ರೂಪಿಸಲ್ಪಟ್ಟಿವೆ. ಮನುಷ್ಯರು ಮಾತ್ರವಲ್ಲ, ಎಲ್ಲ ಜೀವಪ್ರಕಾರಗಳೂ ವಸಾಹತೀಕರಣಕ್ಕೆ ಒಳಗಾಗಿವೆ. ಶತಮಾನಗಳ ಅನ್ವೇಷಣೆ ಹಾಗೂ ಸೃಜನಶೀಲತೆಯು ದರೋಡೆಗೆ ತುತ್ತಾಗಿ, ಖಾಸಗಿ ಆಸ್ತಿಯಾಗಲಿವೆ. ಪೇಟೆಂಟ್ ಕಾನೂನು ಜೈವಿಕ ಹಾಗೂ ಬೌದ್ಧಿಕ ದರೋಡೆಯನ್ನು ಉತ್ತೇಜಿಸಿ, ಬೌದ್ಧಿಕ ಗುಲಾಮಗಿರಿ ಹಾಗೂ ಜೈವಿಕ ಜೀತವನ್ನು ಸಾಂಸ್ಥೀಕರಣಗೊಳಿಸುತ್ತದೆ. ಪ್ರಜಾಸತ್ತೆ ಹಾಗೂ ವೈವಿಧ್ಯದ ಮೂಲ ಚೌಕಟ್ಟಿನಲ್ಲಿ ರಾಜಕೀಯ-ಆರ್ಥಿಕ ವ್ಯವಸ್ಥೆಯನ್ನು ಇರಿಸಿದ್ದೇ ಆದರೆ, ಪೇಟೆಂಟ್ ಕಾನೂನುಗಳು ನಿಜವಾದ ಸೃಜನಶೀಲತೆಗೆ ಪುರಸ್ಕಾರ ನೀಡುವುದರ ಜೊತೆಗೆ, ಪ್ರಕೃತಿ ಮತ್ತು ಸಮಾಜದ ಏಳಿಗೆಗಳನ್ನು ನಾಶ ಮಾಡುವುದಿಲ್ಲ.

ಭೇಟಿಯೇ ಎಡಶಕ್ತಿಗಳಿಗೆ ಚಾಲನೆ ನೀಡಿದೆ

ಸುರ್ಜಿತ್‌ರ ಪಾಕಿಸ್ತಾನ ಡೈರಿ

ಪಾಕಿಸ್ತಾನಕ್ಕೆ ಪ್ರಥಮ ಕಮ್ಯೂನಿಸ್ಟ್ ತಂಡದ ಭೇಟಿಯನ್ನು ಪಾಕಿಸ್ತಾನದಲ್ಲಿ 'ಚಾರಿತ್ರಿಕ' ಎಂದು ಕರೆಯಲಾಗಿದೆ. ಸುರ್ಜಿತ್ ಮತ್ತು ತಂಡದ ಇನ್ನೊಬ್ಬ ಸದಸ್ಯ ನರೇಶ್ ನಾದೀಮ್ ಈ ಭೇಟಿ ಬಗ್ಗೆ ಡೈರಿ ಬರೆಯುತ್ತಿದ್ದಾರೆ. ಇದು ಪೀಪಲ್ಸ್ ಡೆಮೊಕ್ರಸಿ ಪತ್ರಿಕೆಯಲ್ಲಿ ಪ್ರಕಟಿತವಾಗುತ್ತಿದೆ. ಅವರಿಬ್ಬರ ಡೈರಿಯ ಆಯ್ದ ಭಾಗಗಳು ಇಲ್ಲಿವೆ.

ಚಾರಿತ್ರಿಕ ಭೇಟಿ

ಭೇಟಿಯನ್ನು ಪಾಕಿಸ್ತಾನದ ಸಮಾಜದ ಪ್ರತಿಯೊಂದು ವಿಭಾಗ- ಮಾಧ್ಯಮಗಳು, ಬುದ್ಧಿಜೀವಿಗಳು, ಸಾಮಾನ್ಯ ನಾಗರೀಕರು ಮತ್ತು ಎಡ ವಲಯಗಳು - 'ಚಾರಿತ್ರಿಕ ಎಂದು ಬಣ್ಣಿಸಿದೆ. ಈಗ ಪಾಕಿಸ್ತಾನದಲ್ಲಿ ಇರುವ ಪ್ರದೇಶಗಳಲ್ಲಿ ಇನ್ನೂ ಉಳಿದಿರುವ ನನ್ನ ಹಲವು ಹಳೆಯ ಮಿತ್ರರನ್ನು ಭೇಟಿ ಮಾಡುವ, ನನ್ನ ಹಳೆಯ ದಿನಗಳನ್ನು ಮೆಲುಕು ಹಾಕುವ ಅವಕಾಶ ಒದಗಿಸಿತು. ಪಾಕಿಸ್ತಾನದ ಮತ್ತು ಭಾರತದ ಎಡ ಶಕ್ತಿಗಳು ಪರಸ್ಪರರಿಂದ ಪಾಠ ಕಲಿಯಲು ಸಾಧ್ಯವಾಯಿತು.

ಆಳುವವರ ಆಟ ನಡೆಯುತ್ತಿಲ್ಲ.

ಪಾಕಿಸ್ತಾನದಲ್ಲಿ ಈವರೆಗೆ ಬಂದ ಮಿಲಿಟರಿ ಅಥವಾ ನಾಗರೀಕ ಆಳ್ವಿಕೆಗಳು - ಸಾಮಾಜಿಕ ಅತೃಪ್ತಿಯನ್ನು ಹದ್ದುಬಸ್ತಿನಲ್ಲಿಡಲು ಭಾವನಾತ್ಮಕ ವಿಷಯಗಳನ್ನು ಬಳಸುತ್ತಿದ್ದೇವೆ. ಭಾರತದ ವಿರುದ್ಧ ಏನಾದರೂ ವಿಷಯದ ಮೇಲೆ ದ್ವೇಷ ಪ್ರಚೋದನೆ ಮಾಡುವುದು ಇವರೆಲ್ಲಾ ಹೂಡಿರುವ ತಂತ್ರ. ಈಗ ಪಾಕಿಸ್ತಾನಿ ಜನತೆಗೆ ಈ ಆಟ ಪೂರ್ಣ ಅರ್ಥವಾಗಿದೆ. ಜನತೆ ಭಾರತ ಪಾಕ್ ಸಂಬಂಧ ಉತ್ತಮಗೊಳಿಸುವುದಕ್ಕೆ ಪ್ರಬಲವಾಗಿ ಒತ್ತಾಯಿಸುತ್ತಿದ್ದಾರೆ.....

ಎಡಶಕ್ತಿಗಳು ಒಗ್ಗೂಡುತ್ತಿವೆ, ಚಿಗುರುತ್ತಿವೆ

ಇಂತಹ ರಾಜಕೀಯ ಪರಿಸ್ಥಿತಿ ಮತ್ತು ಹಿಂದೆ ರಾವಲ್ಪಿಂಡಿ ಪಿತೂರಿ ಕೇಸ್ (1951-55) ಸೇರಿದಂತೆ ಕೈಗೊಂಡ ದಮನಕಾರಿ ಕ್ರಮಗಳು ಪಾಕಿಸ್ತಾನದಲ್ಲಿ ಹಿಂದೆ ಇದ್ದ ಸ್ಫೂರ್ತಿದಾಯಕ ಕಮ್ಯೂನಿಸ್ಟ್ ಚಳುವಳಿಯನ್ನು ನಿರ್ನಾಮ ಮಾಡಿತು.

ಈಗ ಒಡೆದು ಹೋಗಿರುವ ಎಡಶಕ್ತಿಗಳು ತಮ್ಮೆಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಮಿಲಿಟರಿ ಆಡಳಿತ ಮತ್ತು 'ಮುಖ್ಯಧಾರೆ' ಎನಿಸಿಕೊಳ್ಳುವ ಪಕ್ಷಗಳು - ಇವೆರಡಕ್ಕೂ ಬದಲಿ ನಿರ್ಮಾಣ ಮಾಡಲು ಪ್ರಯತ್ನಿಸುತ್ತಿವೆ. ಜತೆಜತೆಗೆ ಮಿಲಿಟರಿ ಆಡಳಿತ ಕಿತ್ತುಹಾಕಿ ಪ್ರಜಾಪ್ರಭುತ್ವ ಪುನಃ ಸ್ಥಾಪಿಸುವ ಎಲ್ಲಾ ಪ್ರಯತ್ನಗಳನ್ನು ಬೆಂಬಲಿಸುತ್ತಿವೆ.

ಜಂಟಿ ಎಡರಂಗದ ಮೂರು ಪಕ್ಷಗಳ ಕೆಲಸ ಇನ್ನೂ ಸಮರ್ಪಕವಾಗಿಲ್ಲ. ಆದರೆ ಇಂತಹ ಒಂದು ರಂಗದ ರಚನೆಯೇ ಎಲ್ಲಾ ಎಡಶಕ್ತಿಗಳು ಒಗ್ಗೂಡಲು, ನಿಷ್ಕ್ರಿಯರಾಗಿರುವ ಹಲವು ಎಡಕಾರ್ಯಕರ್ತರು ಸಕ್ರಿಯವಾಗಲು ವೇಗವರ್ಧಕದ ಕೆಲಸ ಮಾಡುತ್ತಿದೆ. ಇದು ಆರೋಗ್ಯಕಾರಿ ಬೆಳವಣಿಗೆ. ಒಗ್ಗಟ್ಟಿನ ಈ ಪ್ರಯತ್ನ ಗಟ್ಟಿಗೊಳ್ಳಲಿ ಕೊನೆಗೂ ಪಾಕಿಸ್ತಾನದಲ್ಲಿ ಒಂದು ವರ್ಗ ಬರಲಿ ಶಕ್ತಿ ಹೊಮ್ಮಲಿ ಎಂದು ಎಲ್ಲರೂ ಹಾರೈಸುತ್ತಿದ್ದಾರೆ.

ಇದೇನು ತಿರುಕನ ಕನಸಲ್ಲ. ಎಡಶಕ್ತಿಗಳು ಪಾಕಿಸ್ತಾನದಲ್ಲಿ ಇನ್ನೂ ಹರಿಹಂಚಿಹೋಗಿದ್ದರೂ, ಅಮೂಲ್ಯ ಸಂಪನ್ಮೂಲಗಳನ್ನು ಹೊಂದಿವೆ. ಮೊದಲನೆಯದಾಗಿ ಪಾಕಿಸ್ತಾನಿ ಜನತೆಯಲ್ಲಿ ಪ್ರಜಾಸತ್ತಾತ್ಮಕ ಬದಲಾವಣೆ ಮತ್ತು ಸಾಮಾಜಿಕ- ಆರ್ಥಿಕ, ಜೀವನದಲ್ಲಿ ನಕಾರಾತ್ಮಕ ಬದಲಾವಣೆ ಬಗ್ಗೆ ಇರುವ ತೀವ್ರ ಆಸಕ್ತೀ ಇದಕ್ಕೆ ಪ್ರಮುಖ ನೆಲೆ. ಎರಡನೆಯದಾಗಿ, ದೇಶದ ತುಂಬಾ ಕಾರ್ಯಕರ್ತರ ಪಡೆ ಇದೆ. ಉದಾಹರಣೆಗೆ ಪಾಕಿಸ್ತಾನದ ಕಮ್ಯೂನಿಸ್ಟ್ ಪಕ್ಷ ಒಬ್ಬನೇ ಒಬ್ಬ ಪೂರ್ಣಾವಧಿ ಕಾರ್ಯಕರ್ತನನ್ನು ಸಾಕುವ ಶಕ್ತಿ ಹೊಂದಿಲ್ಲವಾದರು, ಪಕ್ಷ ಚಟುವಟಿಕೆಗಳನ್ನು ಹಮ್ಮಿಕೊಂಡಾಗಲೆಲ್ಲ, ತಮ್ಮದೇ ಹಣ ಖರ್ಚು ಮಾಡಿ ಅದರಲ್ಲಿ ಭಾಗವಹಿಸುತ್ತಾರೆ. ಬುದ್ಧಿಜೀವಿಗಳು, ಪ್ರಗತಿಪರರು ಬಹುಪಾಲು ಎಡ-ಧೋರಣೆಯಿರುವವರು... ಒಟ್ಟಾರೆಯಾಗಿ ಎಡಚಳುವಳಿ ಮತ್ತೆ ಚಿಗುರಲು ಅನುಕೂಲಕರ ಪರಿಸ್ಥಿತಿ ಇದೆ.

ಭಾರಿ ನಿರೀಕ್ಷೆಗಳು

ಇಂತಹ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟ್ ತಂಡ ಪಾಕಿಸ್ತಾನದಲ್ಲಿ ಆಗಮಿಸಿತು. ಹೋದಲ್ಲೆಲ್ಲಾ ಭಾರಿ ಉತ್ಸಾಹದ ಸ್ವಾಗತ ಸಿಕ್ಕತು. ಈ ಉತ್ಸಾಹವೇ ದೇಶದಲ್ಲಿ ಬದಲಾವಣೆ ಮತ್ತು ಎಡ ಐಕ್ಯತೆಯ ಬಗ್ಗೆ ಆಸಕ್ತಿಯ ಪ್ರತಿಬಿಂಬ. ಭಾರತ ಎಡಶಕ್ತಿಗಳು ಎಲ್ಲೆಡೆಯಂತೆ, ಪಾಕಿಸ್ತಾನದಲ್ಲೂ ಭಾರಿ ಪ್ರತಿಷ್ಠೆ ಹೊಂದಿದೆ. ಭಾರತದ ಜನತೆಯಂತೆ, ಪಾಕಿಸ್ತಾನದ ಜನತೆಯಲ್ಲಿ ಯುಪಿಎ ಸರ್ಕಾರ ಮೇಲೆ ಎಡಶಕ್ತಿಗಳ ಸಕಾರಾತ್ಮಕ ಪ್ರಭಾವ ಭಾರೀ ನಿರೀಕ್ಷೆಗಳನ್ನು ಹುಟ್ಟಿದೆ. ಪಾಕಿಸ್ತಾನದ ಅಧ್ಯಕ್ಷ, ಪ್ರಧಾನಿ, ವಿದೇಶಮಂತ್ರಿ ನಮ್ಮನ್ನು ಭೇಟಿ ಮಾಡಲು ಕಾತುರರಾಗಿದ್ದೂ ಇದೇ ಕಾರಣದಿಂದ. ಈಗ ಚಾಲ್ತಿಯಲ್ಲಿರುವ ಭಾರತ-ಪಾಕ್ ಮಾತುಕತೆ ಮುಂದಕ್ಕೊಯ್ಯಲು ಎಡಶಕ್ತಿಗಳು ಒತ್ತಡ ಹೇರಬಹುದು ಎಂಬುದೇ ಆ ನಿರೀಕ್ಷೆ.


'ನಿಮ್ಮ ನಿಲುವು ತಂತ್ರ ನೀವೇ ರೂಪಿಸಬೇಕು....

ಒಟ್ಟಾರೆಯಾಗಿ ಎಡ ಮತ್ತು ಬದಲಾವಣೆ ಬಯಸುವ ಶಕ್ತಿಗಳು ಐಕ್ಯತೆಗಾಗಿ ಹಾತೊರೆಯುತ್ತಿವೆ. ಈ ಉದ್ದೇಶ ಸಾಧನೆಗೆ ಅವರಿಗೆ ಮಾರ್ಗದರ್ಶನ ಬೇಕಾಗಿದೆ. ಭಾರತದ ಸಂಗಾತಿಗಳಿಂದ ಇಂತಹ ಮಾರ್ಗದರ್ಶನ ನಿರೀಕ್ಷಿಸಿದ್ದರು.

ಪಕ್ಷಗಳ ನಡುವಿನ ಸಂಬಂಧಗಳ ಬಗ್ಗೆ ತಿಳುವಳಿಕೆ ಇರುವ ನಾವು ಅವರಿಗೆ 'ಮಾರ್ಗದರ್ಶನ' ನೀಡಲು ನಿರಾಕರಿಸಿದೆವು. ಭಾರತದ ಪಕ್ಷಗಳು ಪಾಕಿಸ್ತಾನದ ಪಕ್ಷಗಳಿಗೆ 'ಮಾರ್ಗದರ್ಶನ' ನೀಡುವುದು ಸಾಧ್ಯವಿಲ್ಲ. ಪಾಕಿಸ್ತಾನದ ನಿರ್ದಿಷ್ಟ ಪರಿಸ್ಥಿತಿ ಬಗ್ಗೆ ನಿಮಗೆ ಹೆಚ್ಚಿನ ತಿಳುವಳಿಕೆ ಇದೆ. ಪರಿಸ್ಥಿತಿಯ ವಿಶ್ಲೇಷಣೆ ಮಾಡಿ, ಕ್ರಾಂತಿಯ ಕಾರ್ಯಯೋಜನೆ ಮತ್ತು ಕಾರ್ಯತಂತ್ರವನ್ನು ನೀವೇ ರೂಪಿಸಬೇಕು ಎಂದು ನಾವು ಅವರಿಗೆ ತಿಳಿಹೇಳಿದೆವು. ಇದರರ್ಥ ಅನುಭವ ಮತ್ತು ಯೋಚನೆಗಳನ್ನು ಹಂಚಿಕೊಳ್ಳುವ ಸಾಧ್ಯತೆ, ಅಗತ್ಯ ಇಲ್ಲವೆಂದಲ್ಲ. ಇಂತಹ ವಿನಿಮಯ ನಮ್ಮ ಭೇಟಿಯ ಸಮಯದಲ್ಲಿ ಸಾಕಷ್ಟು ಆಯಿತು.

ಭೇಟಿಯೇ ಎಡ-ಐಕ್ಯತೆ ಚಾಲನೆ ನೀಡಿದೆ

ಎಡಶಕ್ತಿಗಳನ್ನು ಪ್ರತಿನಿಧಿಸುವ ವ್ಯಕ್ತಿಗಳು, ಕಾರ್ಯಕರ್ತರು ಎಲ್ಲೆಡೆ ದೊಡ್ಡ ಸಂಖ್ಯೆಯಲ್ಲಿ ತಂಡವನ್ನು ಭೇಟಿ ಮಾಡಲು ಬಂದರು. ಲಾಹೋರ್, ಕರಾಚಿ ವಿಮಾನ ನಿಲ್ದಾಣಗಳಲ್ಲಿ, ಲಾಹೋರ್, ರಾವಲ್ಪಿಂಡಿ, ಕರಾಚಿ ಮತ್ತು ಇತರೆಡೆ ಜಂಟಿ ಎಡರಂಗ ಏರ್ಪಡಿಸಿದ ಸಾರ್ವಜನಿಕ ಸಭೆಗಳಲ್ಲಿ ಎಲ್ಲೆಲ್ಲೂ ಇದು ಕಂಡಿತು. ನಮ್ಮ ತಂಡ ಅಥವಾ ನಮ್ಮ ಜತೆ ಬಂದ ಮಾಧ್ಯಮಗಳ ತಂಡಕ್ಕೆ ಎಂದೂ ನಾವು ನಮ್ಮ ದೇಶದಲ್ಲಿ ಇಲ್ಲ ಎಂದು ಅನಿಸಲೇ ಇಲ್ಲ.



ತಂಡದ ಭೇಟಿ ಪಾಕಿಸ್ತಾನದ ಎಡ-ಶಕ್ತಿಗಳಿಗೆ ಸಾಕಷ್ಟು ಸಫಲವಾಯಿತು. ಇಲ್ಲಿ ಕರಾಚಿ ಪ್ರೆಸ್‌ಕ್ಲಬ್‌ನಲ್ಲಿ ಏರ್ಪಡಿಸಲಾದ ಸಭೆಯ ಉದಾಹರಣೆ ಕೊಡಬಹುದು. ಮಾರ್ಚ್ 3 ರಂದು (ನಮ್ಮ ಭೇಟಿಯ ಕೊನೆಯ ಹಿಂದಿನ ದಿನ) ಜಂಟಿಯಾಗಿ ಎಡರಂಗ ಮತ್ತು ಕರಾಚಿ ಪತ್ರಕರ್ತರ ಯೂನಿಯನ್ ಏರ್ಪಡಿಸಿದ ಈ ಸಭೆ ಅತ್ಯಂತ ದೊಡ್ಡದಾಗಿತ್ತು. ಅದಕ್ಕಿಂತಲೂ ಇನ್ನೊಂದು ಕಾರಣಕ್ಕೆ ಮಹತ್ವಪೂರ್ಣವಾಗಿತ್ತು. ಹಲವು ವರ್ಷಗಳ ಹಿಂದೆ ನಿಷ್ಕ್ರಿಯವಾಗಿದ್ದ ಎಡಪಂಥೀಯರು ಈ ಸಭೆಗೆ ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು. ಭಾರತದ ಕಮ್ಯೂನಿಸ್ಟ್ ತಂಡ ಪಾಕಿಸ್ತಾನಕ್ಕೆ ಭೇಟಿ ನೀಡುತ್ತಿದೆ ಎಂಬುದೇ ಅವರಿಗೆ ಉತ್ಸಾಹ ತಂದಿತ್ತು. ತಂಡದ ಭೇಟಿಯೇ ಇವರೆಲ್ಲಾ ಜಂಟಿ ಎಡರಂಗದ ಎಡ ಪಕ್ಷಗಳ ಸಂಪರ್ಕಕ್ಕೆ ಪುನಃ ಬರುವ ಹಾಗೆ ಮಾಡಿತ್ತು. ನಮ್ಮ ಕರಾಚಿ ಭೇಟಿ ಆ ನಗರದಲ್ಲಿ ಮಾತ್ರವಲ್ಲ ವಾಯುವ್ಯ ಗಡಿ ಪ್ರಾಂತ್ಯ (NWFP)ದ ತುಂಬಾ ಎಡ ಕಾರ್ಯಕರ್ತರು ಬೆಂಬಲಿಗರು ರಂಗವನ್ನು ತಾವೇ ಸಂಪರ್ಕಿಸಿದ್ದಾರೆ. ಇದು ಎಷ್ಟು ದೊಡ್ಡ ರೀತಿಯಲ್ಲಿ ಆಗಿದೆಯೆಂದರೆ ಪೂರ್ಣಾವಧಿ ಕಾರ್ಯಕರ್ತರಿಲ್ಲದಿರುವ ಈ ಪಕ್ಷಗಳಿಗೆ ಈ ಅಮಿತ ಉತ್ಸಾಹವನ್ನು ಪೂರ್ಣವಾಗಿ ಕ್ರೋಢೀಕರಿಸುವುದು ಹೇಗೆ ಎಂದು ಹೊಳೆಯುತ್ತಿಲ್ಲ.

ಭಾರತ-ಪಾಕಿಸ್ತಾನ ಸಂಬಂಧ ಉತ್ತಮಗೊಳ್ಳುವುದು ಪಾಕಿಸ್ತಾನದ ಜನತೆಗೆ ಮಾತ್ರವಲ್ಲ ಎಡಶಕ್ತಿಗಳಿಗೂ ಹೆಚ್ಚಿನ ಅನುಕೂಲ ಉಂಟು ಮಾಡುತ್ತದೆ. ಪ್ರಗತಿಪರ, ಉದಾರವಾದಿ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಮೂಲೆಗೊತ್ತಲು, ಭಾವನಾತ್ಮಕ ಪ್ರಚೋದನೆ ನೀಡುವ ಅವಕಾಶಗಳನ್ನು ಆಳುವವರಿಗೆ ಇದು ತಪ್ಪಿಸುತ್ತದೆ. ಇದು ಪಾಕಿಸ್ತಾನದ ಎಡಶಕ್ತಿಗಳ ನಿರೀಕ್ಷೆ.


Statement of the ownership etc.
the weekly newspaper 'Aikyaranga'
Form IV
(See Rule 8)

1. Place of Publication	:	# 12, 18th Cross, S.R.Nagar, Bangalore-560 027
2. Periodicity of Publication	:	Weekly
3. Printer's Name	:	G.N.Nagaraj
(Whether Citizen of India? If Foreigner, State the Country of Origin)	:	Indian
Address	:	# 12, 18th Cross, S.R.Nagar, Bangalore-560 027.
4. Publisher's Name	:	G.N.Nagaraj
(Whether Citizen of India? If Foreigner, State the Country of Origin)	:	Indian
Address	:	# 12, 18th Cross, S.R.Nagar, Bangalore-560 027.
5. Editor's Name	:	S.Y.Gurushantha
(Whether Citizen of India? If Foreigner, State the Country of Origin)	:	Indian
Address	:	# 12, 18th Cross, S.R.Nagar, Bangalore-560 027.
6. Name and address of individuals who own the Newspaper and partners or Shareholders holding more than one percent of the total capital	:	Karnataka State Communist Party of India (Marxist), Karnataka State Committee, S.R.Nagar, # 12, 18th Cross, Bangalore - 560 027.

I G.N. Nagaraj, hereby declare that the particulars given above are true to the best of my knowledge and belief.

Date 20 March 2005
Bangalore

Sd/-
G.N.Nagaraj



ರಂಗದ ಮೇಲೆ ಮೂಡಿ ಬಂದ ಜಾಗತೀಕರಣದ ಯಕ್ಷಗಾನ

ಅಖಿಲ ಭಾರತ ವಿಮಾ ನೌಕರರ ಸಂಘದ 20ನೇ ಸಮ್ಮೇಳನದ ಅಂಗವಾಗಿ ಯುಕ್ಷಗಾನವನ್ನು ಪ್ರದರ್ಶಿಸಲಾಗಿತ್ತು. ಜಾಗತೀಕರಣ ಅಭಿವೃದ್ಧಿಶೀಲ ರಾಷ್ಟ್ರಗಳ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಬದುಕಿನ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು ಈ ಪ್ರದರ್ಶನದ ಮೂಲ ಉದ್ದೇಶ

ಈಚೆಗೆ ವಿಶ್ವಬ್ಯಾಂಕ್, ಐ.ಎಂ.ಎಫ್., ವಿಶ್ವ ವ್ಯಾಪಾರ ಸಂಸ್ಥೆ ಮತ್ತು ಅವುಗಳನ್ನು ಸೂತ್ರದ ಬೊಂಬೆಗಳಂತೆ ಕುಣಿಸುವ ಅಮೆರಿಕ ಹಾಗೂ ಬ್ರಿಟನ್ ದೇಶಗಳು ಜೀವ ತಳೆದು ನಗರದ ಅಂಬೇಡ್ಕರ್ ಭವನದಲ್ಲಿ ಕಾಣಿಸಿಕೊಂಡವು. ಲಯ ಬದ್ಧವಾದ ಹಾಡು ಮತ್ತು ಹಿಮ್ಮೇಳಕ್ಕೆ ಮನಸೋಯಿಚ್ಛೆ ಕುಣಿದವು. ವಿಶ್ವದ ರಾಷ್ಟ್ರಗಳ ಆರ್ಥಿಕತೆಯ ಮೇಲೆ ಸವಾರಿ ಮಾಡುವ ಸೂತ್ರಗಳನ್ನು ಚರ್ಚಿಸಿದವು.... ಅದೊಂದು ಯಕ್ಷಗಾನ ಪ್ರದರ್ಶನ. ಪ್ರಸಂಗ ಜಾಗತೀಕರಣ.

ಬೆಂಗಳೂರಿನ ಕರಾವಳಿ ಕಲಾವಿದರು ಪ್ರಸ್ತುತಪಡಿಸಿದ ಈ ಪ್ರಸಂಗದಲ್ಲಿ ಒಡ್ಡೋಲಗ ಅಮೆರಿಕ ಮತ್ತು ಬ್ರಿಟನ್‌ಗಳದ್ದು. ಯಕ್ಷಗಾನದ ಭಾಷೆಗೆ ಹೊಂದಿಕೊಳ್ಳುವಂತೆ ಅವುಗಳನ್ನು ಅಮರ್ಕ ಮತ್ತು ಬಿಟಾನಿ ಎಂದು ಕರೆಯಲಗಿತ್ತು. ಆಡಳಿತದ ವಸಾಹತುಶಾಹಿ ವ್ಯವಸ್ಥೆ ಅಂತ್ಯವಾದ ಹಿನ್ನೆಲೆಯಲಿ ಆರ್ಥಿಕ ವಸಾಹತುಶಾಹಿ ಯವಸ್ಥೆಯನ್ನು ಸ್ಥಾಪಿಸುವ ಬಗೆಗೆ ಅಮರ್ಕ ಮತ್ತು ಬಿಟಾನಿಗಳು ಸಮಾಲೋಚನೆ ನಡೆಸುತ್ತಾರೆ. ಈ ಉದ್ದೇಶಕ್ಕಾಗಿ ಸೃಷ್ಟಿಸಿದ ವಿಶ್ವಬ್ಯಾಂಕ್ ಐಎಂಎಫ್ ಮತ್ತು ವಿಶ್ವ ವ್ಯಾಪಾರ ಸಂಸ್ಥೆಗಳನ್ನು ಆಹ್ವಾನಿಸುವುದರೊಂದಿಗೆ ರಂಗಸ್ಥಳಕ್ಕೆ ಮೂರು ಬಣ್ಣದ ವೇಷಗಳ ಪ್ರವೇಶವಾಗುತ್ತದೆ. ಕೊನೆಯಲ್ಲಿ ವಿಶ್ವ ಕಾರ್ಮಿಕ ಸಂಘನೆಯ ಮುಂದಾಳತ್ವದಲ್ಲಿ ತೃತೀಯ ಜಗತ್ತಿನ ದೇಶಗಳಾದ ಭಾರತ, ಶ್ರೀಲಂಕಾ, ಬಾಂಗ್ಲಾದೇಶಗಳೆಲ್ಲ ಒಟ್ಟಾಗಿ ಬೃಹತ್ ರಾಷ್ಟ್ರಗಳ ಆರ್ಥಿಕ ಪಿತೂರಿಯನ್ನು ಸೋಲಿಸುತ್ತವೆ.

ಈ ಮಧ್ಯೆ ಆರ್ಥಿಕ ದಬ್ಬಾಳಿಕೆ ಅಭಿವೃದ್ಧಿಶೀಲ ಜಗತ್ತಿನ ಸಾಂಸ್ಕೃತಿಕ ರಂಗದ ನಿರ್ನಾಮಕ್ಕೂ ಕಾರಣವಾಗುತ್ತದೆ ಎನ್ನುವ ಸಂದೇಶ ನೀಡುವುದಕ್ಕಾಗಿ ಅಮರ್ಕ ಮತ್ತು ಬಿಟಾನಿ 'ಭರತನಾಟ್ಯ' ಕಾರ್ಯಕ್ರಮವೊಂದನ್ನು ಸಂಘಟಿಸಿ ಅದನ್ನು ಅವಹೇಳನ ಮಾಡುವ ಸನ್ನಿವೇಶವನ್ನೂ ಪ್ರಸಂಗದಲ್ಲಿ ಅಳವಡಿಸಿಕೊಳ್ಳಲಾಗಿತ್ತು.



ಈ ಪ್ರಸಂಗದಲ್ಲಿ ಪ್ರಾರಂಭದಿಂದ ಸುಮಾರು ಮುಕ್ಕಾಲು ಪಾಲು ಕಥಾಭಾಗದವರೆಗೆ ರಂಗಸ್ಥಳಕ್ಕೆ ಪ್ರವೇಶಿಸಿದ ಯಾವೊಂದು ವೇಷವೂ ನಿರ್ಗಮಿಸುವುದಿಲ್ಲ. ಆದ ಕಾರಣ ರಂಗಸ್ಥಳ ತುಂಬೆಲ್ಲ ವೈವಿಧ್ಯಮಯವಾದ ವೇಷಗಳು ರಾರಾಜಿಸುತ್ತವೆ. ವಿಶ್ವಬ್ಯಾಂಕ್, ಐಎಂಎಫ್ ಮತ್ತು ವಿಶ್ವ ವ್ಯಾಪಾರ ಸಂಸ್ಥೆಗಳನ್ನು ಪ್ರತಿನಿಧಿಸುವ ವೇಷಗಳು ತೆಂಕುತಿಟ್ಟಿನ ವಿವಿಧ ಪ್ರಕಾರದ ಬಣ್ಣದ ವೇಷಗಳಾದ ಕಾರಣ ರಂಗಸ್ಥಳದ ಮೆರುಗು ಹೆಚ್ಚುತ್ತದೆ. 'ಭರತನಾಟ್ಯ' ಸಂದರ್ಭದಲ್ಲಿ ಓರ್ವ ವಿದೂಷಕ ಮತ್ತು ಸ್ತ್ರೀ ವೇಷದ ಪ್ರವೇಶವಾಗುವುದರೊಂದಿಗೆ ತೆಂಕು ತಿಟ್ಟು ಯಕ್ಷಗಾನದ ಎಲ್ಲ ಪ್ರಕಾರದ ವೇಷಗಳು ರಂಸ್ಥಳದಲ್ಲಿ ತುಂಬಿಕೊಳ್ಳುತ್ತವೆ. ಸ್ತ್ರೀ ವೇಷದ ನೃತ್ಯಕ್ಕೆ ಕಾಳಿಂಗ ನಾವಡರಿಂದ ಪ್ರಖ್ಯಾತಿ ಪಡೆದ 'ಎಲ್ಲೆಲ್ಲು ಸೊಬಗಿದೆ" ಪದ್ಯವನ್ನು ಬಳಸಲಾಗಿತ್ತು. ಬಡಗು ತಿಟ್ಟು ಯಕ್ಷಗಾನದಲ್ಲಿ ಭಾರೀ ಜನಪ್ರಿಯತೆ ಗಳಿಸಿದ ಈ ಹಾಡನ್ನು ಸಮಯದ ಅಭಾವದ ಮಧ್ಯೆಯೂ ಭಾಗವತರಾದ ಲಕ್ಷ್ಮೀನಾರಾಯಣ ಕಲ್ಬಾರ್ ಅವರು ತೆಂಕು ಶೈಲಿಯಲ್ಲಿ ಹಾಡಿದರು. ಪ್ರೇಕ್ಷಕರಲ್ಲಿ ಕನ್ನಡೇತರರೂ ಬಹುಸಂಖ್ಯೆಯಲ್ಲಿದ್ದ ಕಾರಣ ಪ್ರಸಂಗವನ್ನು ಈ ರೀತಿ ಸಂಯೋಜಿಸಿದ್ದು ಸಮಯೋಚಿತ ಎನಿಸಿತ್ತು. ಉಳಿದಂತೆ ವೇಷಭೂಷಣಗಳೆಲ್ಲ ಮಾಮೂಲು ತೆಂಕು ತಿಟ್ಟಿನ ಶೈಲಿಯದ್ದು. ಬಣ್ಣಗಾರಿಕೆಯಲ್ಲಿ ಬಿಟಾನಿ ಪಾತ್ರ ಧರಿಸಿದ್ದ ಮೂಕಳ ಕೃಷ್ಣ ಭಟ್ ಅವರು ಹಣೆಯ ಮೇಲೆ ಇಂಗ್ಲೆಂಡ್‌ನ ರಾಷ್ಟ್ರಧ್ವಜ ಚಿತ್ರಿಸಿಕೊಂಡಿದ್ದರು.

ಈ ಯಕ್ಷಗಾನವನ್ನು ಅಖಿಲ ಭಾರತ ವಿಮಾ ನೌಕರರ ಸಂಘದ 20ನೇ ಸಮ್ಮೇಳನದ ಅಂಗವಾಗಿ ಪ್ರದರ್ಶಿಸಲಾಗಿತ್ತು. ಜಾಗತೀಕರಣ ಅಭಿವೃದ್ಧಿಶೀಲ ರಾಷ್ಟ್ರಗಳ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಬದುಕಿನ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು ಈ ಪ್ರದರ್ಶನದ ಮೂಲ ಉದ್ದೇಶ ಎನ್ನುತ್ತಾರೆ ಪ್ರಸಂಗದ ಪರಿಕಲ್ಪನೆ ಮತ್ತು ಕಥಾ ವಸ್ತುವನ್ನು ಒದಗಿಸಿದ ಎನ್.ಗೋಪಾಲ ಕುಂಬ್ಳೆ ಅವರು.

ಈ ಹಿಂದೆ ಏಯ್ಡ್ಸ್, ಪರಿಸರ ಸಂರಕ್ಷಣೆ, ಸಾಕ್ಷರತೆ ಇತ್ಯಾದಿ ಸಾಮಾಜಿಕ ವಸ್ತುಗಳ ಮೇಲೆ ಯಕ್ಷಗಾನ ಪ್ರದರ್ಶನ ನಡೆದಿತ್ತು. ಜಾಗತೀಕರಣದ ಮೇಲೆ ಯಕ್ಷಗಾನವೊಂದು ಪ್ರದರ್ಶನಗೊಂಡದ್ದು ಇದೇ ಮೊದಲು. ಉಳಿದ ಎಲ್ಲ ಸಾಮಾಜಿಕ ವಸ್ತುಗಳಿಗಿಂತಲು ಜಾಗತೀಕರಣದ ವಿಚಾರವನ್ನು ಯಕ್ಷಗಾನದ ಚೌಕಟ್ಟಿಗೆ ಅಳವಡಿಸುವುದು ಕಷ್ಟ. ಅದನ್ನು ಸಾಧ್ಯವಾಗಿಸಿದ ಕೀರ್ತಿ ಕರಾವಳಿ ಕಲಾವಿದರಿಗೆ ಸಲ್ಲುತ್ತದೆ.

- ಎ.ಎನ್.

ಕಣ್ಮನ ತಣಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು.....

ಅಖಿಲ ಭಾರತ ವಿಮಾ ನೌಕರರ ಸಂಘದ 20ನೇ ಮಹಾ ಸಮ್ಮೇಳನದ ಅಂಗವಾಗಿ ಫೆಬ್ರವರಿ 20 ರಿಂದ 22 ರವರೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ದಿನವಿಡೀ ವಿಚಾರ ಮಂಥನದಲ್ಲಿ ಭಾಗಿಯಾದ ಪ್ರತಿನಿಧಿ ಮತ್ತು ವೀಕ್ಷಕ ಸಂಗಾತಿಗಳಿಗೆ ಒಂದಿಷ್ಟು ಆಹ್ಲಾದಕರ ಬದಲಾವಣೆ ಒದಗಿಸುವುದು ಮಾತ್ರವಲ್ಲ ಅವರಿಗೆ ಕರ್ನಾಟಕದ ವಿವಿಧ ಕಲಾಪ್ರಕಾರಗಳನ್ನು ಪರಿಚಯಿಸುವ ಉದ್ದೇಶ ಒಂದೆಡೆಯಾದರೆ ಸ್ಥಳೀಯ ಸಂಗಾತಿಗಳ ಪ್ರತಿಭೆಯನ್ನು ಹೊರತರುವ ಉದ್ದೇಶ ಇನ್ನೊಂದೆಡೆ. ಹಾಗಾಗಿ ಹೊರಗಿನ ಕಲಾವಿದರಲ್ಲದೆ ವಿಮಾ ನೌಕರರನ್ನೂ ಈ ಕಾರ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿತ್ತು.

ಮೊದಲಿಗೆ ಬೆಂಗಳೂರಿನ ಸಂಗಾತಿಗಳ ಮಕ್ಕಳಿಂದ ನೃತ್ಯರೂಪಕ 'ಹಲಗಲಿಯ ಹೋರಾಟ' ಪ್ರಸ್ತುತಪಡಿಸಲಾಯ್ತು. ಧಾರವಾಢದ ಮುಧೋಳ ಬಳಿಯ ಹಲಗಲಿಯಲ್ಲಿಯ ಬೇಡರು ಬ್ರಿಟಿಷರಿಗೆ ಶರಣಾಗದೆ ಶಸ್ತ್ರಾಸ್ತ್ರ ಹೋರಾಟ ನಡೆಸಿದ್ದನ್ನು ಮಕ್ಕಳು ಸುಂದರವಾಗಿ ನಿರೂಪಿಸಿದರು. ಸ್ವಯಂ ಪ್ರೇರಿತರಾಗಿ, ನಿರ್ಭಯವಾಗಿ ಮಕ್ಕಳು ಅಭಿನಯಿಸಿದ ರೀತಿ ಎಲ್ಲರ ಮೆಚ್ಚುಗೆ ಗಳಿಸಿತು.



ನಂತರ ನಗರದ ಶಿವಪ್ರಿಯ ತಂಡದವರಿಂದ ಭರತನಾಟ್ಯ ಕಾರ್ಯಕ್ರಮವಿದ್ದಿತು. ಭರತನಾಟ್ಯ ಕರ್ನಾಟಕದ ಅತ್ಯಂತ ಪ್ರಾಚೀನ ನೃತ್ಯ ಪ್ರಾಕಾರ. ಈ ಶಾಸ್ತ್ರೀಯ ಕಲಾ ಮಾಧ್ಯಮದಲ್ಲಿ ಯುದ್ಧದ ದುಷ್ಪರಿಣಾಮಗಳು ಮತ್ತು ಶಾಂತಿಯ ಮಹತ್ವ ಸಾರುವ ರೂಪಕವನ್ನು ಪ್ರಸ್ತುತ ಪಡಿಸಲಾಯ್ತು. ತಂಡದ ಪ್ರಮುಖ ಕಲಾವಿದರಾದ ಶಮಾ ಮತ್ತು ಸಂಜಯರ ಅಭಿನಯ ಎಲ್ಲರ ಮನಮುಟ್ಟುವಂತಿತ್ತು. ಸುಂದರ ನೆಮ್ಮದಿಯ ಬದುಕು ನಡೆಸುತ್ತಿದ್ದಾಗ ಯುದ್ಧದ ಕರೆ ಬಂದಿತೆಂದು ಪುರುಷರು ಯುದ್ಧಕ್ಕೆ ತೆರಳುತ್ತಾರೆ. ಅಮ್ಮ ಈ ಯುದ್ಧವೇಕೆ ಬೇಕು? ಅಪ್ಪ ಏಕೆ ಹೋಗಬೇಕೆಂದು ಪ್ರಶ್ನಿಸುವ ಪುಟಾಣಿ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಲಾಗದೆ ತಾಯಂದಿರು ತತ್ತರಿಸುತ್ತಾರೆ. ಯುದ್ಧಾನಂತರ ಆದ ಅನಾಹುತಗಳನ್ನು ಗಮನಿಸಿದವರೆಲ್ಲ ಕೊನೆಗೆ "ಯುದ್ಧದಲ್ಲಿ ಯಾರಿಗೂ ಗೆಲುವೆಂಬುದಿಲ್ಲ; ಅದು ಎಂದೆಂದಿಗೂ ಸೋಲೆ ಏಕೆಂದರೆ ಯುದ್ಧವೆಂದರೆ ವಿನಾಶ'' ಎಂದು ಎಚ್ಚೆತ್ತುಕೊಳ್ಳುತ್ತಾರೆ. ಯುದ್ಧ ಬೇಡ, ಶಾಂತಿ ಬೇಕು ಎಂಬ ಘೋಷಣೆಯೊಂದಿಗೆ ನೃತ್ಯರೂಪಕ ಮುಗಿದಾಗ ಪ್ರೇಕ್ಷಕರೆಲ್ಲರ ಮೈನವಿರೆದ್ದಿತು. ಶಾಸ್ತ್ರೀಯ ಕಲಾಪ್ರಾಕಾರವೊಂದರಲ್ಲಿ ಪ್ರಸ್ತುತ ವಿಚಾರವನ್ನಳವಡಿಸಿಕೊಂಡ ರೀತಿ ಶ್ಲಾಘನೀಯ.

ಎರಡನೆಯ ದಿನದಂದು ವಿಮಾ ನೌಕರ ಸಂಗಾತಿಗಳೇ ಪ್ರಸ್ತುತಪಡಿಸಿದ ರಾಷ್ಟ್ರೀಯ ಭಾವೈಕ್ಯತಾ ಕಾರ್ಯಕ್ರಮ ಎಲ್ಲರ ಮೆಚ್ಚುಗೆ ಗಳಿಸಿತು. ವಿವಿಧ ಭಾಷೆಯ ರಾಷ್ಟ್ರೀಯ ಭಾವೈಕ್ಯತಾ ಗೀತೆಗಳನ್ನು ಆಯಾ ಪ್ರದೇಶದ ಉಡುಪು ಧರಿಸಿ ಪ್ರಸ್ತುತಪಡಿಸಿದ್ದು ಇಡೀ ಭಾರತ ದರ್ಶನ ಮಾಡಿಸಿದಂತಿತ್ತು.

ಮೂರನೆಯ ದಿನದಂದು ಭ್ರಮರಿ ತಂಡದವರು ಪ್ರಸ್ತುತಪಡಿಸಿದ "ಸ್ವಾಗತ ಸುಸ್ವಾಗತ" ನೃತ್ಯರೂಪಕ ಇಡೀ ಕರ್ನಾಟಕ ದರ್ಶನ ಮಾಡಿಸಿತು. ಕರ್ನಾಟಕ ವನ್ನಾಳಿದ ವಿವಿಧ ರಾಜ ವಂಶಗಳ ಇತಿಹಾಸ, ಭಕ್ತಿ ಪರಂಪರೆ, ಶಿಲ್ಪ, ಕಲೆ ಇವುಗಳನ್ನು ನೋಡುಗರ ಮುಂದೆ ತೆರೆದಿಟ್ಟ ಅದು ಕರ್ನಾಟಕದುದ್ದಗಲಕ್ಕೆ ಎಲ್ಲರನ್ನೂ ಪಯಣಿಸುವಂತೆ ಮಾಡಿತ್ತು. ಕರ್ನಾಟಕದ ವಿವಿಧ ಜಾನಪದ ಪ್ರಾಕಾರಗಳಾದ ಪಟ ಕುಣಿತ, ನಂದಿ ಕೋಲು ಡೊಳ್ಳು ಕುಣಿತ, ಯಕ್ಷಗಾನ, ತೊಗಲು ಬೊಂಬೆಯಾಟ ಇವು ಕರ್ನಾಟಕದ ಶ್ರೀಮಂತ ಕಲೆಯನ್ನು ತೋರಿಸಿತು. ಇದಲ್ಲದೆ ನೃತ್ಯ ಪ್ರಾಕಾರಗಳಾದ ಭರತ ನಾಟ್ಯ ಮತ್ತು ಕಥಕ್‌ಗಳನ್ನು ಸಮರ್ಥವಾಗಿ ಬಳಸಿಕೊಳ್ಳಲಾಗಿತ್ತು. ಕಥಕ್ ಕರ್ನಾಟಕದ ಶುದ್ಧ ನೃತ್ಯ ಪ್ರಾಕಾರವಲ್ಲದಿದ್ದರೂ ಮುಸ್ಲಿಂ ರಾಜರ ಆಳ್ವಿಕೆಯಲ್ಲಿ ನಮ್ಮ ಸಂಸ್ಕೃತಿಯಲ್ಲಿ ಮಿಳಿತವಾಗಿದ್ದುದನ್ನು ಅದು ಸುಂದರವಾಗಿ ನಿರೂಪಿಸಿತು. ಬೆಂಗಳೂರಿನ ಖ್ಯಾತ ಕರಗದ ಆರಂಭದಲ್ಲಿ ಮುಸ್ಲೀಮರು ದೇವಾಲಯಕ್ಕೆ ಚಾಲನೆ ನೀಡುವಂತಹ ಪದ್ಧತಿಗಳ ಮೂಲಕ ಕರ್ನಾಟಕದ ಕೋಮು ಸೌಹಾರ್ದವನ್ನೂ ಚಿತ್ರಿಸಿತು. ಕರ್ನಾಟಕದ ವಿವಿಧ ಪ್ರವಾಸಿ ಕೇಂದ್ರಗಳಾದ ಬೇಲೂರು, ಹಳೆಬೀಡು, ಶ್ರವಣಬೆಳಗೊಳ, ಹಲವು ಪಿರಿಧಾಮಗಳು, ಸಮುದ್ರ ತೀರ, ದೇವಾಲಯಗಳು ಈ ಎಲ್ಲವನ್ನೂ ಸಮರ್ಥವಾಗಿ ನಿರೂಪಿಸಲಾಗಿತ್ತು. ಕಾರ್ಯಕ್ರಮದುದ್ದಕ್ಕೂ ಕಲಾವಿದರ ಲವಲವಿಕೆಯ ಚಲನವಲನ ನೋಡುಗರನ್ನು ದಿಗ್ಭ್ರಮೆಗೊಳಿಸಿತು.

ಈ ಮೂರು ದಿನಗಳಲ್ಲಿ ಸಮ್ಮೇಳನಕ್ಕೆ ಮುನ್ನ ನಡೆಸಿದ ಸಮೂಹಗಾಯನ ಸ್ಪರ್ಧೆಯ ವಿಜೇತರು ಸಮೂಹಗಾನ ಪ್ರಸ್ತುತಪಡಿಸಿದರು.



ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ದೇಶ ಕೇವಲ ಮನರಂಜನೆಯಲ್ಲ; ಬೌದ್ಧಿಕ ವಿಕಾಸ ಮತ್ತು ಅರಿವು ಕೂಡ ಎಂಬುದನ್ನು ಈ ಎಲ್ಲ ಕಾರ್ಯಕ್ರಮಗಳೂ ಸಮರ್ಥವಾಗಿ ಶ್ರುತಪಡಿಸಿದವು. ಕಾರ್ಯಕ್ರಮಕ್ಕೆ ದೊರಕಿದ ಅಪಾರ ಮೆಚ್ಚುಗೆ, ವೀಕ್ಷಕರು ಮತ್ತೆ ಮತ್ತೆ ಅದನ್ನು ಮೆಲುಕು ಹಾಕಿದ ರೀತಿ ಅವರು ಸಮ್ಮೇಳನದ ನಂತರ ತಮ್ಮ ತಮ್ಮ ಸ್ಥಳಕ್ಕೆ ತೆರಳುವಾಗ ತಮ್ಮೊಡನೆ ಕರ್ನಾಟಕದ ಕಂಪನ್ನೊಯ್ದಿದ್ದಾರೆಂಬುದಕ್ಕೆ ಸಾಕ್ಷಿ. ಸಮ್ಮೇಳನಕ್ಕೆ ಈ ಕಾರ್ಯಕ್ರಮಗಳು ಪೂರಕವಾಗಿದ್ದುವೆಂಬ ಬಗ್ಗೆ ಯಾವುದೇ ಅನುಮಾನವಿಲ್ಲ.

ಎಸ್.ಕೆ.ಗೀತಾ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH